24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 76 | ನವದೆಹಲಿ | ಬೆಲೆ ₹10 | ಸೆಪ್ಟಂಬರ್ 11 2026 ಶುಕ್ರವಾರ

## ಒಳಪುಟಗಳಲ್ಲಿ

ಸುಲಭ, ನಗದುರಹಿತ ಪ್ರಯಾಣಕ್ಕೆ ನಮ್ಮ ಬಿಎಂಟಿಸಿ ಮೊಬೈಲ್ ಆಪ್ 2.0ಗೆ ಸಿಎಂ ವಿಧ್ಯುಕ್ತ ಚಾಲನೆ - ಪು.5

ಕಲಬುರಗಿ ಕಾರಾಗೃಹದ ಮೇಲೆ ಪೊಲೀಸರ ದಾಳಿ: ಕೈದಿ ಬಳಿ ಮೊಬೈಲ್ ಪತ್ತೆ - ಪು.6

ಕಲಬುರಗಿ ಕಾರಾಗೃಹದ ಮೇಲೆ ಪೊಲೀಸರ ದಾಳಿ: ಕೈದಿ ಬಳಿ ಮೊಬೈಲ್ ಪತ್ತೆ - ಪು.7

# ನಾಳೆಯಿಂದ 2 ದಿನ ಬ್ರಿಕ್ಸ್ ನಾಯಕರ 18ನೇ ಶೃಂಗಸಭೆಗೆ ದೆಹಲಿ ಸಜ್ಜು

**ಭೌಗೋಳಿಕ, ರಾಜಕೀಯ ಉದ್ವಿಗ್ನತೆ, ಆರ್ಥಿಕ ಅನಿಶ್ಚಿತತೆ ನಡುವೆ ಮಹತ್ವ ಪಡೆದುಕೊಂಡ ಸಭೆ**

**ಪುಟಿನ್, ಮಸೂದ್ ಪೆಜೆಶ್ಕಿಯನ್, ಕ್ಸಿ ಜಿನ್‌ಪಿಂಗ್ ಮತ್ತಿತರ ನಾಯಕರು ಭಾಗಿ**

**ನವದೆಹಲಿ, ಸೆ.10:** 18ನೇ ಬ್ರಿಕ್ಸ್ ನಾಯಕರ ಶೃಂಗಸಭೆಯನ್ನು ಸೆಪ್ಟೆಂಬರ್ 12 ಮತ್ತು 13ರಂದು ನವದೆಹಲಿಯಲ್ಲಿ ಆಯೋಜಿಸಲು ಭಾರತ ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸಮ್ಮೇಳನ ಸಂಬಂಧ ಗುರುವಾರ ಮಾತನಾಡಿದ ಅವರು, ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು, ಆರ್ಥಿಕ ಅನಿಶ್ಚಿತ ಪರಿಸ್ಥಿತಿ ಮತ್ತು ಜಾಗತಿಕ ಬಹುಪಕ್ಷೀಯ ಕ್ರಮದ ಸುಧಾರಣೆಗೆ ಹೆಚ್ಚುತ್ತಿರುವ ಬೇಡಿಕೆಗಳ ಹಿನ್ನೆಲೆಯಲ್ಲಿ ಪ್ರಮುಖ ಉದಯೋನ್ಮುಖ ಆರ್ಥಿಕತೆಗಳ ಸಭೆಯು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುವ ನಿರೀಕ್ಷೆಯಿದೆ ಎಂದರು.



ಶೃಂಗಸಭೆಯ ಪೂರ್ವವೀಕ್ಷಣೆ ವೀಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಮೋದಿ, "ಬ್ರಿಕ್ಸ್ 2026ಕ್ಕೆ ಎಲ್ಲವೂ ಸಿದ್ಧವಾಗಿದೆ" ಎಂದು ಹೇಳಿದರು. ರಾಷ್ಟ್ರ ರಾಜಧಾನಿಯ ಭಾರತ್ ಮಂಡಪಂ ಸಮಾವೇಶ ಕೇಂದ್ರದಲ್ಲಿ ಎರಡು ದಿನಗಳ ಸಭೆಗೆ ಸಿದ್ಧತೆ ತೀವ್ರಗೊಂಡಿದೆ. ಶೃಂಗಸಭೆಯಲ್ಲಿ 11 ಸದಸ್ಯ ರಾಷ್ಟ್ರಗಳು ಮತ್ತು 10 ಪಾಲುದಾರ ರಾಷ್ಟ್ರಗಳು ಪಾಲ್ಗೊಳ್ಳಲಿವೆ. ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಅವರೊಂದಿಗೆ ಮೋದಿ ಅವರ ಸಭೆಗಳು ಪ್ರಮುಖ ಕಾರ್ಯಕ್ರಮಗಳಲ್ಲಿ ಸೇರಿವೆ. ಶೃಂಗಸಭೆಯ ಚರ್ಚೆಗಳು ವ್ಯಾಪಾರ, ಡಿಜಿಟಲ್ ತಂತ್ರಜ್ಞಾನ, ಹಣಕಾಸು, ಇಂಧನ ಭದ್ರತೆ ಮತ್ತು ಜಾಗತಿಕ ಆಡಳಿತ ಸುಧಾರಣೆಯಾದ್ಯಂತ ಅಂತರರಾಷ್ಟ್ರೀಯ ಸಹಕಾರವನ್ನು ಮುನ್ನಡೆಸುವತ್ತ ಗಮನಹರಿಸುತ್ತವೆ.

ಭಾರತದ 2026ರ ಬ್ರಿಕ್ಸ್ ಅಧ್ಯಕ್ಷತೆ ರಫ್ತು ವಿಸ್ತರಣೆ, ಹೂಡಿಕೆ ಆಕರ್ಷಣೆ, ಉತ್ಪಾದನೆ ಮತ್ತು ತಂತ್ರಜ್ಞಾನ ಪಾಲುದಾರಿಕೆಗಳನ್ನು ಬಲಪಡಿಸಲು, ಪೂರೈಕೆ ಸರಪಳಿಯನ್ನು ವೈವಿಧ್ಯಗೊಳಿಸಲು ಮತ್ತು ಜಾಗತಿಕ ಆರ್ಥಿಕತೆಯಲ್ಲಿ ಬ್ರಿಕ್ಸ್ ಪ್ರಭಾವವನ್ನು ಹೆಚ್ಚಿಸಲು ಕಾರ್ಯತಂತ್ರದ ಅವಕಾಶ ನೀಡುತ್ತದೆ.

### ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಪಾಲ್ಗೊಳ್ಳುವಿಕೆ ದೃಢ



ಚೀನಾದ ಅಧ್ಯಕ್ಷ ಕ್ಸಿ ಜಿನ್ಪಿಂಗ್ ನವದೆಹಲಿಯಲ್ಲಿ ನಡೆಯಲಿರುವ 18 ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ಈ ವಾರಾಂತ್ಯದಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಸರ್ಕಾರ ದೃಢಪಡಿಸಿದೆ, ಇದು ಭಾರೀ ರಾಜತಾಂತ್ರಿಕ ಅನಿಶ್ಚಿತತೆಯ ದಿನಗಳನ್ನು ಪರಿಣಾಮಕಾರಿಯಾಗಿ ಕೊನೆಗೊಳಿಸಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ. 2020 ರ ಗಾಲ್ವಾನ್ ಕಣಿವೆಯ ಗಡಿ ಘರ್ಷಣೆಯಲ್ಲಿ 20 ಭಾರತೀಯರು ಮತ್ತು ಅಪರಿಚಿತ ಸಂಖ್ಯೆಯ ಚೀನೀ ಸೈನಿಕರು ಸಾವನ್ನಪ್ಪಿದ ನಂತರ ದ್ವಿಪಕ್ಷೀಯ ಸಂಬಂಧಗಳಲ್ಲಿ ಶೀತಲತೆಯ ನಂತರ, ಏಳು ವರ್ಷಗಳಲ್ಲಿ ಕ್ಸಿ ಅವರ ಮೊದಲ ಭಾರತ ಭೇಟಿ ಇದಾಗಿದೆ. ಕ್ಸಿ ಕೊನೆಯ ಬಾರಿಗೆ ಭಾರತಕ್ಕೆ ಭೇಟಿ ನೀಡಿದ್ದು 2019 ರಲ್ಲಿ ಚೆನ್ನೈ ಬಳಿಯ ಮಾಮಲ್ಲಪುರಂನಲ್ಲಿ ಪ್ರಧಾನಿ ನರೇಂದ್ರ ಮೋದಿ ಜೊತೆ ಅನೌಪಚಾರಿಕ ಶೃಂಗಸಭೆಗಾಗಿ.

# ಕರ್ನಾಟಕದ ಸಮಗ್ರ ಅಭಿವೃದ್ಧಿಯೇ ಸರ್ಕಾರದ ಗುರಿ: ಸಿಎಂ ಡಿ.ಕೆ.ಶಿವಕುಮಾರ್

**ದೃಢ ಕರ್ನಾಟಕದ ಸಂಕಲ್ಪ, ಶತಕದ ಪಥ, ಪ್ರಗತಿರಥ ಕಾರ್ಯಕ್ರಮದಲ್ಲಿ ಹೇಳಿಕೆ: ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳವು**

**ಬೆಂಗಳೂರು, ಸೆ.10:** ರಾಜ್ಯದ 7 ಕೋಟಿ ಜನರಿಗೆ ಕಾಂಗ್ರೆಸ್ ಸರ್ಕಾರ ಸೇರಿದೆ. ರಾಜ್ಯವನ್ನು ಸಮಗ್ರ ಅಭಿವೃದ್ಧಿ ಮಾಡುವುದೇ ನಮ್ಮ ಗುರಿ. ನಾಡನ್ನು ಪ್ರಗತಿಪಥದತ್ತ ಕೊಂಡೊಯ್ಯಲು ನಿಮ್ಮ ಮುಂದೆ ನಿಂತಿದ್ದೇನೆ. ರಾಜ್ಯದ ಜನರಿಗೆ ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇವೆ. ಕೊಟ್ಟ ಮಾತಿನಂತೆ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿಯೋಜನೆ, ಯುವನಿಧಿ ಯೋಜನೆಯನ್ನು ಜಾರಿ ಮಾಡಿದ್ದೇವೆ. ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಘೋಷಿಸಿದರು.

ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ಯಶಸ್ವಿಯಾಗಿ 100 ದಿನಗಳ ಆಡಳಿತವನ್ನು ಪೂರೈಸಿದ ಸಂದರ್ಭದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ದೃಢ ಕರ್ನಾಟಕದ ಸಂಕಲ್ಪ, ಶತಕದ ಪಥ, ಪ್ರಗತಿ ರಥ ಕಾರ್ಯಕ್ರಮದಲ್ಲಿ ಮಾತನಾಡಿ, ನಾವು ಐದು ಗ್ಯಾರಂಟಿಗಳನ್ನು ಕೊಟ್ಟು ಪ್ರತಿಜ್ಞೆ ಮಾಡಿದ್ದೇವೆ. ಗ್ಯಾರಂಟಿಯಿಂದ ನಿಮ್ಮೆಲ್ಲರ ಬದುಕಿನಲ್ಲಿ ಬದಲಾವಣೆ ತಂದಿದೆ. ಇದು ನೂರು ದಿನದ ಸರ್ಕಾರದ ಆಚರಣೆ ಅಲ್ಲ. ನಾನು ಹಾಗೂ ಸಿದ್ದರಾಮಯ್ಯ ನಿಮಗೆ ಭರವಸೆ ಕೊಟ್ಟಿದ್ದೆವು, ನುಡಿದಂತೆ ನಡೆದು ಆತ್ಮವಿಶ್ವಾಸಕ್ಕೆ ದೊಡ್ಡ ಶಕ್ತಿ ತುಂಬಿದ್ದೇವೆ ಎಂದರು.

**ಎಲ್ಲರ ಸಹಕಾರದಿಂದ ಒಳ್ಳೆಯ ಕೆಲಸ ಸಾಧ್ಯವಾಗಿದೆ:** ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರತಿಪಕ್ಷಗಳು ಟೀಕೆ ಮಾಡಿದ್ದವು. ಕೇಂದ್ರ ಸರ್ಕಾರ ಕೂಡ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿತ್ತು. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿ ಆಗುತ್ತದೆ ಎಂದಿದ್ದರು. ಈಗ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕೇಂದ್ರ ಸರ್ಕಾರ, ಬಿಜೆಪಿ ಸರ್ಕಾರದ ರಾಜ್ಯಗಳು ಅನುಸರಿಸುತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಯೋಜನೆಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಗ್ಯಾರಂಟಿ ಯೋಜನೆ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತವಾಗುತ್ತಿದೆ. 5 ಗ್ಯಾರಂಟಿಗಳನ್ನು ಜನರಿಗೆ ತಲುಪಿಸಿದ್ದೇವೆ ಎಂಬ ಆತ್ಮವಿಶ್ವಾಸ ಇದೆ. ಇದಕ್ಕೆಲ್ಲಾ ನೀವು ಕೊಟ್ಟ ಶಕ್ತಿ, ಇದರಿಂದ ಉತ್ತಮ ಕೆಲಸ ಮಾಡುತ್ತಿದ್ದೇವೆ. ನಮ್ಮ ಎಲ್ಲ ಸಚಿವರ ಸಹಕಾರದಿಂದ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಗಿದೆ ಎಂದು



### ವಿವಿಧ ಸಚಿವರಿಗೆ ಹಲವು ಜವಾಬ್ದಾರಿ

ಡಾ.ಪರಮೇಶ್ವರ್ ಅವರಿಗೆ ಮತ್ತೊಂದು ಜವಾಬ್ದಾರಿ ಕೊಟ್ಟಿದ್ದೇವೆ. ಭಾರತ್ ಜೋಡೋ ಸಂಘಗಳ ಸ್ಥಾಪನೆ ಇದು ನನ್ನ ಕನಸು. ನಶೆಮುಕ್ತ ಕರ್ನಾಟಕ ಮಾಡೋದಕ್ಕೆ ನಿರ್ಧಾರ ಮಾಡಿದ್ದೇವೆ. ಸಚಿವ ಪ್ರಿಯಾಂಕ್ ಖರ್ಗೆ ಜತೆ ಮಾತಾಡಿದ್ದೇವೆ. ಪ್ರತಿ ಗ್ರಾ.ಪಂ.ನಲ್ಲಿ ಯುವಕ-ಯುವತಿಯರು ಒಗ್ಗಟ್ಟಾಗಿ ಸೇರಬೇಕು. 10 ಸಾವಿರ ಭಾರತ್ ಜೋಡೋ ಯುವ ಸಂಘಟನೆ ಮಾಡಿದ್ದೇವೆ. ಯುವಕರಿಗೆ ಉದ್ಯೋಗ ಸೇತು ಹೊಸ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಅವರು ಹೇಳಿದರು.ನನ್ನ ಬದುಕು ಸಾರ್ಥಕವಾಗುತ್ತಿದೆ ಎಂದ ಸಿಎಂ, ನನ್ನ ಬದುಕು ಸಾರ್ಥಕವಾಗುತ್ತಿದೆ. ತುಂಗಭದ್ರ, ಕಾವೇರಿ, ಕೃಷ್ಣ ನದಿ ಜೋಡಣೆಗೆ ಮುಂದಾಗಿದ್ದೇವೆ. ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಜೊತೆ ಚರ್ಚೆ ಮಾಡಿದ್ದೇನೆ. ತುಂಗಭದ್ರಾ ಡ್ಯಾಮ್‌ನ ಎಲ್ಲ ಗೇಟ್‌ಗಳನ್ನು ಬದಲಿಸಿದ್ದೇವೆ. ಮೇಕೆದಾಟು ಕರ್ನಾಟಕದ ಯೋಜನೆ ಎಂಬ ತೀರ್ಪು ಬಂದಿದೆ. ತಮಿಳುನಾಡಿನ ಮುಖ್ಯಮಂತ್ರಿ ವಿಜಯ್‌ಗೆ ಜ್ಞಾನ ಇದೆ. ಮುಂದೆ ಎಲ್ಲಾ ಜವಾಬ್ದಾರಿ ಚಲುವರಾಯಸ್ವಾಮಿಗೆ ಕೊಟ್ಟಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ನುಡಿದರು.

### ಕರ್ನಾಟಕದ ಮಾದರಿ ಈಗ ದೇಶಕ್ಕೇ ಮಾದರಿ

ನಾನೊಬ್ಬನೇ ರಥ ಎಳೆಯುತ್ತಿಲ್ಲ, ಇದು ಜನತೆಯ ಸರ್ಕಾರ. ಶತಕದ ಪಥದಲ್ಲಿ ಕರ್ನಾಟಕ ಹೆಜ್ಜೆ ಹಾಕುತ್ತಿದೆ. ನನ್ನ ಸಹೋದ್ಯೋಗಿಗಳು, 224 ಶಾಸಕರು 75 ಎಂಎಲ್‌ಸಿಗಳು ರಾಜ್ಯದ ಎಲ್ಲಾ ಸಂಸದರು ಒಟ್ಟಾಗಿ ದುಡಿಯುವ ಕೆಲಸ ಮಾಡುತ್ತೇವೆ. ಯಾರು ಸಹಕಾರ ಕೊಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ, ರಾಜ್ಯದ ಹಿತಸಾಕ್ತಿಗೆ ಕೆಲಸ ಮಾಡುತ್ತೇವೆ ಎಂದಿದ್ದಾರೆ. ಕರ್ನಾಟಕ ಮಾಡೆಲ್ ದೇಶದ ಮಾಡೆಲ್ ಎಂದ ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ ಸಾರಿಗೆ ಸಚಿವರಾಗಿದ್ದಾಗ ಶಕ್ತಿ ಯೋಜನೆ ಜಾರಿ ಮಾಡಲಾಗಿದೆ. ಈಗ ಸುರೇಶ್‌ಗೆ ಸ್ಮಾರ್ಟ್ ಕಾರ್ಡ್ ಕೊಡುವ ಹೊಣೆ ವಹಿಸಿದ್ದೇವೆ. ಉದ್ಯೋಗದ ಸೃಷ್ಟಿ ಮಾಡುವುದಕ್ಕಾಗಿ ಯುವನಿಧಿ ಜಾರಿ ಮಾಡಿದೆವು ನಮ್ಮ ಯೋಜನೆಗಳನ್ನು ಬಿಜೆಪಿಯವರು ಕಾಪಿ ಮಾಡುತ್ತಿದ್ದಾರೆ. ಕರ್ನಾಟಕ ಮಾಡೆಲ್ ದೇಶದ ಮಾಡೆಲ್ ಆಗಿದೆ ಎಂದರು.

# ಹಿಂಸಾಚಾರ ಫ್ಯಾಷನ್ ಆಗಿದೆ ರಾಹುಲ್‌ಗಾಂಧಿ ಕಳವಳ



■ ಮಣಿಪುರಿ ಸಂಗೀತಗಾರ ಜೋಂಗ್‌ಥಮ್ ವಿಕ್ರಮ್‌ಸಿಂಗ್ ಸಾವಿಗೆ ಸಂತಾಪ

**ನವದೆಹಲಿ, ಸೆ.10:** ದೆಹಲಿಯಲ್ಲಿ ನಡೆದ ದಾಳಿಯಲ್ಲಿ 54 ವರ್ಷದ ಮಣಿಪುರಿ ಸಂಗೀತಗಾರ ಚೋಂಗ್ಥಮ್ ವಿಕ್ರಮ್ ಸಿಂಗ್ ಸಾವು ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ಇದು ಕೇವಲ ಒಬ್ಬ ಯುವಕನ ಹತ್ಯೆಯಲ್ಲ, ಮಣಿಪುರ ಜನತೆಗೆ ದುರಂತವಾಗಿದೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್‌ಗಾಂಧಿ ಆತಂಕ ವ್ಯಕ್ತಪಡಿಸಿದರು. ನವದೆಹಲಿಯ ಸನ್‌ಲೈಟ್ ಕಾಲನಿಯ ಕಿಲೋಕರ್ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಹಲ್ಲೆಯಲ್ಲಿ ಮೃತಪಟ್ಟ ಸಂಗೀತಗಾರ ಚೋಂಗ್‌ಥಮ್ ವಿಕ್ರಮ್‌ಸಿಂಗ್ ಗೌರವಾರ್ಥವಾಗಿ ನಡೆದ ಸಂತಾಪ ಸಭೆಯಲ್ಲಿ ಮಾತನಾಡಿ, ಸಿಂಗ್ ಅವರ ಮೂಲದ ಕಾರಣದಿಂದಾಗಿ ದಾಳಿ ಮಾಡಲಾಗಿದೆ. ಈ ಘಟನೆ ಹಿಂಸೆ, ದ್ವೇಷ ಮತ್ತು ದುರಹಂಕಾರವನ್ನು ಪ್ರತಿಬಿಂಬಿಸುತ್ತದೆ ಎಂದರು. ಮಣಿಪುರದ ಜನರು ಈಗಾಗಲೇ ಅನೇಕ ದುರಂತಗಳನ್ನು ಕಂಡಿದ್ದಾರೆ. ಸಿಂಗ್ ಅವರನ್ನು ಕೊಲೆ ಮಾಡಲಾಗಿದೆಯೋ ಇಲ್ಲವೋ, ಈ ಘಟನೆಯಲ್ಲಿ ಹಿಂಸಾಚಾರ ನಡೆದಿದೆ ಎಂದು ರಾಹುಲ್ ಗಾಂಧಿ ಹೇಳಿದರು. ಅವರ ಪ್ರಕಾರ, ಯಾರಾದರೂ ಶಕ್ತಿಶಾಲಿಯಾಗಿದ್ದರೆ ಅವರು ಹಿಂಸೆಗೆ ಆಶ್ರಯಿಸಬಹುದು ಎಂಬ ಗ್ರಹಿಕೆ ಸಮಾಜದಲ್ಲಿ ಬೆಳೆಯುತ್ತಿದೆ. ಅಂತಹ ಚಿಂತನೆಯನ್ನು ಬಲವಾಗಿ ಖಂಡಿಸಿದ್ದು ಶಕ್ತಿಶಾಲಿಯಾಗಿರುವುದು ಯಾರಿಗೂ ಹಿಂಸೆಯ ಹಕ್ಕನ್ನು ನೀಡುವುದಿಲ್ಲ ಎಂದು ಹೇಳಿದರು.

ಈಶಾನ್ಯ ಪ್ರದೇಶದ ಜನರು ಮತ್ತು ಸಾಮಾನ್ಯ ನಾಗರಿಕರು ತಮ್ಮ ಪ್ರತಿಭೆಯ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು ಎಂದು ಅವರು ಮನವಿ ಮಾಡಿದರು. ಜನರು ತಮ್ಮ ಆಲೋಚನೆಗಳು ಮತ್ತು ತತ್ವಗಳ ಪರವಾಗಿ ನಿಲ್ಲಬೇಕು, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು. ಅಂತಹ ಕ್ರಿಯೆಗಳನ್ನು ಅವರು ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು ಎಂದು ರಾಹುಲ್ ಗಾಂಧಿ ಹೇಳಿದರು. ಇತ್ತೀಚಿನ ದಿನಗಳಲ್ಲಿ ಹಿಂಸಾಚಾರವು ಫ್ಯಾಷನ್ ಆಗಿ ಮಾರ್ಪಟ್ಟಿದೆ ಎಂದು ಹೇಳಿದರು.

ಪೊಲೀಸ್ ಎಫ್‌ಐಆರ್ ಪ್ರಕಾರ, ದಕ್ಷಿಣ ದೆಹಲಿಯ ಆಶ್ರಮ ಪ್ರದೇಶದಲ್ಲಿ ತಮ್ಮ ಮನೆಯ ಹೊರಗೆ ಕೆಲವರು ಗಲಾಟೆ ಮಾಡುತ್ತಿದ್ದಾರೆಂದು ಸಿಂಗ್ ಆಕ್ಷೇಪ ವ್ಯಕ್ತಪಡಿಸಿದ್ದರು. ಸೆ.7ರಂದು ಆರೋಪಿಗಳು ಕಟ್ಟಡಕ್ಕೆ ನುಗ್ಗಿ, ಸಿಂಗ್ ಮೇಲೆ ಹಲ್ಲೆ ನಡೆಸಿದ್ದಾರೆ. ನಂತರ ಸಿಂಗ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಬದುಕುಳಿಯಲಿಲ್ಲ.

# ಕೇಂದ್ರ ತಡೆಹಿಡಿದಿರುವ 2186 ಕೋಟಿ.ರೂ. ಅನುದಾನ ಬಿಡುಗಡೆಗೆ ಕೋರಿ ಸುಪ್ರೀಂ ಮೊರೆಹೋಗಲು ತೀರ್ಮಾನ

**ಬೆಂಗಳೂರು, ಸೆ.10:** 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಗ್ರಾಮಪಂಚಾಯತಿಗಳಿಗೆ ಬರಬೇಕಾದ 2186.20 ಕೋಟಿ ರೂ. ಅನುದಾನ ತಡೆಹಿಡಿದಿರುವ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋಗಲು ತೀರ್ಮಾನಿಸಲಾಗಿದೆ. ಕಚೇರಿಯಲ್ಲಿ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತು ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ, ಅನುದಾನ ಬಿಡುಗಡೆ ಮಾಡಲು ನಿರಾಕರಿಸಿರುವ ಕೇಂದ್ರ ಸರ್ಕಾರದ ನಡೆಗೆ ಬೇಸರ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಈ ಬಾರಿ ಮಳೆಯ ಕೊರತೆಯಿಂದ ಬರಪರಿಸ್ಥಿತಿ ತಲೆದೋರಿದ್ದು, 710 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. 149 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. 561 ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಬಿತ್ತನೆ ಮಾಡಿದ ಬೀಜ ಮೊಳಕೆಯೊಡೆಯದೆ ರೈತರು ಕಂಗಾಲಾಗಿರುವ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಈ ರೀತಿ ನ್ಯಾಯಯುತ ಹಂಚಿಕೆಯನ್ನೇ ಬಿಡುಗಡೆ ಮಾಡದಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಕಾನೂನು ಅಂಶಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಹಾಗೂ ಪಂಚಾಯತಿ ರಾಜ್ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್ ಅವರೊಂದಿಗೆ ಚುನಾವಣೆ ನಡೆಸುವ ಕುರಿತ ಕಾನೂನು ಅಂಶಗಳ ಬಗ್ಗೆ ಮಾಹಿತಿ ಪಡೆದರು.

### ಅವಧಿ ಮುಗಿದ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸಿದ್ಧತೆ: ಈಶ್ವರ ಖಂಡ್ರೆ

ರಾಜ್ಯ ಸರ್ಕಾರ ಅವಧಿ ಮುಗಿದ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಎಸ್.ಐ.ಆರ್.ಕಾರ್ಯಕ್ಕೆ ಸರ್ಕಾರಿ ಸಿಬ್ಬಂದಿ ನಿಯೋಜನೆ ಆಗಿದ್ದ ಹಿನ್ನೆಲೆಯಲ್ಲಿ ವಿಳಂಬವಾಗಿದೆ. ಗ್ರಾ.ಪಂ. ಚುನಾವಣೆಗೆ ಸರ್ಕಾರ ಸಂಪೂರ್ಣ ಸಜ್ಜಾಗಿದ್ದು, ಶೀಘ್ರವೇ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

# ವಂದೇಮಾತರಂ ಗೀತೆ ಗಾಯನ: ಕೇಂದ್ರಕ್ಕೆ ಸಡ್ಡು ಹೊಡೆದ ಕರ್ನಾಟಕ ಸರ್ಕಾರ

**6 ಚರಣಗಳ ಬದಲಾಗಿ ಕೇವಲ 2 ಚರಣವನ್ನಷ್ಟೇ ಹಾಡಲು ಆದೇಶ**

**ಬೆಂಗಳೂರು, ಸೆ.10:** ವಂದೇಮಾತರಂ ಗೀತೆಯ ಗಾಯನ ಸಂಬಂಧ ಕೇಂದ್ರದ ನಿರ್ಧಾರಕ್ಕೆ ಕರ್ನಾಟಕ ಸರ್ಕಾರ ಸಡ್ಡು ಹೊಡೆದಿದ್ದು, 6 ಚರಣಗಳ ಬದಲು ರಾಜ್ಯ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕೇವಲ ಎರಡೇ ಚರಣ ಹಾಡಲು ಆದೇಶಿಸಿದೆ. 1937ರ ನಿರ್ಣಯದಂತೆ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವುದಾಗಿ ಕಾಂಗ್ರೆಸ್ ಹೈಕಮಾಂಡ್ ನಾಯಕರು ಅಭಿಪ್ರಾಯಪಟ್ಟಿದ್ದ ಬೆನ್ನಲ್ಲೇ ಈ ಮಹತ್ವದ ಬೆಳವಣಿಗೆ ನಡೆದಿದೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಕೂಡ ವಂದೇಮಾತರಂ ಗೀತೆಯ 6 ಪ್ಯಾರಾಗಳನ್ನು ಹಾಡಲು ಆಕ್ಷೇಪ ತೆಗೆದಿದ್ದರು ಎಂಬುದು ಗಮನಾರ್ಹ.

ಭಾರತದ ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ದೇಶದ ಜನರಲ್ಲಿ ರಾಷ್ಟ್ರೀಯತೆ, ಏಕತೆ ಮತ್ತು ದೇಶಭಕ್ತಿಯ ಭಾವನೆಯನ್ನು ಮೂಡಿಸುವಲ್ಲಿ ವಂದೇ ಮಾತರಂ ಮಹತ್ವದ ಪಾತ್ರ ವಹಿಸಿತ್ತು. ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯವು ವಂದೇಮಾತರಂ ರಾಷ್ಟ್ರೀಯ ಗೀತೆಯ ಅಧಿಕೃತ ಆವೃತ್ತಿ ಹಾಗೂ ವಿವಿಧ ಸರ್ಕಾರಿ ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅದರ ಗಾಯನ ಅಥವಾ ವಾದನಕ್ಕೆ ಸಂಬಂಧಿಸಿದಂತೆ ಸಂದರ್ಭಾನುಸಾರ ಪಾಲಿಸಬೇಕಾದ ಮಾರ್ಗಸೂಚಿಗಳನ್ನು ಹೊರಡಿಸಿದೆ. ಆ ಮಾರ್ಗಸೂಚಿಗಳಲ್ಲಿ ರಾಷ್ಟ್ರೀಯ ಗೀತೆಯ ವಾದನ ಮತ್ತು ಸಾಮೂಹಿಕ ಗಾಯನಕ್ಕೆ ಸಂಬಂಧಿಸಿದ ಸಂದರ್ಭಗಳನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸಲಾಗಿದೆ. ರಾಜ್ಯದಲ್ಲಿ ನಡೆಯುವ ವಿವಿಧ ಸರ್ಕಾರಿ ಕಾರ್ಯಕ್ರಮಗಳು ಮತ್ತು ಸಮಾರಂಭಗಳ ಸ್ವರೂಪ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಗೀತೆಯ ವಾದನ/ಗಾಯನಕ್ಕೆ ಸಂಬಂಧಿಸಿದಂತೆ ಏಕರೂಪತೆ, ಗೌರವ ಮತ್ತು ಸೂಕ್ತ ಶಿಷ್ಟಾಚಾರ ಕಾಯ್ದುಕೊಳ್ಳುವ ಅಗತ್ಯವನ್ನು ಸರ್ಕಾರವು ಪರಿಗಣಿಸಿದೆ.

# ಲಡಾಖ್ ಅಸ್ಮಿತೆ, ಸ್ವರೂಪ ಬದಲಾಯಿಸುವುದಿಲ್ಲ

**ಭರವಸೆ ಸಿಗದಿದ್ದರೆ ಸೆ.19ರಿಂದ ಮತ್ತೆ ಹೋರಾಟ: ಕೇಂದ್ರ ಸರ್ಕಾರಕ್ಕೆ ಸಾಮಾಜಿಕ ಹೋರಾಟಗಾರ ಸೋನಂ ವಾಂಗ್ಚುಕ್ ಎಚ್ಚರಿಕೆ**

**ಲಡಾಖ್, ಸೆ.10:** ಲಡಾಖ್ ವಿಚಾರದಲ್ಲಿ ಮತ್ತೆ ಹೋರಾಟದ ಆರಂಭಿಸುವುದಾಗಿ ಸಾಮಾಜಿಕ ಹೋರಾಟಗಾರ ಸೋನಂ ವಾಂಗ್ಚುಕ್ ಎಚ್ಚರಿಕೆ ನೀಡಿದ್ದಾರೆ.

ಲಡಾಖ್‌ನ ಅಸ್ಮಿತೆ ಮತ್ತು ಸ್ವರೂಪವನ್ನು ಬದಲಾಯಿಸುವುದಿಲ್ಲ ಎಂಬ ಭರವಸೆಯನ್ನು ತಾವು ಕೋರಿದ್ದಾಗಿ ವಾಂಗ್‌ಚುಕ್ ಹೇಳಿದ್ದಾರೆ. ಸರ್ಕಾರ ಯಾವುದೇ ಭರವಸೆ ನೀಡಲು ವಿಫಲವಾದರೆ, ಸೆಪ್ಟೆಂಬರ್ 19ರಿಂದ 24ರವರೆಗೆ ಹೊಸ ಹೋರಾಟವನ್ನು ಆರಂಭಿಸುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿನ ಅವ್ಯವಹಾರಗಳನ್ನು ವಿರೋಧಿಸಿ ಅಂದಿನ ಕೇಂದ್ರ ಶಿಕ್ಷಣ ಸಚಿವರ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ಜೂ.28ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಕೊನೆಗೆ ಬರೋಬ್ಬರಿ 26 ದಿನಗಳ ಬಳಿಕ ಜು.23 ರಂದು ತಮ್ಮ ಉಪವಾಸವನ್ನು ಕೈಬಿಟ್ಟಿದ್ದರು. ದೇಶದಲ್ಲಿನ ಸಂಭಾವ್ಯ ಹಿಂಸಾಚಾರದ ಬಗ್ಗೆ ಕಳವಳ ವ್ಯಕ್ತಪಡಿಸಿ ಸರ್ಕಾರದೊಂದಿಗಿನ ದೀರ್ಘ ಮಾತುಕತೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದರು. ಆದರೆ, ಇದೀಗ ಕೇಂದ್ರ ಗೃಹ ಸಚಿವಾಲಯದೊಂದಿಗಿನ ಸಭೆಯು ಸಕಾರಾತ್ಮಕ ವಾತಾವರಣದಲ್ಲಿ ನಡೆದಿದ್ದರೂ ಯಾವುದೇ ಸ್ಪಷ್ಟ ಫಲಿತಾಂಶ ಸಿಗದಿದ್ದಕ್ಕೆ ನಿರಾಶೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

2025ರಲ್ಲಿ ಉದ್ಘಾಟನೆಯಾದ ವಿಶ್ವದ ಅತಿ ಎತ್ತರದ ರೈಲು ಕಮಾನು ಸೇತುವೆಯಾದ ಚೆನಾಬ್ ರೈಲು ಸೇತುವೆ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ಅವರು, ಈ ಪ್ರಯಾಣ ಅನುಭವ ಉತ್ತಮವಾಗಿತ್ತು ಎಂದು ಹೇಳಿದ್ದಾರೆ. ಇತ್ತೀಚೆಗಷ್ಟೇ ದೆಹಲಿ-ಶ್ರೀನಗರ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸಿದ ಲಡಾಖ್‌ನ ಎಂಜಿನಿಯರ್ ಹಾಗೂ ಶಿಕ್ಷಣ ಸುಧಾರಣಾ ಹೋರಾಟಗಾರ ಸೋನಂ ವಾಂಗ್ಚುಕ್, ತಮ್ಮ ಪ್ರಯಾಣದ ಅನುಭವವನ್ನು ವಿಡಿಯೊ ಮೂಲಕ ಹಂಚಿಕೊಂಡು ಭಾರತೀಯ ರೈಲ್ವೆಯ ಸಾಧನೆಯನ್ನು ಶ್ಲಾಘಿಸಿದ್ದಾರೆ.




# ಮಧ್ಯಾವಧಿ ಚುನಾವಣೆ ನಂತರ ಇರಾನ್ ಯುದ್ಧ ಅಂತ್ಯ

**ವಾಷಿಂಗ್ಟನ್, ಸೆ.10:** ಮುಂಬರುವ ನವೆಂಬರ್ ಮಧ್ಯಾವಧಿ ಚುನಾವಣೆಯ ನಂತರ ಅಮೆರಿಕಾ-ಇರಾನ್ ಯುದ್ಧವು ಕೊನೆಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭವಿಷ್ಯ ನುಡಿದಿದ್ದಾರೆ.

ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ ನಡೆಯಲಿರುವ ರಿಪಬ್ಲಿಕನ್ ಸಮಾವೇಶಕ್ಕೆ ಹೊರಡುವ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇರಾನ್ ಇನ್ನು ಹೆಚ್ಚುದಿನ ಯುದ್ಧವನ್ನು ತಡೆದುಕೊಳ್ಳಲು ಸಾಧ್ಯವಿಲ್ಲ. ಅಮೆರಿಕದ ಚುನಾವಣೆಯ ಮೇಲೆ ಪ್ರಭಾವ ಬೀರುವ ಏಕೈಕ ಉದ್ದೇಶದಿಂದ ಟೆಹ್ರಾನ್ ಈ ಸಂಘರ್ಷವನ್ನು ಉದ್ದೇಶಪೂರ್ವಕವಾಗಿ ಎಳೆಯುತ್ತಿದೆ. ಹೀಗಾಗಿ, ನವೆಂಬರ್ ಚುನಾವಣೆ ಮುಗಿದ ತಕ್ಷಣವೇ ಈ ಯುದ್ಧ ಕೊನೆಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಡೊನಾಲ್ಡ್ ಟ್ರಂಪ್ ಭವಿಷ್ಯ ಇರಾನ್‌ಗೆ ಯುದ್ಧ ತಡೆದುಕೊಳ್ಳಲು ಸಾಧ್ಯವಿಲ್ಲ

ಚುನಾವಣೆಯ ಮೇಲೆ ಪ್ರಭಾವ ಬೀರಲು ಅವರು ಹತಾಶರಾಗಿದ್ದಾರೆ. ದುರ್ಬಲ ವ್ಯಕ್ತಿಗಳ ಗುಂಪು ಅಧಿಕಾರಕ್ಕೆ ಬರಬೇಕು, ನಂತರ ಅವರನ್ನು ಹಾಗೆಯೇ ಬಿಟ್ಟು ತಮ್ಮ ಪರಮಾಣು ಅಸ್ತ್ರವನ್ನು ಹೊಂದಲು ಅವಕಾಶ ನೀಡಬೇಕು ಎಂಬುದು ಅವರ ಉದ್ದೇಶವಾಗಿದೆ. ಈ ನಡುವೆ ಯುದ್ಧದ ತೀವ್ರತೆಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಬ್ಯಾರಲ್‌ಗೆ 100 ಡಾಲರ್ ದಾಟಿದ್ದು, ಜಗತ್ತಿನಾದ್ಯಂತ ಇಂಧನ ದರ ಏರಿಕೆಯಾಗಿದೆ ಎಂದಿದ್ದಾರೆ.

ನವೆಂಬರ್ ಚುನಾವಣೆಯವರೆಗೆ ತೈಲ ಬೆಲೆಯಲ್ಲಿ ಯಾವುದೇ ದೊಡ್ಡ ಇಳಿಕೆ ಕಂಡುಬರುವುದಿಲ್ಲ. ಆದರೆ, ಚುನಾವಣೆ ಮುಗಿಯುತ್ತಿದ್ದಂತೆ ಬೆಲೆಗಳು ಭಾರೀ ಪ್ರಮಾಣದಲ್ಲಿ ಕುಸಿಯಲಿವೆ ಎಂದು ಭರವಸೆ ನೀಡಿದ್ದಾರೆ.

ಕೇವಲ ಕೆಲವು ವಾರಗಳಲ್ಲಿ ಮುಗಿಯಬೇಕಿದ್ದ ಈ ಮಿಲಿಟರಿ ಕಾರ್ಯಾಚರಣೆಯು ಈಗ 7ನೇ ತಿಂಗಳಿಗೆ ಕಾಲಿಟ್ಟಿದೆ. ಅಮೆರಿಕ ಮಿಲಿಟರಿ ಯೋಜಿತ ಸಮಯಕ್ಕಿಂತ ಮುಂದಿದೆ ಮತ್ತು ಇರಾನ್‌ನ ಬಹುತೇಕ ಪ್ರಮುಖ ನೆಲೆಗಳನ್ನು ಧ್ವಂಸಗೊಳಿಸಿದೆ ಎಂದು ಟ್ರಂಪ್ ಹೇಳಿಕೊಳ್ಳುತ್ತಿದ್ದಾರೆ. ಆದರೆ, ಶ್ವೇತಭವನದ ಉನ್ನತ ಸಲಹೆಗಾರರು ಮಾತ್ರ ಈ ಯುದ್ಧವು ಟ್ರಂಪ್ ಅವರ ಅಧ್ಯಕ್ಷೀಯ ಅವಧಿಯ ಕೊನೆಯವರೆಗೂ ಮುಂದುವರಿಯಬಹುದು ಎಂಬ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಆಂತರಿಕ ಮೂಲಗಳು ತಿಳಿಸಿವೆ.

ನ.3ರ ಬಳಿಕವಷ್ಟೇ ಯುದ್ಧ ಅಂತ್ಯಗೊಳ್ಳಲಿದೆ ಎಂಬ ಟ್ರಂಪ್ ಹೇಳಿಕೆಗೂ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಕಳೆದ ವಾರ ನೀಡಿದ್ದ ಹೇಳಿಕೆ ಭಿನ್ನವಾಗಿದೆ. ಯುದ್ಧ ಯಾವಾಗ ಅಂತ್ಯಗೊಳ್ಳುತ್ತದೆ ಎಂಬುದಕ್ಕೆ ಕೃತಕ ಗಡುವು ನಿಗದಿಪಡಿಸಲು ಬಯಸುವುದಿಲ್ಲ, ಇರಾನ್ ಹಡಗುಗಳ ಮೇಲೆ ಗುಂಡಿನ ದಾಳಿ ನಿಲ್ಲಿಸುವುದು ಯಾವಾಗ ಎಂಬುದನ್ನು ನೀವು ಕೇಳುತ್ತಿದ್ದೀರಿ. ಅದಕ್ಕೆ ಉತ್ತರ ನನಗೆ ಗೊತ್ತಿಲ್ಲ. ಅದನ್ನು ಇರಾನ್‌ನನ್ನೇ ಕೇಳಬೇಕು ಎಂದು ಎಂದು ವ್ಯಾನ್ಸ್ ಮಾರ್ಮಿಕವಾಗಿ 0ಹೇಳಿದ್ದರು.

# ಲೋಕಭವನದಲ್ಲಿ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ರಾಜ್ಯಪಾಲರಿಂದ ಸನ್ಮಾನ










ಬೆಂಗಳೂರು, ಸೆ.10: ಪ್ರಸಕ್ತ ಸಾಲಿನ ಕಲೆ, ಸಾಹಿತ್ಯ ಮತ್ತು ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ವೈದ್ಯಕೀಯ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಗಣನೀಯ ಕೊಡುಗೆ ನೀಡಿ, ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮ ಪ್ರಶಸ್ತಿಗೆ ಭಾಜನರಾಗಿರುವ ಗಣ್ಯರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಲೋಕಭವನದಲ್ಲಿ ಗುರುವಾರ ಸನ್ಮಾನಿಸಿ ಅಭಿನಂದಿಸಿದರು.,

ವಿವಿಧ ಕ್ಷೇತ್ರಗಳಲ್ಲಿ ಗಣ್ಯರು ಸಲ್ಲಿಸಿರುವ ಅಪಾರ ಸೇವೆ ಮತ್ತು ಸಾಧನೆಗಳು ಸಮಾಜಕ್ಕೆ ಹಾಗೂ ಮುಂದಿನ ಪೀಳಿಗೆಗೆ ಸದಾ ಪ್ರೇರಣೆಯಾಗಿವೆ ಎಂದು ರಾಜ್ಯಪಾಲರು ಹೇಳಿದರು. 2026ನೇ ಸಾಲಿನಲ್ಲಿ ಕರ್ನಾಟಕದಿಂದ ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತರಾದ ಶತಾವಧಾನಿ ಡಾ.ಆರ್.ಗಣೇಶ್ ಹಾಗೂ ಪದ್ಮಶ್ರೀ ಪುರಸ್ಕೃತರಾದ ಅಂಕೇಗೌಡ ಎಂ., ಡಾ. ಎಸ್.ಜಿ. ಸುಶೀಲಮ್ಮ, ಡಾ. ಪ್ರಭಾಕರ್ ಕೋರೆ, ಶಶಿಶೇಖರ್ ವೇಂಪಾಟಿ, ಡಾ. ಶುಭಾ ವೆಂಕಟೇಶ ಅಯ್ಯಂಗಾರ್, ಡಾ.ಸುರೇಶ್ ಹನಗವಾಡಿ ಹಾಗೂ ದಿವಂಗತ ಟಿ.ಟಿ. ಜಗನ್ನಾಥನ್ ಅವರ ಪರವಾಗಿ ಪತ್ನಿ ಲತಾ ಜಗನ್ನಾಥ್ ಅವರನ್ನು ಸನ್ಮಾನಿಸಲಾಯಿತು. ವಿಧಾನಸಭಾಧ್ಯಕ್ಷರಾದ ಜಿ.ಎಸ್. ಪಾಟೀಲ್, ವಿಧಾನ ಪರಿಷತ್ತಿನ ಸಭಾಪತಿ ಸಲೀಂ ಅಹಮದ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

### ಸರ್ಕಾರದ 100 ದಿನಗಳ ಸಾಧನೆಯ ಸಮಾವೇಶ

## ಸರಿಯಾದ ದಾರಿಯಲ್ಲಿ ಸಾಗುತ್ತಿದ್ದೇವೆ ಮಾಜಿ ಸಿಎಂ ಸಿದ್ದರಾಮಯ್ಯ ಪ್ರಶಂಸೆ



ಕಾರ್ಯಕ್ರಮದಲ್ಲಿ ಸಿಎಂ ಡಿ.ಕೆ.ಶಿವಕುಮಾರ್, ಡಿಸಿಎಂ ಪರಮೇಶ್ವರ್, ಮಾಜಿ ಸಿಎಂ ಸಿದ್ದರಾಮಯ್ಯ, ಸರ್ಕಾರದ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜೆ.ಮಂಜುನಾಥ್ ಅವರನ್ನು ಕಾಣಬಹುದು

ಬೆಂಗಳೂರು, ಸೆ.10: ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ 100 ದಿನಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ನಾವು ಸರಿಯಾದ ದಾರಿಯಲ್ಲಿಯೇ ಸಾಗುತ್ತಿದ್ದೇವೆ ಎಂಬುದನ್ನು ರಾಜ್ಯದ ಜನರ ಮುಂದಿಡುವ ಜವಾಬ್ದಾರಿಯುತ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದ್ದಾರೆ.

ವಿಪಕ್ಷಗಳ ಟೀಕೆಗೆ ತಿರುಗೇಟು ನೀಡಿದ ಸಿದ್ದರಾಮಯ್ಯ, ನಾವು ನವಸಮಾಜ ನಿರ್ಮಾಣ ಮಾಡುವ ಕನಸಿನೊಂದಿಗೆ ಮುನ್ನಡೆಯುತ್ತಿದ್ದೇವೆ. ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಪ್ರಧಾನಮಂತ್ರಿಯವರಿಂದ ಹಿಡಿದು ವಿರೋಧ ಪಕ್ಷದ ನಾಯಕರವರೆಗೆ ಎಲ್ಲರೂ ರಾಜ್ಯ ದಿವಾಳಿಯಾಗುತ್ತದೆ, ಇವುಗಳನ್ನು ಜಾರಿ ಮಾಡಲು ಸಾಧ್ಯವೇ ಇಲ್ಲ ಎಂದು ವ್ಯಂಗ್ಯವಾಡಿದ್ದರು. ಆದರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಅಧಿಕಾರಕ್ಕೆ ಬಂದ ಮೊದಲ ವರ್ಷದಲ್ಲೇ ಎಲ್ಲ ಗ್ಯಾರಂಟಿಗಳನ್ನು ಜಾರಿ ಮಾಡಲಾಯಿತು. ಪ್ರತಿವರ್ಷ ಇದಕ್ಕೆ 52,000 ಕೋಟಿ ರೂ. ವೆಚ್ಚವಾಗುತ್ತಿದ್ದು, ಮೂರು ವರ್ಷಗಳಿಂದ ಈ ಯೋಜನೆಗಳು ಬಡವರ ಬದುಕಿಗೆ ಆಸರೆಯಾಗಿವೆ ಎಂದರು.

ನುಡಿದಂತೆ ನಡೆದ ಏಕೈಕ ಸರ್ಕಾರ– ಕಾಂಗ್ರೆಸ್ ಸರ್ಕಾರದ ಬದ್ಧತೆಯ ಬಗ್ಗೆ ಪ್ರಸ್ತಾಪಿಸಿದ ಅವರು, "ನಾವು ಕೇವಲ ಗ್ಯಾರಂಟಿ ಮಾತ್ರ ನೀಡಲಿಲ್ಲ, ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಬೇಕಾದಷ್ಟು ಹಣ ನೀಡಿದ್ದೇವೆ. ಯಾವುದೇ ಅಭಿವೃದ್ಧಿ ಕೆಲಸ ಕುಂಠಿತಗೊಂಡಿಲ್ಲ. ಪ್ರಣಾಳಿಕೆಯನ್ನು ಕೇವಲ ಚುನಾವಣೆಗೆ ಮಾತ್ರ ಬಳಸದೆ, ಅದನ್ನೇ ಆಧಾರವಾಗಿಟ್ಟುಕೊಂಡು ಬಜೆಟ್ ರೂಪಿಸುವ ಏಕೈಕ ಪಕ್ಷ ಕಾಂಗ್ರೆಸ್. 'ಕೃಷಿಭಾಗ್ಯ' ಸೇರಿ ಕೊಟ್ಟ ಪ್ರತಿಯೊಂದು ಭರವಸೆಯನ್ನೂ ಈಡೇರಿಸುವ ಮೂಲಕ ನಾವು 'ನುಡಿದಂತೆ ನಡೆದ ಸರ್ಕಾರ' ಎಂಬುದನ್ನು ಸಾಬೀತುಪಡಿಸಿದ್ದೇವೆ ಎಂದು ಪ್ರತಿಪಾದಿಸಿದರು.

ಕೇಂದ್ರದ ಅನ್ಯಾಯದ ನಡುವೆಯೂ ಹೊಸ ಹೆಜ್ಜೆ –ಕೇಂದ್ರ ಸರ್ಕಾರವು ರಾಜ್ಯದ ನೆರವಿಗೆ ಬರದೆ ಅನ್ಯಾಯ ಎಸಗುತ್ತಿದೆ ಎಂದು ಆರೋಪಿಸಿದ ಅವರು, ಸರ್ಕಾರ ಸವಾಲುಗಳನ್ನು ಮೀರಿ ಜನಪರ ನಿರ್ಧಾರ ಕೈಗೊಳ್ಳುತ್ತಿದೆ ಎಂದರು. ಇದೇ ವೇಳೆ, ಶಕ್ತಿ ಯೋಜನೆಯಡಿ ನಿತ್ಯ ಲಕ್ಷಾಂತರ ಮಹಿಳೆಯರು ಆಧಾರ್ ಕಾರ್ಡ್ ತೋರಿಸಿ ಉಚಿತ ಪ್ರಯಾಣ ಮಾಡುತ್ತಿದ್ದು, ಇನ್ಮುಂದೆ ಪ್ರಯಾಣಿಕರ ಸುಲಭ ಸಂಚಾರಕ್ಕಾಗಿ ಹೊಸ ಸ್ಮಾರ್ಟ್ ಕಾರ್ಡ್ ವಿತರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

## ಬಯೋಮೆಟ್ರಿಕ್ ಆಧಾರ್ ದೃಢೀಕರಣವಿಲ್ಲದೆ GST ನೋಂದಣಿ ಸಾಧ್ಯವಿಲ್ಲ: ದೆಹಲಿ ಹೈಕೋರ್ಟ್




ನವದೆಹಲಿ, ಸೆ.10: ನಕಲಿ ನೋಂದಣಿಗಳು ಮತ್ತು ತೆರಿಗೆ ವಂಚನೆಯ ಸಮಸ್ಯೆಯನ್ನು ನಿಭಾಯಿಸಲು ಎಲ್ಲಾ GST ನೋಂದಣಿಗಳು ಬಯೋಮೆಟ್ರಿಕ್ ಆಧಾರ್ ದೃಢೀಕರಣಕ್ಕೆ ಒಳಗಾಗಬೇಕು ಎಂದು ದೆಹಲಿ ಹೈಕೋರ್ಟ್ ನಿರ್ದೇಶಿಸಿದೆ. ವಂಚಕರು ನಕಲಿ ನೋಂದಣಿಗಳನ್ನು ರಚಿಸಲು ಕದ್ದ ಗುರುತಿನ ವಿವರಗಳನ್ನು ಬಳಸುತ್ತಲೇ ಇದ್ದಾರೆ, ಇದು ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟುಮಾಡುತ್ತದೆ ಮತ್ತು ಅನುಮಾನಾಸ್ಪದ ನಾಗರಿಕರಿಗೆ ತೊಂದರೆಯನ್ನುಂಟುಮಾಡುತ್ತದೆ ಎಂದು ನ್ಯಾಯಾಲಯ ಗಮನಿಸಿದೆ. ಅಧಿಕಾರಿಗಳು ಈ ಹಿಂದೆ ಈ ಸಮಸ್ಯೆಯನ್ನು ಗುರುತಿಸಿದ್ದರು ಆದರೆ ಇನ್ನೂ ಬಯೋಮೆಟ್ರಿಕ್ ಪರಿಶೀಲನೆಯನ್ನು ಸಂಪೂರ್ಣವಾಗಿ ಜಾರಿಗೆ ತಂದಿಲ್ಲ. ಬಯೋಮೆಟ್ರಿಕ್ ಆಧಾರಿತ ಆಧಾರ್ ದೃಢೀಕರಣವಿಲ್ಲದೆ ಸರಕು ಮತ್ತು ಸೇವಾ ತೆರಿಗೆ (ಉಖಖಿ) ನೋಂದಣಿಯನ್ನು ಇನ್ನು ಮುಂದೆ ಅನುಮತಿಸಲಾಗುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಆದೇಶಿಸಿದೆ. ಅರ್ಜಿದಾರರ ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಸಂಖ್ಯೆಗಳನ್ನು ಬಳಸಿಕೊಂಡು ವಂಚನೆಯ ಉಖಖಿ ನೋಂದಣಿಗಳನ್ನು ಆರೋಪಿಸುವ ಅರ್ಜಿಗಳ ಮೇಲೆ ನ್ಯಾಯಮೂರ್ತಿಗಳಾದ ಅನಿಲ್ ಕ್ಷೇತರ್ಪಾಲ್ ಮತ್ತು ಶೈಲ್ ಜೈನ್ ಅವರ ಪೀಠವು ಈ ಆದೇಶವನ್ನು ನೀಡಿದೆ. ಸೆಪ್ಟೆಂಬರ್ 8 ರಂದು ಅಂಗೀಕರಿಸಿದ ಆದೇಶದಲ್ಲಿ, ಸಂಸತ್ತಿನಲ್ಲಿ ವಂಚನೆಯ ಜಿಎಸ್ಟಿ ನೋಂದಣಿ ಕುರಿತ ಪ್ರಶ್ನೆಗೆ ಉತ್ತರಿಸುವಾಗ, ಸಂಬಂಧಪಟ್ಟ ಸಚಿವರು 2023–2024 ರಲ್ಲಿ 15,085 ಕೋಟಿ ರೂ. ತೆರಿಗೆ ವಂಚನೆಯನ್ನು ಒಳಗೊಂಡ 2,800 ವಂಚನೆಯ ಜಿಎಸ್ಟಿ ನೋಂದಣಿಗಳು ನಡೆದಿವೆ ಮತ್ತು 2024?2025 ರಲ್ಲಿ 1,654 ವಂಚನೆಯ ನೋಂದಣಿಗಳು ನಡೆದಿವೆ ಮತ್ತು ?13,109 ಕೋಟಿ ತೆರಿಗೆ ವಂಚನೆ ಪತ್ತೆಯಾಗಿದೆ ಎಂದು ಬಹಿರಂಗಪಡಿಸಿದ್ದಾರೆ ಎಂದು ಪೀಠವು ಗಮನಿಸಿದೆ.

## ಕರ್ನಾಟಕದಲ್ಲಿ ಉರ್ದು ಮಾಧ್ಯಮ ಶಿಕ್ಷಣದ ಸ್ಥಿತಿಗತಿ ಅಧ್ಯಯನ ವರದಿ-2025 ಸ್ವೀಕರಿಸಿದ ಸಚಿವ ಮಧು ಬಂಗಾರಪ್ಪ



**ಬೆಂಗಳೂರು, ಸೆ.10:** ಕರ್ನಾಟಕದಲ್ಲಿ ಉರ್ದು ಮಾಧ್ಯಮದಲ್ಲಿ ಶಿಕ್ಷಣದ ಸ್ಥಿತಿಗತಿ, ಸಮಸ್ಯೆಗಳು ಹಾಗೂ ಅಗತ್ಯ ಸುಧಾರಣೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಅಧ್ಯಯನ ವರದಿ–2025 ಅನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಇಂದು ಸ್ವೀಕರಿಸಿದರು.

ಅಂಜುಮನ್ ತರ್ಖಿ ಉರ್ದು (ಹಿಂದ್), ಕರ್ನಾಟಕ, ಬೆಂಗಳೂರು ವತಿಯಿಂದ ಸಿದ್ಧಪಡಿಸಲಾಗಿರುವ ವರದಿಯನ್ನು ವಿಧಾನ ಪರಿಷತ್ ಸಭಾಪತಿ ಸಲೀಂ ಅಹಮದ್ ಅವರ ಕಚೇರಿಯಲ್ಲಿ ಸಚಿವರಿಗೆ ಹಸ್ತಾಂತರಿಸಲಾಯಿತು.

ಕರ್ನಾಟಕದಲ್ಲಿ ಉರ್ದು ಮಾಧ್ಯಮದ ಶಿಕ್ಷಣದ ಪ್ರಸ್ತುತ ಸ್ಥಿತಿಗತಿ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳು, ಶೈಕ್ಷಣಿಕ ಗುಣಮಟ್ಟ ಸುಧಾರಣೆ ಸೇರಿದಂತೆ ವಿವಿಧ ಅಂಶಗಳನ್ನು ಒಳಗೊಂಡಿರುವ ವರದಿಯನ್ನು ಸಚಿವರು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸಭಾಪತಿ ಸಲೀಂ ಅಹಮದ್, ಸಚಿವರಾದ ಯು.ಟಿ. ಖಾದರ್, ರಿಜ್ವಾನ್ ಅರ್ಷದ್, ಜಮೀರ್ ಅಹಮದ್, ಶಾಸಕರಾದ ಎನ್.ಎ. ಹ್ಯಾರಿಸ್, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಸದಸ್ಯೆ ಬಿಲ್ಕಿಷ್ ಬಾನು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಚಿಂತಾಮಣಿಯ ಜೇಡರಹಳ್ಳಿಯಲ್ಲಿ ಡ್ರೋನ್ ಪರೀಕ್ಷಾ ಕೇಂದ್ರ ನಿರ್ಮಾಣಕ್ಕೆ ಸಂಪುಟ ಅನುಮೋದನೆ

### ಹಾರಾಟ ಪರೀಕ್ಷೆ, ಕಾರ್ಯಕ್ಷಮತೆ, ಮೂಲಸೌಕರ್ಯ ಅಭಿವೃದ್ಧಿಎ 42.83 ಕೋಟಿ ರೂ. ನೆರವು

ಬೆಂಗಳೂರು, ಸೆ.10: ಕರ್ನಾಟಕವನ್ನು ಡ್ರೋನ್ ತಂತ್ರಜ್ಞಾನ, ಪರೀಕ್ಷೆ ಮತ್ತು ಪ್ರಮಾಣೀಕರಣದ ಪ್ರಮುಖ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಜೇಡರಹಳ್ಳಿಯಲ್ಲಿ ಡ್ರೋನ್ ಪರೀಕ್ಷಾ ಕೇಂದ್ರ ಸ್ಥಾಪನೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.




19.26 ಎಕರೆ ಸರ್ಕಾರಿ ಜಮೀನಿನಲ್ಲಿ ಈ ಡ್ರೋನ್ ಪರೀಕ್ಷಾ ಕೇಂದ್ರ ನಿರ್ಮಾಣವಾಗಲಿದ್ದು, ಇದಕ್ಕಾಗಿ ರಾಜ್ಯ ಸರ್ಕಾರ 42.83 ಕೋಟಿ ರೂ. ನೆರವು ನೀಡಲಿದೆ. ಡ್ರೋನ್‌ಗಳ ಹಾರಾಟ ಪರೀಕ್ಷೆ, ಕಾರ್ಯಕ್ಷಮತೆ ಹಾಗೂ ಸುರಕ್ಷತಾ ಮೌಲ್ಯಮಾಪನ, ಪ್ರಮಾಣೀಕರಣ ಸೇರಿದಂತೆ ಅತ್ಯಾಧುನಿಕ ಪರೀಕ್ಷೆಗಳಿಗೆ ಅಗತ್ಯವಿರುವ ಮೂಲಸೌಕರ್ಯವನ್ನು ಕೇಂದ್ರದಲ್ಲಿ ಅಭಿವೃದ್ಧಿಪಡಿಸ ಲಾಗುತ್ತದೆ. ವಿಶೇಷವಾಗಿ BVLOS (ದೃಶ್ಯ ವ್ಯಾಪ್ತಿಯಾಚೆಗಿನ) ಹಾರಾಟ ಪರೀಕ್ಷೆಗಳಿಗೆ ಅಗತ್ಯವಿರುವ ವ್ಯವಸ್ಥೆಯೂ ಇಲ್ಲಿ ಇರಲಿದೆ. ಈ ಕೇಂದ್ರದಿಂದ ಡ್ರೋನ್ ಕ್ಷೇತ್ರದ ನವೋದ್ಯಮ, ಕೈಗಾರಿಕೆ, ಶೈಕ್ಷಣಿಕ ಸಂಸ್ಥೆಗಳು, ರಕ್ಷಣಾ ಕ್ಷೇತ್ರ ಹಾಗೂ ಜಾಗತಿಕ ತಂತ್ರಜ್ಞಾನ ಸಂಸ್ಥೆಗಳಿಗೆ ಹೊಸ ಅವಕಾಶಗಳು ಸಿಗಲಿವೆ.

ಸುಮಾರು 19.26 ಎಕರೆ ಸರ್ಕಾರಿ ಜಮೀನಿನಲ್ಲಿ ಈ ಕೇಂದ್ರ ನಿರ್ಮಾಣವಾಗಲಿದೆ. ಬೆಂಗಳೂರು ಮಾತ್ರವಲ್ಲ – ಕರ್ನಾಟಕದ ಪ್ರತಿಯೊಂದು ಭಾಗವೂ ಹೈಟೆಕ್ ಉದ್ಯಮಗಳ ಬೆಳವಣಿಗೆಯ ಕೇಂದ್ರವಾಗಬೇಕು ಎಂಬುದು ಸರ್ಕಾರದ ಗುರಿ. ಚಿಕ್ಕಬಳ್ಳಾಪುರದ ಈ ಡ್ರೋನ್ ಪರೀಕ್ಷಾ ಕೇಂದ್ರವು ನವೋದ್ಯಮ, ಸಂಶೋಧನೆ ಮತ್ತು ಕೈಗಾರಿಕೆಯನ್ನು ಒಂದೇ ವೇದಿಕೆಯಲ್ಲಿ ಸಂಪರ್ಕಿಸುವ ಪ್ರಮುಖ ಕೇಂದ್ರವಾಗಿ ಹೊರಹೊಮ್ಮಲಿದೆ. ಡ್ರೋನ್ ತಂತ್ರಜ್ಞಾನದಲ್ಲಿ ಕರ್ನಾಟಕದ ಮುನ್ನಡೆಯನ್ನು ಮತ್ತಷ್ಟು ಬಲಪಡಿಸಿ, ಜಾಗತಿಕ ಮಟ್ಟದ ತಂತ್ರಜ್ಞಾನ ಮತ್ತು ನಾವೀನ್ಯತೆಯ ತಾಣವಾಗಿ ಕರ್ನಾಟಕವನ್ನು ರೂಪಿಸುವ ನಮ್ಮ ಪ್ರಯತ್ನ ಮುಂದುವರಿಯಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

## ವಾಹನಗಳ ನೇರ ಖರೀದಿಗೆ ಬದಲಾಗಿ ಬಾಡಿಗೆ ಆಧಾರದಲ್ಲಿ ಪಡೆಯಲು ಚಿಂತನೆ

### ಪೊಲೀಸ್ ಇಲಾಖೆ ವಾಹನ ವ್ಯವಸ್ಥೆಯಲ್ಲಿ ಹೊಸತನ್ನು ಅಳವಡಿಸಿಕೊಳ್ಳಲು ಸರ್ಕಾರ ಪರಿಶೀಲನೆ

**ಬೆಂಗಳೂರು, ಸೆ.10:** ಪೊಲೀಸ್ ಇಲಾಖೆಯನ್ನು ಕಾಲಕ್ಕೆ ತಕ್ಕಂತೆ ಆಧುನೀಕರಿಸುವುದು, ಸಿಬ್ಬಂದಿಗೆ ಉತ್ತಮ ಕಾರ್ಯಾಚರಣಾ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಸಾರ್ವಜನಿಕರಿಗೆ ಇನ್ನಷ್ಟು ತ್ವರಿತ ಮತ್ತು ಪರಿಣಾಮಕಾರಿ ಸೇವೆ ನೀಡುವ ಉದ್ದೇಶದಿಂದ ಪೊಲೀಸ್ ಇಲಾಖೆಯ ವಾಹನ ವ್ಯವಸ್ಥೆಯಲ್ಲಿ ಹೊಸ ಮಾದರಿಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆಯನ್ನು ರಾಜ್ಯ ಸರ್ಕಾರ ಪರಿಶೀಲಿಸುತ್ತಿದೆ ಎಂದು ಗೃಹಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಸಂಬಂಧ ಕರ್ನಾಟಕ ಪೊಲೀಸ್ ಇಲಾಖೆಯ ಸಂಪರ್ಕ, ಸಾಗಣೆ ಮತ್ತು ಆಧುನೀಕರಣ ವಿಭಾಗದ ಅಧಿಕಾರಿಗಳು ಹಾಗೂ ವಿದ್ಯುತ್‌ಚಾಲಿತ ಮತ್ತು ಸಾಂಪ್ರದಾಯಿಕ ವಾಹನ ತಯಾರಿಕಾ ಕಂಪನಿಗಳು ಸೇರಿ 20ಕ್ಕೂ ಹೆಚ್ಚು ಆಟೋಮೊಬೈಲ್ ಮತ್ತು ದ್ವಿಚಕ್ರ ವಾಹನ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಪೊಲೀಸ್ ಇಲಾಖೆಯ ವಾಹನಗಳಿಗೆ ಬಾಡಿಗೆ ಅಥವಾ ಗುತ್ತಿಗೆ ಮಾದರಿಯನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಕುರಿತು ವಿಸ್ತೃತ ಚರ್ಚೆ ನಡೆಸಿದರು.

ಪೊಲೀಸ್ ಇಲಾಖೆಗೆ ಅಗತ್ಯವಿರುವ ವಾಹನಗಳನ್ನು ನೇರವಾಗಿ ಖರೀದಿಸುವುದರಿಂದ ಸರ್ಕಾರದ ಮೇಲೆ ಒಂದೇ ಬಾರಿಗೆ ಗಣನೀಯ ಪ್ರಮಾಣದ ಬಂಡವಾಳ ವೆಚ್ಚದ ಹೊರೆ ಉಂಟಾಗುತ್ತದೆ. ಆದರೆ, ಬದಲಾಗುತ್ತಿರುವ ಅಗತ್ಯ ಮತ್ತು ಹೆಚ್ಚುತ್ತಿರುವ ಕಾರ್ಯಾಚರಣಾ ಹೊಣೆಗಾರಿಕೆಗಳನ್ನು ಗಮನದಲ್ಲಿಟ್ಟುಕೊಂಡು, ನೇರ ಖರೀದಿಗೆ ಪರ್ಯಾಯವಾಗಿ ಬಾಡಿಗೆ ಮಾದರಿಯನ್ನು ಅಳವಡಿಸಿಕೊಳ್ಳುವುದರಿಂದ ಲಭ್ಯವಿರುವ ಸಂಪನ್ಮೂಲಗಳನ್ನು ಹೆಚ್ಚು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿದೆ. ಸರ್ಕಾರದ ಉದ್ದೇಶ ಕೇವಲ ವಾಹನಗಳನ್ನು ಖರೀದಿಸುವುದಲ್ಲ; ಸಾರ್ವಜನಿಕರ ಹಣವನ್ನು ವಿವೇಚನೆಯಿಂದ ಬಳಸಿಕೊಂಡು, ಪೊಲೀಸ್ ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಆದ್ಯತೆಯಾಗಿದೆ ಎಂದರು.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಗಸ್ತು ಕಾರ್ಯಾಚರಣೆ, ತುರ್ತು ಸಂದರ್ಭಗಳಲ್ಲಿ ಪ್ರತಿಕ್ರಿಯೆ, ತನಿಖೆ ಸೇರಿದಂತೆ ವಿವಿಧ ಪೊಲೀಸ್ ಕರ್ತವ್ಯಗಳಿಗೆ ಅಗತ್ಯವಿರುವ ವಾಹನಗಳನ್ನು ಕಾರ್ಯಾಚರಣೆಯ ಅವಶ್ಯಕತೆಗೆ ಅನುಗುಣವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಅವರು ತಿಳಿಸಿದರು.

ವಾಹನಗಳ ಬಳಕೆಯ ಸ್ವರೂಪ, ಕಾರ್ಯಾಚರಣಾ ಅವಧಿ, ನಿರ್ವಹಣೆ, ದುರಸ್ತಿ, ಬದಲಿ ವಾಹನಗಳ ಲಭ್ಯತೆ, ಸೇವಾ ವೆಚ್ಚ ಹಾಗೂ ಒಪ್ಪಂದದ ಅವಧಿ ಸೇರಿದಂತೆ ಹಣಕಾಸು ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ಆಯಾಮಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಇಲಾಖೆಯ ಅಗತ್ಯಗಳಿಗೆ ತಕ್ಕಂತೆ, ಸಾರ್ವಜನಿಕ ಹಣದ ಗರಿಷ್ಠ ಸದ್ಬಳಕೆ ಆಗುವ ಹಾಗೂ ದೀರ್ಘಾವಧಿಯಲ್ಲಿ ಸರ್ಕಾರಕ್ಕೆ ಆರ್ಥಿಕವಾಗಿ ಮತ್ತು ಆಡಳಿತಾತ್ಮಕವಾಗಿ ಪೂರಕವಾಗುವ ಮಾದರಿಯನ್ನು ರೂಪಿಸಲು ಸರ್ಕಾರ ಬದ್ಧವಾಗಿದೆ. ಬಾಡಿಗೆ ಮಾದರಿಯ ಹಣಕಾಸು ಮತ್ತು ಕಾರ್ಯಾಚರಣಾ ಸಾಧ್ಯತೆಗಳನ್ನು ಸಮಗ್ರವಾಗಿ ಪರಿಶೀಲಿಸಿದ ಬಳಿಕವೇ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.

## ಬ್ರಿಕ್ಸ್ ಶೃಂಗಸಭೆಗೆ ಕೋಟೆಯಂತ ಭದ್ರತೆ– 7 ಸಾವಿರ ಭದ್ರತಾ ಸಿಬ್ಬಂದಿ ನಿಯೋಜನೆ; 500 ಸಿಸಿಟಿವಿಗಳ ಕಣ್ಗಾವಲು

### 35ಕ್ಕೂ ಹೆಚ್ಚು ರಸ್ತೆಗಳಲ್ಲಿ ಸಂಚಾರ ನಿರ್ಬಂಧ ಭಾರತ್ ಮಂಟಪಂ ಸುತ್ತ ಬಹುಹಂತದ ಭದ್ರತೆ

**ನವದೆಹಲಿ, ಸೆ.10:** ರಾಷ್ಟ್ರ ರಾಜಧಾನಿಯಲ್ಲಿ ಸೆಪ್ಟೆಂಬರ್ 11ರಿಂದ 13ರವರೆಗೆ ಬ್ರಿಕ್ಸ್ ಶೃಂಗಸಭೆ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ. ವಿದೇಶಿ ಗಣ್ಯರು ಹಾಗೂ ವಿವಿಧ ದೇಶಗಳ ಪ್ರತಿನಿಧಿಗಳ ಸಂಚಾರವನ್ನು ಗಮನದಲ್ಲಿಟ್ಟುಕೊಂಡು ವಿಮಾನ ನಿಲ್ದಾಣದಿಂದ ಹೋಟೆಲ್ಗಳು ಹಾಗೂ ಶೃಂಗಸಭೆಯ ಸ್ಥಳವಾದ ಭಾರತ್ ಮಂಟಪಂವರೆಗೆ ಬಹುಹಂತದ ಭದ್ರತಾ ವ್ಯವಸ್ಥೆ ರೂಪಿಸಲಾಗಿದೆ.

ಶೃಂಗಸಭೆಯ ಭದ್ರತಾ ವ್ಯವಸ್ಥೆಯ ಮೇಲ್ವಿಚಾರಣೆಗೆ ತುಘಲಕ್ ರಸ್ತೆ ಪೊಲೀಸ್ ಠಾಣೆಯಲ್ಲಿ ವಿಶೇಷ ಸಿಸಿಟಿವಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. ಸುಮಾರು 500 ಸಿಸಿಟಿವಿ ಕ್ಯಾಮೆರಾಗಳ ಮೂಲಕ ಭದ್ರತಾ ವ್ಯವಸ್ಥೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ.




ನವದೆಹಲಿಯ ಪ್ರಮುಖ ರಸ್ತೆಗಳ ಅರ್ಧದಷ್ಟು ಭಾಗದ ಜತೆಗೆ ವಿದೇಶಿ ಗಣ್ಯರು ವಾಸ್ತವ್ಯ ಹೂಡುವ ಆಬ್ರೆ ಹೋಟೆಲ್ ಮತ್ತು ತಾಜ್ ಮಾನ್ ಸಿಂಗ್ ಹೋಟೆಲ್ ಪ್ರದೇಶಗಳೂ ಈ ಕಣ್ಗಾವಲಿನ ವ್ಯಾಪ್ತಿಯಲ್ಲಿರಲಿವೆ.

**ಭಾರತ್ ಮಂಟಪಂ ಸುತ್ತ ಬಹುಹಂತದ ಭದ್ರತೆ**

ಶೃಂಗಸಭೆ ನಡೆಯುವ ಭಾರತ್ ಮಂಟಪಂ ಸುತ್ತಮುತ್ತ ಬಹುಹಂತದ ಭದ್ರತಾ ವ್ಯವಸ್ಥೆ ಜಾರಿಯಲ್ಲಿರಲಿದೆ. ವಿಮಾನ ನಿಲ್ದಾಣ, ಹೋಟೆಲ್ಗಳು ಮತ್ತು ಶೃಂಗಸಭೆ ನಡೆಯುವ ಸ್ಥಳವನ್ನು ಸಂಪರ್ಕಿಸುವ ಪ್ರಮುಖ ಮಾರ್ಗಗಳ ಮೇಲೆ ಭದ್ರತಾ ಏಜೆನ್ಸಿಗಳು ನಿರಂತರ ನಿಗಾ ಇರಿಸಲಿವೆ.

ದೆಹಲಿ ಪೊಲೀಸ್, ಅರೆಸೇನಾ ಪಡೆಗಳು, ಓಖಉ, ಗುಪ್ತಚರ ದಳ ಮತ್ತು ಖಕಉ ಸಿಬ್ಬಂದಿಯನ್ನು ವಿವಿಧ ಸ್ಥಳಗಳಲ್ಲಿ ನಿಯೋಜಿಸಲಾಗುತ್ತಿದೆ. ಭಾರತ್ ಮಂಟಪಂ ಸುತ್ತ ಸುಮಾರು ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಹಲವು ಹಂತಗಳಲ್ಲಿ ಭದ್ರತಾ ವ್ಯವಸ್ಥೆ ರೂಪಿಸಲಾಗಿದೆ. ಬ್ರಿಕ್ಸ್ ಶೃಂಗಸಭೆಯ ಭದ್ರತೆಗಾಗಿ ಸುಮಾರು 7,000 ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ದೆಹಲಿ ಪೊಲೀಸ್, ಅರೆಸೇನಾ ಪಡೆಗಳು, ಓಖಉ ಸೇರಿದಂತೆ ವಿವಿಧ ಭದ್ರತಾ ಸಂಸ್ಥೆಗಳು ಭದ್ರತಾ ಗ್ರಿಡ್ನ ಭಾಗವಾಗಲಿವೆ.

ಭದ್ರತಾ ವ್ಯವಸ್ಥೆಯಲ್ಲಿ ತಾಂತ್ರಿಕ ಕಣ್ಗಾವಲಿಗೂ ಆದ್ಯತೆ ನೀಡಲಾಗಿದೆ. ಡ್ರೋನ್ ಸೇರಿದಂತೆ ಅನಧಿಕೃತ ಹಾರುವ ವಸ್ತುಗಳ ಮೇಲೆ ನಿಗಾ, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯಗೊಳಿಸುವ ತಂಡಗಳ ಸನ್ನದ್ಧತೆ ಹಾಗೂ ವಿಐಪಿ ವಾಹನಗಳ ಸಂಚಾರದ ಮೇಲ್ವಿಚಾರಣೆಗೆ ತಾಂತ್ರಿಕ ವ್ಯವಸ್ಥೆಗಳನ್ನು ಬಳಸಲಾಗುತ್ತಿದೆ.

**35ಕ್ಕೂ ಹೆಚ್ಚು ರಸ್ತೆಗಳಲ್ಲಿ ಸಂಚಾರ ನಿಯಂತ್ರಣ**

ವಿದೇಶಿ ಗಣ್ಯರು ಹಾಗೂ ವಿಐಪಿ ವಾಹನಗಳ ಸಂಚಾರಕ್ಕೆ ಅನುಗುಣವಾಗಿ ನವದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ ನಿಯಂತ್ರಿಸಲಾಗುತ್ತದೆ. 35ಕ್ಕೂ ಹೆಚ್ಚು ಪ್ರಮುಖ ರಸ್ತೆಗಳನ್ನು ಸಂಚಾರ ನಿರ್ಬಂಧ ಮತ್ತು ಮಾರ್ಗ ಬದಲಾವಣೆಗೆ ಗುರುತಿಸಲಾಗಿದೆ. ಅಗತ್ಯವಿದ್ದಾಗ ವಿಐಪಿ ಕಾನ್ವಾಯ್ಗಳ ಸುಗಮ ಸಂಚಾರಕ್ಕಾಗಿ ಕೆಲ ರಸ್ತೆಗಳಲ್ಲಿ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಅಥವಾ ಪರ್ಯಾಯ ಮಾರ್ಗಕ್ಕೆ ತಿರುಗಿಸುವ ವ್ಯವಸ್ಥೆ ಮಾಡಲಾಗಿದೆ.

**ಟ್ರಾಫಿಕ್ ಪೊಲೀಸರಿಗೂ ಹೆಚ್ಚುವರಿ ಹೊಣೆ**

ಶೃಂಗಸಭೆಯ ಸಂದರ್ಭದಲ್ಲಿ ಸುಮಾರು 4,800 ಟ್ರಾಫಿಕ್ ಪೊಲೀಸ್ ಸಿಬ್ಬಂದಿ ವಾಹನ ಸಂಚಾರ ನಿಯಂತ್ರಣ ಮತ್ತು ವಿಐಪಿ ಕಾನ್ವಾಯ್ಗಳ ಸಂಚಾರ ನಿರ್ವಹಣೆಯಲ್ಲಿ ತೊಡಗಲಿದ್ದಾರೆ. ಸಾರ್ವಜನಿಕರು ಅಗತ್ಯವಿದ್ದರೆ ಪರ್ಯಾಯ ಮಾರ್ಗ ಬಳಸಬೇಕು ಹಾಗೂ ವಿಮಾನ ನಿಲ್ದಾಣ ಅಥವಾ ರೈಲು ನಿಲ್ದಾಣಕ್ಕೆ ತೆರಳುವವರು ಮುಂಚಿತವಾಗಿಯೇ ಪ್ರಯಾಣ ಆರಂಭಿಸಬೇಕು ಎಂದು ಸೂಚಿಸಲಾಗಿದೆ. ವಿಮಾನ ನಿಲ್ದಾಣ ಪ್ರಯಾಣಕ್ಕೆ ಮೆಟ್ರೋ ಬಳಸುವಂತೆ ಸಲಹೆ ನೀಡಲಾಗಿದೆ.

## ರಾಜಧಾನಿಯ ಜಲಮೂಲಗಳು ಕಲುಷಿತಗೊಳ್ಳುವುದನ್ನು ತಡೆಯಲು ಸಚಿವ ರಾಮಲಿಂಗಾರೆಡ್ಡಿ ಖಡಕ್ ಸೂಚನೆ

**ಬೆಂಗಳೂರು. ಸೆ.10:** ರಾಜಧಾನಿಯ ಜಲಮೂಲಗಳು ಸಂಸ್ಕರಿಸದ ಕೊಳಚೆ ನೀರಿನಿಂದ ಕಲುಷಿತಗೊಳ್ಳುವುದನ್ನು ತಡೆಗಟ್ಟಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ) ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ರಾಮಲಿಂಗಾರೆಡ್ಡಿ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಪರಿಸರ ಭವನದ ತೇಜಸ್ವಿ ಸಭಾಂಗಣದಲ್ಲಿ ಗುರುವಾರ ಜರುಗಿದ ಉನ್ನತ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ, ನಗರದ ತ್ಯಾಜ್ಯನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ನಿರ್ವಹಣೆ ಮತ್ತು ಹೊಸ ಯೋಜನೆಗಳ ಕುರಿತು ಸಮಗ್ರ ಚರ್ಚೆ ನಡೆಸಲಾಯಿತು.

ಜಲಮೂಲ ಸೇರುತ್ತಿದೆ ನಿತ್ಯ 1,215 ಎಂಎಲ್‌ಡಿ ಸಂಸ್ಕರಿಸದ ತ್ಯಾಜ್ಯನೀರು

ಜಲಮಂಡಳಿಯ ಅಂಕಿ–ಅಂಶಗಳ ಪ್ರಕಾರ, ನಗರಕ್ಕೆ ಪ್ರತಿದಿನ ಕಾವೇರಿ ಮತ್ತು ಬೋರ್‌ವೆಲ್‌ಗಳ ಮೂಲಕ ಒಟ್ಟು 2,825 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದ್ದು, ಅದರಲ್ಲಿ ಬರೋಬ್ಬರಿ 2,580 ಎಂಎಲ್‌ಡಿ ತ್ಯಾಜ್ಯನೀರು ಉತ್ಪತ್ತಿಯಾಗುತ್ತಿದೆ. ಆದರೆ, ಪ್ರಸ್ತುತ ಕಾರ್ಯಾಚರಣೆಯಲ್ಲಿರುವ 37 ಎಸ್‌ಟಿಪಿಗಳ ಒಟ್ಟು ಸಾಮರ್ಥ್ಯ ಕೇವಲ 1,364.5 ಎಂಎಲ್‌ಡಿ ಮಾತ್ರವಿದೆ. ಇದರಿಂದಾಗಿ ಪ್ರತಿದಿನ ಸುಮಾರು 1,215.5 ಎಂಎಲ್‌ಡಿ ಪ್ರಮಾಣದಷ್ಟು ಕೊಳಚೆ ನೀರು ಸಂಸ್ಕರಣೆಯಾಗದೆ ಉಳಿಯುತ್ತಿರುವುದು ಗಂಭೀರ ಕಳವಳಕ್ಕೆ ಕಾರಣವಾಗಿದೆ.

**ನಿಯಮ ಪಾಲಿಸದ ಘಟಕಗಳಿಗೆ 30 ದಿನಗಳ ಗಡುವು**

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕೆಲವು ಸರ್ಕಾರಿ ಎಸ್‌ಟಿಪಿಗಳು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಹಾಗೂ ಕೆಎಸ್‌ಪಿಸಿಬಿ ನಿಗದಿಪಡಿಸಿದ ಗುಣಮಟ್ಟದ ಮಾನದಂಡಗಳನ್ನು ಪಾಲಿಸುತ್ತಿಲ್ಲ ಎಂಬ ಅಂಶವನ್ನು ಸಚಿವರು ಗಂಭೀರವಾಗಿ ಪರಿಗಣಿಸಿದ್ದಾರೆ. ಅಂತಹ ಘಟಕಗಳು ಮುಂದಿನ 30 ದಿನಗಳ ಒಳಗಾಗಿ ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಜಲಮಂಡಳಿಗೆ ಸಚಿವರು ಎಚ್ಚರಿಕೆ ನೀಡಿದ್ದಾರೆ.



**ಅಪಾರ್ಟ್‌ಮೆಂಟ್, ಆಸ್ಪತ್ರೆಗಳ ಖಾಸಗಿ ಎಸ್‌ಟಿಪಿಗಳ ತಪಾಸಣೆ**

ಕೇವಲ ಸರ್ಕಾರಿ ಘಟಕಗಳಷ್ಟೇ ಅಲ್ಲದೆ, ನಗರದ ಖಾಸಗಿ ಅಪಾರ್ಟ್‌ಮೆಂಟ್‌ಗಳು, ಶಿಕ್ಷಣ ಸಂಸ್ಥೆಗಳು, ವಾಣಿಜ್ಯ ಸಂಕೀರ್ಣಗಳು, ಆಸ್ಪತ್ರೆಗಳು ಹಾಗೂ ಕಚೇರಿ ಕಟ್ಟಡಗಳಲ್ಲಿರುವ ಎಸ್‌ಟಿಪಿಗಳ ಮೇಲೆ ನಿಗಾ ಇಡಲು ಕೆಎಸ್‌ಪಿಸಿಬಿಗೆ ಆದೇಶಿಸಲಾಗಿದೆ. ಈ ಎಲ್ಲಾ ಖಾಸಗಿ ಘಟಕಗಳು ನಿಗದಿತ ಪರಿಸರ ಮಾನದಂಡಗಳಂತೆ ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತಪಾಸಣೆ ನಡೆಸುವಂತೆ ಸೂಚಿಸಲಾಗಿದೆ. ಮಳೆನೀರು ಹರಿಯುವ ರಾಜಕಾಲುವೆಗಳಿಗೆ ಒಳಚರಂಡಿ ನೀರು ಮಿಶ್ರಣವಾಗುವುದನ್ನು ತಕ್ಷಣ ತಡೆಯಬೇಕೆಂದು ಸಚಿವರು ತಾಕೀತು ಮಾಡಿದ್ದಾರೆ.

# ಪ್ಯಾರಿಸ್ ಬಾಹ್ಯಾಕಾಶ ಶೃಂಗಸಭೆ: ಜಾಗತಿಕ ಸಹಕಾರ, ಸುಸ್ಥಿರತೆಗೆ ಪ್ರಧಾನಿ ಮೋದಿ ಕರೆ

**ನವದೆಹಲಿ, ಸೆ.10:** ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಬಾಹ್ಯಾಕಾಶ ಶೃಂಗಸಭೆಯಲ್ಲಿ ಜಾಗತಿಕ ಸಹಕಾರ ಮತ್ತು ಸುಸ್ಥಿರತೆಗೆ ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ಗುರುವಾರ ಭಾರತೀಯ ಬಾಹ್ಯಾಕಾಶ ವಲಯ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯನ್ನು ಶ್ಲಾಘಿಸಿದರು. ಶೃಂಗಸಭೆಯನ್ನು ವರ್ಚುವಲ್ ಆಗಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಅನ್ವೇಷಣೆ, ನಾವೀನ್ಯತೆ ಮತ್ತು ಬಾಹ್ಯಾಕಾಶ ರಕ್ಷಣೆಯಲ್ಲಿ ಸಹಕಾರಕ್ಕಾಗಿ ಕರೆ ನೀಡಿದ ವಸುಧೈವ ಕುಟುಂಬಕಂ ಸಂದೇಶವನ್ನು ಎತ್ತಿ ತೋರಿಸಿದರು. 34 ದೇಶಗಳ 430 ಕ್ಕೂ ಹೆಚ್ಚು ಉಪಗ್ರಹಗಳು ಭಾರತೀಯ ರಾಕೆಟ್‌ಗಳಲ್ಲಿ ಬಾಹ್ಯಾಕಾಶಕ್ಕೆ ಪ್ರಯಾಣಿಸಿವೆ. ಇಸ್ರೋದ ತಂತ್ರಜ್ಞಾನ ಮತ್ತು ಪಾಲುದಾರಿಕೆ ಭಾರತಕ್ಕೆ ಮಾತ್ರವಲ್ಲದೆ ವಿಶಾಲ ಜಗತ್ತಿಗೆ ಸೇವೆ ಸಲ್ಲಿಸುತ್ತದೆ. ಈ ಜಾಗತಿಕ ನಂಬಿಕೆಯ ಹಿಂದೆ, ಭಾರತೀಯ ವಿಜ್ಞಾನಿಗಳು, ಎಂಜಿನಿಯರ್‌ಗಳು ಮತ್ತು ತಂತ್ರಜ್ಞರ ತಲೆಮಾರುಗಳ ಸಮರ್ಪಣೆ ಮತ್ತು ಕಠಿಣ ಪರಿಶ್ರಮವಿದೆ, ಎಂದು ಅವರು ಹೇಳಿದರು.

"ಶತಮಾನಗಳಿಂದ, ಬಾಹ್ಯಾಕಾಶವು ನಮ್ಮ ಕಲ್ಪನೆಗೆ ಸ್ಫೂರ್ತಿ ನೀಡಿದೆ. ಇಂದು, ಅದು ಭೂಮಿಯ ಮೇಲಿನ ಜೀವನವನ್ನು ಬದಲಾಯಿಸುತ್ತದೆ. ಹವಾಮಾನ ಮತ್ತು ಬೆಳೆಗಳಿಂದ ಸಾಗರಗಳು ಮತ್ತು ಸಮುದಾಯಗಳಿಗೆ. ಬಾಹ್ಯಾಕಾಶದ ಭರವಸೆ ಅನಂತವಾಗಿದೆ. ನಮ್ಮ ಜವಾಬ್ದಾರಿ ಸಾಮೂಹಿಕವಾಗಿದೆ. ಕಕ್ಷೆಗಳು ಹೆಚ್ಚು ಜನದಟ್ಟಣೆಯಾಗುತ್ತಿದ್ದಂತೆ, ತಂತ್ರಜ್ಞಾನವು ಹೆಚ್ಚು ಶಕ್ತಿಶಾಲಿಯಾಗುತ್ತಿದ್ದಂತೆ ಮತ್ತು ಪಾತ್ರಧಾರಿಗಳು ಹೆಚ್ಚು ಸಂಖ್ಯೆಯಲ್ಲಿರುವಾಗ, **ನಮ್ಮ ಆಯ್ಕೆಗಳು ಸ್ಪಷ್ಟವಾಗಿರಬೇಕು:** ಮುಖಾಮುಖಿಗಿಂತ ಸಹಕಾರ, ಅಲ್ಪಾವಧಿಯ ಲಾಭಕ್ಕಿಂತ ಸುಸ್ಥಿರತೆ, ಹೊರಗಿಡುವಿಕೆಗಿಂತ ಸೇರ್ಪಡೆ. ಭಾರತದ ವಿಧಾನವು ವಸುಧೈವ ಕುಟುಂಬಕಂ, ಅಂದರೆ, ಒಂದು ಭೂಮಿ,



ಒಂದು ಕುಟುಂಬ, ಒಂದು ಭವಿಷ್ಯದಲ್ಲಿ ಬೇರೂರಿದೆ. ಈಗ ಈ ಚೈತನ್ಯವು ಭೂಮಿಯಾಚೆಗೆ ಪ್ರಯಾಣಿಸಬೇಕು" ಎಂದು ಪ್ರಧಾನಿ ಹೇಳಿದರು. ಭಾರತವು ಬಾಹ್ಯಾಕಾಶ ವಲಯದಲ್ಲಿ ಸುರಕ್ಷಿತ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ, ಇದು ಸಂವಾದ ಮತ್ತು ಬಹುಪಕ್ಷೀಯ

**34 ದೇಶಗಳ 430 ಕ್ಕೂ ಹೆಚ್ಚು ಉಪಗ್ರಹಗಳು ಭಾರತೀಯ ರಾಕೆಟ್‌ಗಳಲ್ಲಿ ಪ್ರಯಾಣಿಸಿದವು": ಅಂತರರಾಷ್ಟ್ರೀಯ ಬಾಹ್ಯಾಕಾಶ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಇಸ್ರೋಗೆ ಶ್ಲಾಘನೆ**


ಸಹಕಾರದಲ್ಲಿ ನೆಲೆಗೊಂಡಿದೆ ಎಂದು ಅವರು ಗಮನಿಸಿದರು. ಚಂದ್ರಯಾನ–3 ಮತ್ತು ಆದಿತ್ಯ ಎಲ್1 ಕಾರ್ಯಾಚರಣೆಗಳನ್ನು ಶ್ಲಾಘಿಸಿದ ಅವರು, ಭಾರತವು 2035 ರ ವೇಳೆಗೆ ಭಾರತೀಯ ಬಾಹ್ಯಾಕಾಶ ನಿಲ್ದಾಣವನ್ನು ಸ್ಥಾಪಿಸುವ ಮತ್ತು 2040 ರ ವೇಳೆಗೆ ಚಂದ್ರನಿಗೆ ವ್ಯಕ್ತಿಯನ್ನು ಕಳುಹಿಸುವ ಗುರಿಯನ್ನು ಹೊಂದಿದೆ ಎಂದು ಪುನರುಚ್ಚರಿಸಿದರು. ಖಾಸಗಿ ವಲಯದ ಕೊಡುಗೆಯನ್ನು ಎತ್ತಿ ತೋರಿಸುತ್ತಾ, "ಭಾರತದ ಖಾಸಗಿ ಬಾಹ್ಯಾಕಾಶ ವಲಯವು ಸಹ ದೊಡ್ಡ ರೀತಿಯಲ್ಲಿ ಏರುತ್ತಿದೆ. ಉದ್ಯಮದ ಶಕ್ತಿಯು ಇಸ್ರೋದ ಶ್ರೇಷ್ಠತೆಗೆ ಸೇರುತ್ತಿದೆ. 1960 ರ ದಶಕದಲ್ಲಿ ಥುಂಬಾದಲ್ಲಿ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮ ಪ್ರಾರಂಭವಾದಾಗಿನಿಂದ ಫ್ರಾನ್ಸ್ ವಿಶ್ವಾಸಾರ್ಹ ಪಾಲುದಾರ. ಭಾರತದ ಮುಂದಿನ ಬಾಹ್ಯಾಕಾಶ ಗಡಿಯಲ್ಲಿ ಪ್ರಯಾಣಿಕರಾಗಲು ನಾವು ಫ್ರಾನ್ಸ್ ಮತ್ತು ಜಗತ್ತನ್ನು ಆಹ್ವಾನಿಸುತ್ತೇವೆ.

**ಪ್ಯಾರಿಸ್‌ನಲ್ಲಿ ನಡೆಯುವ ಬಾಹ್ಯಾಕಾಶ ಶೃಂಗಸಭೆಯು ಸ್ಪಷ್ಟ ಸಂದೇಶವನ್ನು ಕಳುಹಿಸಲಿ: ಮೋದಿ:** ನಾವು ಒಟ್ಟಾಗಿ ಅನ್ವೇಷಿಸುತ್ತೇವೆ, ಒಟ್ಟಾಗಿ ನಾವೀನ್ಯತೆ ನೀಡುತ್ತೇವೆ ಮತ್ತು ಎಲ್ಲಾ ಮಾನವೀಯತೆ ಮತ್ತು ಮುಂದಿನ ಪೀಳಿಗೆಗಾಗಿ ಒಟ್ಟಾಗಿ ಬಾಹ್ಯಾಕಾಶವನ್ನು ರಕ್ಷಿಸುತ್ತೇವೆ." ಬಾಹ್ಯಾಕಾಶ ಶೃಂಗಸಭೆಯು ಸೆಪ್ಟೆಂಬರ್ 9 ಮತ್ತು 10 ರಂದು ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆಯುತ್ತಿದ್ದು, ಬಾಹ್ಯಾಕಾಶದ ಸುರಕ್ಷಿತ ಮತ್ತು ಸುಸ್ಥಿರ ಬಳಕೆಗೆ ಸಂಬಂಧಿಸಿದ ಸವಾಲುಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ. ಏತನ್ಮಧ್ಯೆ, ಪ್ಯಾರಿಸ್‌ನಲ್ಲಿ ನಡೆದ ಶೃಂಗಸಭೆಯ ಸಂದರ್ಭದಲ್ಲಿ ಭಾರತಕ್ಕೆ ಸಂಬಂಧಿಸಿದ ಹಲವಾರು ಪ್ರಮುಖ ಘೋಷಣೆಗಳನ್ನು ಮಾಡಲಾಗಿದೆ. ಭಾರತದೊಂದಿಗೆ ಬಾಹ್ಯಾಕಾಶ ಸಹಕಾರವನ್ನು ಬಲಪಡಿಸುವುದಾಗಿ ಫ್ರಾನ್ಸ್ ಘೋಷಿಸಿತು. ಬಾಹ್ಯಾಕಾಶ ವಲಯದಲ್ಲಿ ಫ್ರಾಂಕೊ–ಭಾರತೀಯ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸಲು ಸಫ್ರಾನ್ ಸ್ಪೇಸ್ ಫ್ರಾನ್ಸ್ ಭಾರತದ ಧ್ರುವ ಸ್ಪೇಸ್ ನೊಂದಿಗೆ ಹಲವಾರು ಒಪ್ಪಂದಗಳಿಗೆ ಸಹಿ ಹಾಕಿದೆ. 5 ಮಿಲಿಯನ್ ಯುರೋಗಳಿಗಿಂತ ಹೆಚ್ಚು ಮೌಲ್ಯದ ಈ ಒಪ್ಪಂದಗಳು, ಭಾರತದ ಭವಿಷ್ಯದ SBS-III ಬಾಹ್ಯಾಕಾಶ–ಕಣ್ಗಾವಲು ಸಮೂಹಕ್ಕಾಗಿ ಉದ್ದೇಶಿಸಲಾದ ಹಲವಾರು ನಿರ್ಣಾಯಕ ಸಫ್ರಾನ್ ಸ್ಪೇಸ್ ತಂತ್ರಜ್ಞಾನಗಳು, ಸಂವಹನ ವ್ಯವಸ್ಥೆಗಳು, ಜಡತ್ವ ಸಂಚರಣೆ ಘಟಕಗಳು, ಆಪ್ಟಿಕಲ್ ಪೇಲೋಡ್‌ಗಳು ಮತ್ತು ನೆಲದ ಕೇಂದ್ರಗಳನ್ನು ಪೂರೈಸುತ್ತವೆ, ಇದು 2027 ಮತ್ತು 2030 ರ ನಡುವೆ 52 ಉಪಗ್ರಹಗಳನ್ನು ನಿಯೋಜಿಸಲು ಉದ್ದೇಶಿಸಿದೆ.

# ಭಾರತದಲ್ಲಿ ರಷ್ಯಾ ವಿಮಾನಗಳ ವಿಸ್ತರಣೆಗೆ ಸಿದ್ಧತೆ 105 ವಿಮಾನಗಳ ಒಪ್ಪಂದಕ್ಕೆ ಮಾತುಕತೆ

**ನವದೆಹಲಿ,ಸೆ.10:** ಭಾರತದಲ್ಲಿ ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ತನ್ನ ಹೆಜ್ಜೆಗುರುತು ವಿಸ್ತರಿಸಲು ರಷ್ಯಾ ಮುಂದಾಗಿದೆ. ರಷ್ಯಾದ ಯುನೈಟೆಡ್ ಏರ್‌ಕ್ರಾಫ್ಟ್ ಕಾರ್ಪೊರೇಷನ್ ಮತ್ತು ಭಾರತೀಯ ವಿಮಾನಯಾನ ಕಂಪನಿಗಳ ನಡುವೆ ಒಟ್ಟು 105 ಪ್ರಾದೇಶಿಕ ಪ್ರಯಾಣಿಕ ವಿಮಾನಗಳ ಒಪ್ಪಂದಕ್ಕೆ ಮಾತುಕತೆಗಳು ಅಂತಿಮ ಹಂತ ತಲುಪಿವೆ. ದೆಹಲಿಯಲ್ಲಿ ನಡೆಯುತ್ತಿರುವ ಇನ್ನೊಪ್ರೋಮ್ ಇಂಡಿಯಾ ಪ್ರದರ್ಶನದಲ್ಲಿ ಹಲವು ಒಪ್ಪಂದಗಳು ಅಂತಿಮಗೊಳ್ಳುವ ನಿರೀಕ್ಷೆಯಿದೆ.

UACಯ IL–114–300 ಪ್ರಾದೇಶಿಕ ಪ್ರಯಾಣಿಕ ವಿಮಾನಗಳು ಈ ಸಹಕಾರದ ಪ್ರಮುಖ ಕೇಂದ್ರವಾಗಿವೆ. ಕಳೆದ ಆರು ತಿಂಗಳಲ್ಲಿ ಭಾರತೀಯ ಪಾಲುದಾರರೊಂದಿಗೆ ನಡೆದ ಮಾತುಕತೆಗಳು ಗಮನಾರ್ಹ ಪ್ರಗತಿ ಸಾಧಿಸಿವೆ ಎಂದು UAC ಸಿಇಒ ವಾಡಿಮ್ ಬಡೆಖಾ ತಿಳಿಸಿದ್ದಾರೆ.




ಮಾತುಕತೆಯಲ್ಲಿರುವ ಪ್ರಸ್ತಾವನೆಯ ಪ್ರಕಾರ, ಪಿನಾಕಲ್ ಏರ್‌ಗೆ 50 IL–114–300 ವಿಮಾನಗಳು, ಏರ್ ಕೇರಳಕ್ಕೆ 20 ವಿಮಾನಗಳವರೆಗೆ ಹಾಗೂ ಸ್ಲೀಕ್ ಏವಿಯೇಷನ್‌ಗೆ ಸಂಬಂಧಿಸಿದ ಒಪ್ಪಂದದಡಿ 35 ವಿಮಾನಗಳು ಸೇರಿವೆ. ಈ ಮೂಲಕ ಒಟ್ಟು 105 ವಿಮಾನಗಳ ಒಪ್ಪಂದ ರೂಪುಗೊಳ್ಳುವ ಸಾಧ್ಯತೆಯಿದೆ.

ಇದಕ್ಕೂ ಮುನ್ನ ಜನವರಿಯಲ್ಲಿ ಹೈದರಾಬಾದ್‌ನಲ್ಲಿ ನಡೆದ ವಿಂಗ್ಸ್ ಇಂಡಿಯಾ ವಿಮಾನಯಾನ ಪ್ರದರ್ಶನದ ವೇಳೆ ರಷ್ಯಾದ UAC ಮತ್ತು ಭಾರತೀಯ ಕಂಪನಿ ಫ್ಲೆಮಿಂಗೋ ಏರೋಸ್ಪೇಸ್ ನಡುವೆ ಆರು IL–114–300 ವಿಮಾನಗಳ ಸಂಭಾವ್ಯ ಪೂರೈಕೆಗೆ ಪ್ರಾಥಮಿಕ ಒಪ್ಪಂದ ನಡೆದಿತ್ತು.

**ಭಾರತದಲ್ಲೇ SJ–100 ಉತ್ಪಾದನೆಗೆ ಸಿದ್ಧತೆ:** ವಿಮಾನಗಳ ಮಾರಾಟದ ಜತೆಗೆ ಭಾರತವನ್ನೇ ವಿಮಾನ ತಯಾರಿಕ ಕೇಂದ್ರವನ್ನಾಗಿ ಬಳಸಿಕೊಳ್ಳಲು ರಷ್ಯಾ ಆಸಕ್ತಿ ತೋರಿದೆ. ಖಎ–100 ಪ್ರಾದೇಶಿಕ ಜೆಟ್ ವಿಮಾನವನ್ನು ಭಾರತದಲ್ಲಿ ಸ್ಥಳೀಯವಾಗಿ ತಯಾರಿಸುವ ಕುರಿತ ಮಾತುಕತೆಗಳು ಶೇ.80ರಷ್ಟು ಪೂರ್ಣಗೊಂಡಿವೆ ಎಂದು UAC ತಿಳಿಸಿದೆ. ಈ ಕುರಿತು ಶೀಘ್ರದಲ್ಲೇ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ.

ಈ ವರ್ಷದ ಆರಂಭದಲ್ಲಿ UAC ಮತ್ತು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ನಡುವೆ ಭಾರತದಲ್ಲಿ SJ–100 ವಿಮಾನವನ್ನು ಪರವಾನಗಿ ಆಧಾರದ ಮೇಲೆ ಜಂಟಿಯಾಗಿ ತಯಾರಿಸುವ ಸಂಬಂಧ ಒಪ್ಪಂದವೂ ನಡೆದಿತ್ತು. ರಕ್ಷಣಾ ಕ್ಷೇತ್ರದ ಸಾಂಪ್ರದಾಯಿಕ ಸಹಕಾರವನ್ನು ಮೀರಿ ನಾಗರಿಕ ವಿಮಾನಯಾನ, ಪ್ರಾದೇಶಿಕ ಸಂಪರ್ಕ ಮತ್ತು ವಿಮಾನ ತಯಾರಿಕ ಕ್ಷೇತ್ರಗಳಲ್ಲೂ ಭಾರತ–ರಷ್ಯಾ ಕೈಜೋಡಿಸುವ ಸಾಧ್ಯತೆ ಈ ಬೆಳವಣಿಗೆಯಿಂದ ಹೆಚ್ಚಾಗಿದೆ.

ಸೆ.9ರಿಂದ 11ರವರೆಗೆ ನವದೆಹಲಿಯಲ್ಲಿ ನಡೆಯುತ್ತಿರುವ ಇನ್ನೊಪ್ರೋಮ್ ಇಂಡಿಯಾ ಪ್ರದರ್ಶನವು BRICS ಶೃಂಗಸಭೆಗೆ ಮುನ್ನ ನಡೆಯುತ್ತಿದ್ದು, ಇದರಲ್ಲಿ 120ಕ್ಕೂ ಹೆಚ್ಚು ರಷ್ಯಾ ಮತ್ತುಭಾರತೀಯ ಕಂಪನಿಗಳು ಭಾಗವಹಿಸಿವೆ.


## ಉತ್ತರ ಪ್ರದೇಶ ಚುನಾವಣೆಗೂ ಮುನ್ನ ಬಂಫರ್ ಕೊಡುಗೆ

# 1 ಕೋಟಿ ಮಹಿಳೆಯರಿಗೆ 1 ಲಕ್ಷದವರೆಗೆ ಬಡ್ಡಿರಹಿತ ಸಾಲ:ಯೋಗಿ ಘೋಷಣೆ

**ವಾರಾಣಸಿ,ಸೆ.10:** ಉತ್ತರ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮಹತ್ವದ ಘೋಷಣೆ ಮಾಡಿದ್ದಾರೆ. ರಾಜ್ಯದ ಸುಮಾರು 1 ಕೋಟಿ ಮಹಿಳೆಯರಿಗೆ 1 ಲಕ್ಷದವರೆಗೆ ಬಡ್ಡಿರಹಿತ ಸಾಲ ಒದಗಿಸುವ ಯೋಜನೆಯನ್ನು ಘೋಷಿಸಿದ್ದಾರೆ.

ವಾರಾಣಸಿಯಲ್ಲಿ ನಡೆದ ವರ್ಕಿಂಗ್ ವುಮೆನ್ಸ್ ಹಾನರ್ ಸಮಾರಂಭದಲ್ಲಿ ಮಾತನಾಡಿದ ಯೋಗಿ ಆದಿತ್ಯನಾಥ ಮಹಿಳೆಯರು ಸ್ವಾವಲಂಬಿಗಳಾಗಲು ಅಗತ್ಯವಾದ ಬಂಡವಾಳದ ಕೊರತೆ ಎದುರಾಗಬಾರದು ಎಂದು ಹೇಳಿದರು. ಮಹಿಳೆಯರ ಉದ್ಯಮಶೀಲತೆಯನ್ನು ಉತ್ತೇಜಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ತಿಳಿಸಿದರು.

ಯೋಜನೆಯಡಿ ಅರ್ಹ ಮಹಿಳೆಯರಿಗೆ ಒಟ್ಟು 1 ಲಕ್ಷದವರೆಗೆ ಸಾಲ ಸೌಲಭ್ಯವನ್ನು ಹಂತ ಹಂತವಾಗಿ ನೀಡಲಾಗುತ್ತದೆ. ಮೊದಲ ಹಂತದಲ್ಲಿ 20 ಸಾವಿರ, ಎರಡನೇ ಹಂತದಲ್ಲಿ 30 ಸಾವಿರ ಹಾಗೂ ಮೂರನೇ ಹಂತದಲ್ಲಿ 50 ಸಾವಿರ ನೀಡುವ ಪ್ರಸ್ತಾವವಿದೆ. ಮೊದಲ ಹಂತದ 20 ಸಾವಿರವನ್ನು ಡಿಸೆಂಬರ್‌ನಲ್ಲಿ ನೀಡಲು ಸರ್ಕಾರ ಉದ್ದೇಶಿಸಿದೆ. ನಂತರದ ಹಂತಗಳಲ್ಲಿ ಉಳಿದ ಮೊತ್ತವನ್ನು ಬಿಡುಗಡೆ



ಮಾಡಲಾಗುತ್ತದೆ. ಉತ್ತರ ಪ್ರದೇಶ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್‌ಗೆ ಸಂಪರ್ಕ ಹೊಂದಿರುವ ಮಹಿಳೆಯರಿಗೆ ವಿಶೇಷ ಕ್ರೆಡಿಟ್ ಕಾರ್ಡ್ ಒದಗಿಸಲಾಗುತ್ತದೆ. ಇದರ ಮೂಲಕ ಬ್ಯಾಂಕ್‌ಗಳಿಂದ ಅಗತ್ಯ ಹಣಕಾಸು ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ. ಈ ಕ್ರೆಡಿಟ್ ಸೌಲಭ್ಯಕ್ಕೆ ಸಂಬಂಧಿಸಿದ ಬಡ್ಡಿ ಹೊಣೆಯನ್ನು ಸರ್ಕಾರದ ಗ್ರಾಮೀಣ ಜೀವನೋಪಾಯ ಮಿಷನ್ ಭರಿಸಲಿದೆ. ಹೀಗಾಗಿ ಫಲಾನುಭವಿಗಳಿಗೆ ಸಾಲ ಬಡ್ಡಿರಹಿತವಾಗಿರಲಿದೆ. ಯೋಜನೆಯನ್ನು ಮೂರು ವರ್ಷಗಳ ಅವಧಿಯಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಮಹಿಳೆಯರು ಸಣ್ಣ ಉದ್ಯಮ ಆರಂಭಿಸಲು, ಈಗಾಗಲೇ ನಡೆಸುತ್ತಿರುವ ಉದ್ಯಮವನ್ನು ವಿಸ್ತರಿಸಲು ಹಾಗೂ ಆದಾಯ ಹೆಚ್ಚಿಸುವ ಚಟುವಟಿಕೆಗಳಿಗೆ ಈ ಹಣವನ್ನು ಬಳಸಿಕೊಳ್ಳಬಹುದಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಸ್ವಸಹಾಯ ಸಂಘಗಳ ಮಹಿಳೆಯರಿಗೆ ಇದರಿಂದ ಹೆಚ್ಚಿನ ಅನುಕೂಲವಾಗುವ ನಿರೀಕ್ಷೆಯಿದೆ. ಕೃಷಿ, ಪಶುಸಂಗೋಪನೆ, ಆಹಾರ ಸಂಸ್ಕರಣೆ, ಸಣ್ಣ ವ್ಯಾಪಾರ, ಕರಕುಶಲ ಸೇರಿದಂತೆ ವಿವಿಧ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಅಗತ್ಯವಿರುವ ಆರಂಭಿಕ ಬಂಡವಾಳವನ್ನು ಒದಗಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಈಗಾಗಲೇ ಬ್ಯಾಂಕ್‌ಗಳೊಂದಿಗೆ ಚರ್ಚೆ ನಡೆಸಿದೆ. ಸಾರ್ವಜನಿಕ ವಲಯದ ಬ್ಯಾಂಕ್, ಖಾಸಗಿ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಹಿಳೆಯರಿಗೆ ಸುಲಭವಾಗಿ ಸಾಲ ಸೌಲಭ್ಯ ತಲುಪಿಸುವ ಕುರಿತು ಚರ್ಚಿಸಲಾಗಿದೆ. ಗ್ರಾಮೀಣ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಸರ್ಕಾರದ ಪ್ರಯತ್ನದ ಭಾಗವಾಗಿ ಈ ಯೋಜನೆಯನ್ನು ನೋಡಲಾಗುತ್ತಿದೆ. ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರನ್ನು ಉದ್ಯಮಶೀಲರನ್ನಾಗಿ ರೂಪಿಸುವುದರೊಂದಿಗೆ ಲಖಪತಿ ದೀದಿ ಗುರಿಗೂ ಯೋಜನೆ ನೆರವಾಗಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

# ಮಕ್ಕಳ ಅಪಹರಣ ಪ್ರಕರಣಗಳ ತನಿಖೆಗೆ ಏಕರೂಪ ವ್ಯವಸ್ಥೆ: ಕೇಂದ್ರ, ರಾಜ್ಯಗಳಿಗೆ ಸುಪ್ರೀಂ ನೋಟಿಸ್

**ನವದೆಹಲಿ,ಸೆ.10:** ಮಕ್ಕಳು ನಾಪತ್ತೆಯಾಗುವುದು, ಅಪಹರಣಕ್ಕೊಳಗಾಗುವುದು ಹಾಗೂ ಬಲವಂತವಾಗಿ ಕರೆದೊಯ್ಯುವ ಪ್ರಕರಣಗಳ ತನಿಖೆ ಕುರಿತು ಸುಪ್ರೀಂ ಕೋರ್ಟ್ ಮಹತ್ವದ ವಿಚಾರಣೆ ನಡೆಸಿದ್ದು, ಕೇಂದ್ರ ಸರ್ಕಾರ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ ಸಂಬಂಧಿತ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿದೆ. ಮಕ್ಕಳ ನಾಪತ್ತೆ ಮತ್ತು ಅಪಹರಣ ಪ್ರಕರಣಗಳ ತನಿಖೆಗೆ ದೇಶಾದ್ಯಂತ ಏಕರೂಪ ವ್ಯವಸ್ಥೆ ರೂಪಿಸಬೇಕು, ತನಿಖೆಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು ಹಾಗೂ ವಿಶೇಷ ತನಿಖಾ ಪ್ರಕ್ರಿಯೆ ಜಾರಿಗೆ ತರಬೇಕು ಎಂದು ಕೋರಿ ವಕೀಲ ಅಶ್ವಿನಿ ಉಪಾಧ್ಯಯ ಸೇರಿ ಹಲವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನ ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠ ವಿಚಾರಣೆ ನಡೆಸಿತು. ವಿಚಾರಣೆಯ ಸಮಯದಲ್ಲಿ ನ್ಯಾಯಪೀಠವು ಕೇಂದ್ರ ಸರ್ಕಾರ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜತೆಗೆ ಶಿಕ್ಷಣ ಸಚಿವಾಲಯ, ಕಾನೂನು ಮತ್ತು ನ್ಯಾಯ ಸಚಿವಾಲಯ, ಗೃಹ ಸಚಿವಾಲಯ ಹಾಗೂ ಕಾನೂನು ಆಯೋಗಕ್ಕೂ ನೋಟಿಸ್ ಜಾರಿ ಮಾಡಿದೆ.

ಮಕ್ಕಳ ಅಪಹರಣ ಮತ್ತು ಬಲವಂತವಾಗಿ ಕರೆದೊಯ್ಯುವ ಪ್ರಕರಣಗಳ ತನಿಖೆಗೆ ದೇಶಾದ್ಯಂತ ಒಂದೇ ರೀತಿಯ ವ್ಯವಸ್ಥೆ ರೂಪಿಸುವಂತೆ ತನಿಖೆಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ವ್ಯವಸ್ಥೆ ಜಾರಿಗೆ ತರಬೇಕು. ಇಂತಹ ಪ್ರಕರಣಗಳಿಗಾಗಿ ವಿಶೇಷ ತನಿಖಾ ಪ್ರಕ್ರಿಯೆ ರೂಪಿಸಬೇಕು,ಪ್ರಕರಣಗಳ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ವಿಶೇಷ ನ್ಯಾಯಾಲಯಗಳ ವ್ಯವಸ್ಥೆ ಮಾಡಬೇಕು ಎಂದು ಅರ್ಜಿಯಲ್ಲಿ ಒತ್ತಾಯಿಸಲಾಗಿದೆ.

## ಎಸ್.ಡಿ.ಎಂ. ಆರೋಹಂ: ರಾಷ್ಟ್ರಮಟ್ಟದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉತ್ಸವ ಉದ್ಘಾಟನೆ

# ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನದೊಂದಿಗೆ ಮಾನಸಿಕ ಶಾಂತಿ, ಸಂತೋಷ ಲಭ್ಯ: ಶ್ರದ್ಧಾ ಅಮಿತ್




**ಉಜಿರೆ,ಸೆ.10:** ವಿದ್ಯೆಯ ಜೊತೆಗೆ ಕ್ರೀಡೆಗಳು, ಯಕ್ಷಗಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಮೊದಲಾದ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ವ್ಯಕ್ತಿತ್ವ ವಿಕಸನದೊಂದಿಗೆ ಮಾನಸಿಕ ಶಾಂತಿ, ತೃಪ್ತಿ ಮತ್ತು ಸಂತೋಷ ಸಿಗುತ್ತದೆ ಎಂದು ಬೆಂಗಳೂರು ನೆಲಮಂಗಲದಲ್ಲಿರುವ ಕ್ಷೇಮವನದ ಸಿ.ಇ.ಒ. ಶ್ರದ್ಧಾ ಅಮಿತ್ ಹೇಳಿದರು.

ಅವರು ಗುರುವಾರ ಉಜಿರೆಯಲ್ಲಿ ಎಸ್.ಡಿ.ಎಂ. ಸ್ವಾಯತ್ತ ಕಾಲೇಜಿನಲ್ಲಿ ಇಂದ್ರಪ್ರಸ್ಥ ಸಭಾಂಗಣದಲ್ಲಿ ಎಸ್.ಡಿ.ಎಂ. ಆರೋಹಂ ಎರಡು ದಿನಗಳ ರಾಷ್ಟ್ರಮಟ್ಟದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರ ದಕ್ಷ ನೇತೃತ್ವದಲ್ಲಿ ಎಲ್ಲಾ ವಿಭಾಗದವರು ಸಂಘಟಿತರಾಗಿ ಅತ್ಯಂತ ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ ಉತ್ಸವವನ್ನು ಆಯೋಜಿಸಿರುವುದರ ಬಗ್ಗೆ ಅವರು ವಿಶೇಷ ಸಂತಸ ಮತ್ತು ಅಭಿನಂದನೆ ವ್ಯಕ್ತಪಡಿಸಿದರು. ಇದೊಂದು ಮಾದರಿ ಕಾರ್ಯಕ್ರಮವಾಗಿದ್ದು ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಚಿಂತನೆ, ಸಂವಹನ ಕೌಶಲ, ಪರಸ್ಪರ ಪ್ರೀತಿ–ವಿಶ್ವಾಸ ಮತ್ತು ಗೌರವದೊಂದಿಗೆ ನಾಯಕತ್ವ ಮತ್ತು ಸಂಘಟನೆಯ ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಮನುಷ್ಯರು ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವ ಬದಲು ನಮಗೆ ಬೇಕಾದಂತೆ ಹೊಂದಿಕೊಳ್ಳುವ ತಂತ್ರಜ್ಞಾನವನ್ನು ಬಳಕೆ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಶುಭಾಶಂಸನೆ ಮಾಡಿದ ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪ್ರೊ. ಎಸ್. ಸತೀಶ್ಚಂದ್ರ ಮಾತನಾಡಿ, ಪ್ರತಿಯೊಬ್ಬರಲ್ಲಿಯೂ ಸುಪ್ತ ಪ್ರತಿಭೆ ಮತ್ತು ಕೌಶಲವಿದ್ದು, ಪಠ್ಯೇತರ ಚಟುವಟಿಕೆಗಳು ಧೈರ್ಯ ಮತ್ತು ಆತ್ಮವಿಶ್ವಾಸದೊಂದಿಗೆ ಸಾರ್ಥಕ ಬದುಕಿಗೆ ಬೇಕಾದ ಜೀವನ ಶಿಕ್ಷಣ ನೀಡುತ್ತವೆ ಎಂದು ಹೇಳಿದರು.


ಎಸ್.ಡಿ.ಎಂ. ಕಾಲೇಜಿನ ಪ್ರಾಂಶುಪಾಲ ಪ್ರೊ. ವಿಶ್ವನಾಥ ಪಿ. ಅಧ್ಯಕ್ಷತೆ ವಹಿಸಿದ್ದರು.

ಉಪಪ್ರಾಂಶುಪಾಲೆ ನಂದಕುಮಾರಿ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉತ್ಸವದ ಸಂಘಟಕ ಗಣೇಶ ನಾಯಕ್ ಉಪಸ್ಥಿತರಿದ್ದರು.

ಡಾ. ದಿವಾಕರ ಕೆ. ಕಾರ್ಯಕ್ರಮ ನಿರ್ವಹಿಸಿದರು.

ರಾಜ್ಯದ 17 ಪದವಿ ಕಾಲೇಜುಗಳು ಹಾಗೂ 20 ಪದವಿಪೂರ್ವ ಕಾಲೇಜುಗಳಿಂದ ಒಂದು ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾರೆ.

# ಭಾರತದಲ್ಲಿ ಉನ್ನತ ಶಿಕ್ಷಣವು ಮಾರ್ಪಾಡು ಮಾಡಿಸಿಕೊಂಡಿದ್ದಕ್ಕಾಗಿ ಬೆಲೆ ತೆರುತ್ತಿದೆ: ಕಾಂಗ್ರೆಸ್



**ನವದೆಹಲಿ, ಸೆ.10:** ರಾಷ್ಟ್ರೀಯ ಪ್ರಾಮುಖ್ಯದ ಹಲವಾರು ಸಂಸ್ಥೆಗಳು ಮಧ್ಯಂತರ ಮುಖ್ಯಸ್ಥ ರೊಂದಿಗೆ ಕಾರ್ಯ ನಿರ್ವಹಿಸುತ್ತಿವೆ ಎಂದು ವರದಿಯಾಗಿರುವ ಬಗ್ಗೆ ಕಾಂಗ್ರೆಸ್ ಗುರುವಾರ ನರೇಂದ್ರ ಮೋದಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಭಾರತದಲ್ಲಿ ಉನ್ನತ ಶಿಕ್ಷಣವು "ಮಾರ್ಪಾಡು ಮಾಡಿಸಿಕೊಂಡಿದ್ದಕ್ಕಾಗಿ ಬೆಲೆ ತೆರುತ್ತಿದೆ" ಎಂದು ಹೇಳಿದೆ.

ರಾಷ್ಟ್ರೀಯ ಪ್ರಾಮುಖ್ಯತೆಯ 155 ಸಂಸ್ಥೆಗಳಲ್ಲಿ 37 ಸಂಸ್ಥೆಗಳಲ್ಲಿ ನಿಯಮಿತ, ಪೂರ್ಣ ಸಮಯದ ಮುಖ್ಯಸ್ಥರಿಲ್ಲ ಎಂದು ರಮೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕೇಂದ್ರೀಯ ವಿಶ್ವವಿದ್ಯಾಲಯಗಳು, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು (ಐಐಐಟಿಗಳು), ಭಾರತೀಯ ನಿರ್ವಹಣಾ ಸಂಸ್ಥೆಗಳು (IIMಗಳು) ಮತ್ತು ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಗಳು ಗಳಲ್ಲಿನ ಖಾಲಿ ಹುದ್ದೆಗಳನ್ನು ಸಹ ಅವರು ಎತ್ತಿ ತೋರಿಸಿದರು. "ಇದು ನಿಜಕ್ಕೂ ಸ್ವೀಕಾರಾರ್ಹವಲ್ಲದ ಸ್ಥಿತಿ – ರಾಷ್ಟ್ರೀಯ ಪ್ರಾಮುಖ್ಯತೆಯ 155 ಸಂಸ್ಥೆಗಳಲ್ಲಿ 37 ಸಂಸ್ಥೆಗಳಲ್ಲಿ ನಿಯಮಿತ, ಪೂರ್ಣ ಸಮಯದ ಮುಖ್ಯಸ್ಥರಿಲ್ಲ" ಎಂದು ರಮೇಶ್ ಹೇಳಿದರು.

ಹಿರಿಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹುದ್ದೆಗಳಲ್ಲಿನ ಖಾಲಿ ಹುದ್ದೆಗಳ ಬಗ್ಗೆ ಕಾಂಗ್ರೆಸ್ ಪದೇ ಪದೇ ಕಳವಳ ವ್ಯಕ್ತಪಡಿಸಿದೆ, ಕಾರ್ಯನಿರ್ವಹಿಸುವ ಅಥವಾ ವಿಸ್ತೃತ ಅಧಿಕಾರಾವಧಿಯ ಮೂಲಕ ದೀರ್ಘಕಾಲದ ವ್ಯವಸ್ಥೆಗಳು ಸಾಂಸ್ಥಿಕ ಸ್ವಾಯತ್ತತೆ, ಶೈಕ್ಷಣಿಕ ಆಡಳಿತ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಪರಿಣಾಮ ಬೀರಬಹುದು ಎಂದು ವಾದಿಸಿದೆ. ವಿಶ್ವವಿದ್ಯಾನಿಲಯಗಳು ಮತ್ತು ಪ್ರಮುಖ ತಾಂತ್ರಿಕ ಮತ್ತು ನಿರ್ವಹಣಾ ಸಂಸ್ಥೆಗಳು ಶೈಕ್ಷಣಿಕ ಕಾರ್ಯಕ್ರಮಗಳು, ನೇಮಕಾತಿಗಳು, ಸಂಶೋಧನೆ, ಹಣಕಾಸು ಮತ್ತು ದೀರ್ಘಕಾಲೀನ ಸಾಂಸ್ಥಿಕ ಯೋಜನೆಯನ್ನು ಮೇಲ್ವಿಚಾರಣೆ ಮಾಡಲು ಪೂರ್ಣ ಸಮಯದ ಮುಖ್ಯಸ್ಥರನ್ನು ಅವಲಂಬಿಸಿವೆ.

ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿ ಮತ್ತು ಸ್ವಾಯತ್ತತೆಯ ಕುರಿತು ವ್ಯಾಪಕ ರಾಜಕೀಯ ಚರ್ಚೆಯ ಮಧ್ಯೆ ರಮೇಶ್ ಅವರ ಹೇಳಿಕೆಗಳು ಬಂದಿವೆ, ನರೇಂದ್ರ ಮೋದಿ ಸರ್ಕಾರವು ಶಿಕ್ಷಣ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಮತ್ತು ಸ್ಥಾಪಿತ ಶೈಕ್ಷಣಿಕ ರಚನೆಗಳನ್ನು ದುರ್ಬಲಗೊಳಿಸುತ್ತಿದೆ ಎಂದು ವಿರೋಧ ಪಕ್ಷಗಳು ಆಗಾಗ್ಗೆ ಆರೋಪಿಸುತ್ತಿವೆ.

# ಎಐನಿಂದ ದೊಡ್ಡ ಕಂಪನಿಗಳಲ್ಲಿ ಕೆಲಸಕ್ಕೆ ಕತ್ತರಿ: ಲಕ್ಷಾಂತರ ಸಣ್ಣ ಕಂಪನಿಗಳಿಂದ ಉದ್ಯೋಗ ಸೃಷ್ಟಿ: ನಂದನ್ ನಿಲೇಕಣಿ



**ನವದೆಹಲಿ, ಸೆ.10:** ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಆಗಮನದಿಂದ ಜಾಗತಿಕ ಮಟ್ಟದಲ್ಲಿ ಉದ್ಯೋಗ ನಷ್ಟದ ಆತಂಕ ವ್ಯಕ್ತವಾಗುತ್ತಿರುವ ಬೆನ್ನಲ್ಲೇ, ಇನ್ಫೋಸಿಸ್ ಸಹ ಸ್ಥಾಪಕ ಮತ್ತು ಆಧಾರ್ ರೂವಾರಿ ನಂದನ್ ನಿಲೇಕಣಿ ಅವರು ಆಶಾವಾದ ಮುಂದಿಟ್ಟಿದ್ದಾರೆ. ದೊಡ್ಡ ಕಾರ್ಪೊರೇಟ್ ಕಂಪನಿಗಳು ವೆಚ್ಚ ತಗ್ಗಿಸಲು ಎಐ ಬಳಸಿ ಉದ್ಯೋಗ ಕಡಿತಗೊಳಿಸಬಹುದು. ಆದರೆ, ಭಾರತದಂತಹ ದೇಶಗಳಲ್ಲಿ ಕೋಟ್ಯಂತರ ಸಣ್ಣ ಮತ್ತು ಮಧ್ಯಮ ಉದ್ಯಮಗಳು ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ ಉದ್ಯೋಗಗಳನ್ನು ಸೃಷ್ಟಿಸಲಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಅಂದರೆ, ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ದಕ್ಷತೆ ಹೆಚ್ಚಿಸಿಕೊಳ್ಳಲು ಮತ್ತು ಕಾರ್ಯಾಚರಣೆಯ ವೆಚ್ಚ ತಗ್ಗಿಸಲು ಎಐ ತಂತ್ರಜ್ಞಾನವನ್ನು ವೇಗವಾಗಿ ಅಳವಡಿಸಿಕೊಳ್ಳುತ್ತಿವೆ. ಇದರಿಂದಾಗಿ ಆ ಸಂಸ್ಥೆಗಳಲ್ಲಿ ಸಾಂಪ್ರದಾಯಿಕ ಉದ್ಯೋಗಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ, ಭಾರತದಲ್ಲಿ ಲಕ್ಷಾಂತರ ಸಣ್ಣ ಉದ್ಯಮಗಳು, ಕಿರಾಣಿ ಅಂಗಡಿಗಳು ಮತ್ತು ಸ್ಥಳೀಯ ಸೇವಾದಾರರಿದ್ದಾರೆ. ಎಐ ತಂತ್ರಜ್ಞಾನವನ್ನು ಸರಳಗೊಳಿಸಿ ಈ ಸಣ್ಣ ಉದ್ಯಮಗಳಿಗೆ ತಲುಪಿಸಿದರೆ, ಅವರ ವ್ಯಾಪಾರ ವೃದ್ಧಿಯಾಗಿ ಹೆಚ್ಚಿನ ಜನರಿಗೆ ಕೆಲಸ ನೀಡಲು ಸಾಧ್ಯವಾಗುತ್ತದೆ ಎಂಬುದು ನಿಲೇಕಣಿ ಅವರ ಅನಿಸಿಕೆ.

ಡಿಜಿಟಲ್ ಮೂಲಸೌಕರ್ಯದ ಪಾತ್ರ: ಭಾರತದ ಡಿಜಿಟಲ್ ಪಬ್ಲಿಕ್ ಇನ್ಫ್ರಾಸ್ಟ್ರಕ್ಚರ್ (ಯುಪಿಐ, ಒಎನ್‌ಡಿಸಿ ಇತ್ಯಾದಿ) ಸಣ್ಣ ವ್ಯಾಪಾರಿಗಳಿಗೆ ಆನ್ಲೈನ್ ಮಾರುಕಟ್ಟೆ ಪ್ರವೇಶಿಸಲು ನೆರವಾಗಿದೆ. ಇದಕ್ಕೆ ಎಐ ಬೆಂಬಲ ಸಿಕ್ಕರೆ ಸಣ್ಣ ಉದ್ಯಮಗಳು ದೊಡ್ಡ ಕಂಪನಿಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತದೆ ಎಂದು ಇನ್ಫೋಸಿಸ್ ಸಹ–ಸಂಸ್ಥಾಪಕರು ತಿಳಿಸಿದ್ದಾರೆ.

**ಕೌಶಲ್ಯ ವೃದ್ಧಿ:** ಎಐ ತಂತ್ರಜ್ಞಾನವು ಮಾನವ ಶಕ್ತಿಯನ್ನು ಸಂಪೂರ್ಣವಾಗಿ ತೆಗೆದುಹಾಕುವುದಿಲ್ಲ, ಬದಲಿಗೆ ಕೆಲಸ ಮಾಡುವ ವಿಧಾನವನ್ನು ಬದಲಾಯಿಸುತ್ತದೆ. ಆದ್ದರಿಂದ ಯುವಜನತೆ ಎಐ ಉಪಕರಣಗಳನ್ನು ಬಳಸುವ ಕೌಶಲ್ಯವನ್ನು ಕಲಿತುಕೊಳ್ಳುವುದು ಅಗತ್ಯವಾಗಿದೆ ಎಂದಿದ್ದಾರೆ. ತಂತ್ರಜ್ಞಾನವನ್ನು ಕೇವಲ ಬೃಹತ್ ಕಂಪನಿಗಳ ಶಕ್ತಿಯಾಗಿ ನೋಡದೆ, ಸಮಾಜದ ತಳಮಟ್ಟದ ಉದ್ಯಮಿಗಳಿಗೆ ತಲುಪಿಸಿದಾಗ ಮಾತ್ರ ಉದ್ಯೋಗ ಭದ್ರತೆ ಮತ್ತು ಆರ್ಥಿಕ ಸಮಾನತೆ ಸಾಧ್ಯ ಎಂದು ನಿಲೇಕಣಿ ಪ್ರತಿಪಾದಿಸಿದ್ದಾರೆ.

# ರಾಷ್ಟ್ರೀಯ ಮಹಿಳಾ ಆಯೋಗದ ಕಾರ್ಯಾಗಾರ ಬಹಿಷ್ಕರಿಸಿದ ಕೇರಳ ಶಾಸಕಿಯರು

**ಫರಿದಾಬಾದ್, ಸೆ. 10:** ರಾಷ್ಟ್ರೀಯ ಮಹಿಳಾ ಆಯೋಗ ಹರಿಯಾಣದ ಫರಿದಾಬಾದ್‌ನಲ್ಲಿ ಆಯೋಜಿಸಿದ್ದ ಮಹಿಳಾ ಶಾಸಕರ ಎರಡು ದಿನಗಳ ಸಾಮರ್ಥ್ಯವರ್ಧನಾ ಕಾರ್ಯಾಗಾರದಿಂದ ಕೇರಳದ ಎಂಟು ಮಹಿಳಾ ಶಾಸಕರು ವಾಕ್‌ಔಟ್ ಮಾಡಿದ್ದಾರೆ.

ಕಾರ್ಯಾಗಾರದಲ್ಲಿ ಬಹುತೇಕ ವಿಷಯಗಳನ್ನು ಹಿಂದಿಯಲ್ಲೇ ನಡೆಸಲಾಗಿದ್ದು, ದಕ್ಷಿಣ ಭಾರತ ಹಾಗೂ ಈಶಾನ್ಯ ರಾಜ್ಯಗಳ ಶಾಸಕರಿಗೆ ಭಾಷೆ ಅರ್ಥಮಾಡಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಿರಲಿಲ್ಲ ಎಂದು ಅವರು ಆರೋಪಿಸಿದ್ದಾರೆ. ಕಾರ್ಯಾಗಾರವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಉದ್ಘಾಟಿಸಿದ್ದರು. ದೇಶದ ವಿವಿಧ ರಾಜ್ಯಗಳ ಮಹಿಳಾ ಶಾಸಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೇರಳ ವಿಧಾನಸಭೆಯ ಉಪಸಭಾಧ್ಯಕ್ಷೆ ಶಾನಿಮೋಲ್ ಉಸ್ಮಾನ್ ಸೇರಿದಂತೆ ಕೇರಳದ ಪ್ರತಿನಿಧಿಗಳು, ಶಾಸಕರಿಗೆ ಅಗತ್ಯವಿರುವ ಶಾಸನಾತ್ಮಕ ಹಾಗೂ ನೀತಿ ರೂಪಿಸುವ ವಿಚಾರಗಳ ಬದಲು ಅತ್ಯಂತ ಮೂಲಭೂತ ವಿಷಯಗಳ ಕುರಿತು ತರಗತಿಗಳನ್ನು ನಡೆಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸ್ವಸಹಾಯ ಸಂಘಗಳು ಎಂದರೇನು, ಪೊಲೀಸ್ ಠಾಣೆಗೆ ದೂರು ಅಥವಾ ಅರ್ಜಿ ಸಲ್ಲಿಸುವುದು ಹೇಗೆ ಎಂಬಂತಹ ವಿಷಯಗಳನ್ನು ಕಾರ್ಯಾಗಾರದಲ್ಲಿ ವಿವರಿಸಲಾಗಿತ್ತು. ಇವು ಶಾಸಕರಿಗೆ ಈಗಾಗಲೇ ತಿಳಿದಿರುವ ಮೂಲಭೂತ ವಿಚಾರಗಳು ಎಂದು ಅವರು ಹೇಳಿದ್ದಾರೆ.

ತಮ್ಮ ವಿರೋಧ ಹಿಂದಿ ಭಾಷೆಯ ವಿರುದ್ಧವಲ್ಲ, ಆದರೆ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ದಕ್ಷಿಣ ಭಾರತ ಮತ್ತು ಈಶಾನ್ಯ ರಾಜ್ಯಗಳಿಂದ ಬಂದ ಪ್ರತಿನಿಧಿಗಳಿಗೂ ಅರ್ಥವಾಗುವಂತೆ ಇಂಗ್ಲಿಷ್ ಅಥವಾ ಇತರ ಭಾಷೆಗಳ ನೆರವು ನೀಡಬೇಕಿತ್ತು ಎಂಬುದು ಅವರ ವಾದ. ಕಾರ್ಯಾಗಾರದ ಬಹುತೇಕ ಚರ್ಚೆಗಳು ಹಿಂದಿಯಲ್ಲೇ ನಡೆದ ಹಿನ್ನೆಲೆಯಲ್ಲಿ ಇಂಗ್ಲಿಷ್ ಬಳಕೆಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದರೂ ಅದನ್ನು ಪರಿಗಣಿಸಲಾಗಲಿಲ್ಲ ಎಂದು ಕೇರಳದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಬಿಂದು ಕೃಷ್ಣ ಆರೋಪಿಸಿದ್ದಾರೆ.

ಕೇರಳದ ಪ್ರತಿನಿಧಿಗಳು ರಾಷ್ಟ್ರೀಯ ಮಹಿಳಾ ಆಯೋಗದ ನೇತೃತ್ವಕ್ಕೆ ತಮ್ಮ ಆಕ್ಷೇಪವನ್ನು ಸಲ್ಲಿಸಿ, ದೇಶದ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇಂತಹ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಎಲ್ಲ ರಾಜ್ಯಗಳ ಪ್ರತಿನಿಧಿಗಳನ್ನೂ ಒಳಗೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಭಾಷಾ ವಿಚಾರವಾಗಿ ಆಕ್ಷೇಪ ವ್ಯಕ್ತವಾದ ಸಂದರ್ಭದಲ್ಲಿ ಕೆಲವರು ಭಾರತ ಮಾತಾ ಕಿ ಜೈ ಮತ್ತು ಜೈ ಶ್ರೀರಾಮ್ ಘೋಷಣೆಗಳನ್ನು ಕೂಗಿದರು ಎಂದು ಕೇರಳದ ಶಾಸಕರು ಆರೋಪಿಸಿದ್ದಾರೆ. ಉತ್ತರ ಭಾರತದ ಕೆಲ ಪ್ರತಿನಿಧಿಗಳು ಹಿಂದಿಯೇ ರಾಷ್ಟ್ರೀಯ ಭಾಷೆ, ಚರ್ಚೆಗಳು ಹಿಂದಿಯಲ್ಲೇ ನಡೆಯಬೇಕು ಎಂದು ಹೇಳಿದ್ದಾಗಿ ಕೂಡ ಅವರು ತಿಳಿಸಿದ್ದಾರೆ. ಬಳಿಕ ಕೇರಳದ ಎಂಟು ಮಹಿಳಾ ಶಾಸಕರು ಕಾರ್ಯಕ್ರಮದಿಂದ ಹೊರನಡೆದಿದ್ದಾರೆ.

ನಿಯೋಗದಲ್ಲಿ ಉಪಸಭಾಧ್ಯಕ್ಷೆ ಶಾನಿಮೋಲ್ ಉಸ್ಮಾನ್, ಸಚಿವರಾದ ಬಿಂದು ಕೃಷ್ಣ ಮತ್ತು ಕೆ.ಎ. ತುಳಸಿ ಹಾಗೂ ಶಾಸಕರಾದ ಕೆ.ಕೆ. ರೇಮಾ, ಫಾತಿಮಾ ತಹ್ಲಿಯಾ, ವಿದ್ಯಾ ಬಾಲಕೃಷ್ಣನ್ ಮತ್ತು ಉಷಾ ವಿಜಯನ್ ಸೇರಿದಂತೆ ಎಂಟು ಮಂದಿ ಇದ್ದರು. ಕಾಂಗ್ರೆಸ್ ಸಂಸದ ಶಶಿ ತರೂರ್ ಕೂಡ ಪ್ರತಿಕ್ರಿಯಿಸಿದ್ದು, ಸರ್ಕಾರ ಒಕ್ಕೂಟ ವ್ಯವಸ್ಥೆಯ ಅರ್ಥವನ್ನು ತಪ್ಪಾಗಿ ಗ್ರಹಿಸುತ್ತಿದೆ ಎಂದು ಟೀಕಿಸಿದ್ದಾರೆ.

# ಸುಲಭ, ನಗದುರಹಿತ ಪ್ರಯಾಣಕ್ಕೆ ನಮ್ಮ ಬಿಎಂಟಿಸಿ ಮೊಬೈಲ್ ಆಪ್ 2.0ಗೆ ಸಿಎಂ ವಿಧ್ಯುಕ್ತ ಚಾಲನೆ

**ಬೆಂಗಳೂರು, ಸೆ.10:** ರಾಜಧಾನಿಯ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಸ್ಮಾರ್ಟ್, ಸುಲಭ ಹಾಗೂ ನಗದುರಹಿತವಾಗಿಸುವ ನಿಟ್ಟಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೂತನವಾಗಿ ಅಭಿವೃದ್ಧಿ ಪಡಿಸಿರುವ "ನಮ್ಮ ಬಿಎಂಟಿಸಿ ಮೊಬೈಲ್ ಆಪ್ 2.0"ಗೆ ಅಧಿಕೃತ ಚಾಲನೆ ದೊರೆತಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ವಿನೂತನ ಮೊಬೈಲ್ ಅಪ್ಲಿಕೇಶನ್ ಅನ್ನು ಲೋಕಾರ್ಪಣೆಗೊಳಿಸಿದರು. ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಸಾರಿಗೆ ಸಚಿವ ಬೈರತಿ ಸುರೇಶ್, ಸಾರಿಗೆ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಘುನಂದನ್ ಮೂರ್ತಿ ಸೇರಿದಂತೆ ಸಚಿವ ಸಂಪುಟದ ಸದಸ್ಯರು ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ಭಾಗವಹಿಸಿದ್ದರು.

**ಬಿಎಂಟಿಸಿ ಮತ್ತು ನಮ್ಮ ಮೆಟ್ರೋ ಏಕೀಕೃತ ಟಿಕೆಟಿಂಗ್**

ನೂತನ ಆಪ್‌ನ ಪ್ರಮುಖ ವೈಶಿಷ್ಟ್ಯವೆಂದರೆ ಬಿಎಂಟಿಸಿ ಬಸ್ ಹಾಗೂ ನಮ್ಮ ಮೆಟ್ರೋ (BMRCL) ಎರಡಕ್ಕೂ ಒಂದೇ ವೇದಿಕೆಯಲ್ಲಿ ಟಿಕೆಟ್ ಪಡೆಯುವ ಸೌಲಭ್ಯ ಕಲ್ಪಿಸಲಾಗಿದೆ. ಪ್ರಯಾಣಿಕರು ಆಪ್ ಮೂಲಕವೇ ನೇರವಾಗಿ ಮೆಟ್ರೋದ ಕ್ಯೂಆರ್ ಟಿಕೆಟ್‌ಗಳನ್ನು ಖರೀದಿಸಬಹುದಾಗಿದ್ದು, ಬಸ್ ಮತ್ತು ಮೆಟ್ರೋ ಸಂಯೋಜಿತ ಬಹುಮಾದರಿ ಪ್ರಯಾಣ ಅತ್ಯಂತ ಸುಗಮವಾಗಲಿದೆ.

**ಪ್ರಯಾಣಿಕರ ಬೆರಳ ತುದಿಯಲ್ಲೇ ಸಮಗ್ರ ಸೇವೆಗಳು**

–ಸಂಚರಿಸುತ್ತಿರುವ ಬಸ್‌ಗಳ ನೈಜ ಸ್ಥಳ, ನಿಲ್ದಾಣಕ್ಕೆ ಬರುವ ನಿಖರ ಅಂದಾಜು ಸಮಯ ಹಾಗೂ ಮಾರ್ಗದ ವಿವರಗಳನ್ನು ಲೈವ್ ಆಗಿ ವೀಕ್ಷಿಸಬಹುದು. –ಪ್ರಯಾಣ ಯೋಜಕ ಪ್ರಯಾಣಿಕರು ತಾವು ಹೊರಡುವ ಸ್ಥಳ ಮತ್ತು ತಲುಪಬೇಕಾದ ತಾಣವನ್ನು ನಮೂದಿಸಿದರೆ ಬಸ್, ಮೆಟ್ರೋ ಅಥವಾ ಎರಡೂ ಸಾರಿಗೆಗಳ ಸಂಯೋಜಿತ ಮಾರ್ಗಗಳ ಆಯ್ಕೆ ಲಭ್ಯವಾಗಲಿದೆ.

**–ಡಿಜಿಟಲ್ ಬಸ್‌ಪಾಸ್ ಸೌಲಭ್ಯ:** ಸಾಮಾನ್ಯ ಸೇವಾಪಾಸ್, ಎಕ್ಸ್‌ಪ್ರೆಸ್, ವಜ್ರ ಗೋಲ್ಡ್, ವಾಯುವಜ್ರ ಹಾಗೂ ನೈಸ್ ರಸ್ತೆ ಸೇರಿದಂತೆ ಸಂಸ್ಥೆಯ ಎಲ್ಲಾ ಮಾದರಿಯ ಪಾಸ್‌ಗಳನ್ನು ಈ ಆಪ್ ಮೂಲಕವೇ ಖರೀದಿಸಲು ಅವಕಾಶವಿದೆ. –ಯುಪಿಐ ಹಾಗೂ ಮೊಬೈಲ್ ವಾಲೆಟ್‌ಗಳ ಮೂಲಕ ಸುಲಭವಾಗಿ ಟಿಕೆಟ್ ಹಾಗೂ ಪಾಸ್‌ಗಳಿಗೆ ಹಣ ಪಾವತಿಸಬಹುದು. –ಆಪ್ ಸಂಪೂರ್ಣವಾಗಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿದ್ದು, ನಿಲ್ದಾಣಗಳ ಹೆಸರು, ರಸೀದಿಗಳು ಎರಡೂ ಭಾಷೆಗಳಲ್ಲಿ ದೊರೆಯಲಿವೆ.




ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎರಡನೇ ಹಾಗೂ ಸಿಎಂ ನೇತೃತ್ವದಲ್ಲಿ ಮೊದಲ ಸಭೆ ಗುರುವಾರ ನಡೆಯಿತು. ಈ ವೇಳೆ ಸಚಿವ ಹಾಗೂ ಜಿಬಿಎ ಉಪಾಧ್ಯಕ್ಷ ಕೃಷ್ಣಬೈರೇಗೌಡ, ಸಚಿವರಾದ ಕೆ.ಜೆ ಜಾರ್ಜ್, ಜಮೀರ್ ಅಹ್ಮದ್ ಖಾನ್, ರಾಜ್ಯಸಭಾ ಸದಸ್ಯರಾದ ಮನ್ಸೂರ್ ಅಲಿಖಾನ್, ಲೆಹರ್‌ಸಿಂಗ್ ಸಿರೋಯಾ, ಬಿಡಿಎ ಅಧ್ಯಕ್ಷ ಹಾಗೂ ಶಾಸಕರಾದ ಎನ್.ಎ ಹ್ಯಾರೀಸ್, ದಿನೇಶ್ ಗುಂಡೂರಾವ್, ಡಾ. ಸಿ.ಎನ್.ಅಶ್ವಥ್‌ನಾರಾಯಣ್, ಕೆ. ಗೋಪಾಲಯ್ಯ, ಎಸ್.ಟಿ.ಸೋಮಶೇಖರ್, ಎಸ್.ಮುನಿರಾಜು, ಎ.ಸಿ.ಶ್ರೀನಿವಾಸ್, ಎಂಎಲ್‌ಸಿಗಳಾದ ಎಂ. ನಾಗರಾಜ್, ಸುಧಾಮ್‌ದಾಸ್, ಟಿ.ಎನ್ ಜವರಾಯಿಗೌಡ, ವಿನಯ ಕಾರ್ತಿಕ್ ಪ್ರಕಾಶ್, ಬಿ.ಎಸ್.ಶಿವಣ್ಣ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ ಮಹೇಶ್ವರ್‌ರಾವ್, ನಗರಪಾಲಿಕೆ ಆಯುಕ್ತರು, ಜಿಬಿಎ ಪದನಿಮಿತ್ತ ಸದಸ್ಯರು ಹಾಜರಿದ್ದರು.

### ಸುರಂಗ ಮಾರ್ಗಕ್ಕೆ ಲಾಲ್‌ಬಾಗ್ ಬದಲು ಪರ್ಯಾಯ ಸ್ಥಳ ಹುಡುಕಾಟ

# ಯೋಜನೆಗೆ ಭಾರಿ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಸರ್ಕಾರಕ್ಕೆ ಎದುರಾಯಿತು ಹೊಸ ಸವಾಲು

**ಬೆಂಗಳೂರು, ಸೆ.10:** ಲಾಲ್‌ಬಾಗ್ ಪ್ರದೇಶದಲ್ಲಿ ಸುರಂಗದ ನಿರ್ಗಮನ ದ್ವಾರ ನಿರ್ಮಿಸುವ ಯೋಜನೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ, ಸರ್ಕಾರದ ಎದುರು ಹೊಸ ಪ್ರಶ್ನೆಯೊಂದು ದೊಡ್ಡದಾಗಿ ನಿಂತಿದೆ. ಲಾಲ್‌ಬಾಗ್ ಜಾಗವನ್ನು ಕೈಬಿಟ್ಟರೆ, ಟನಲ್ ಎಕ್ಸಿಟ್ ಗೇಟ್‌ಗೆ ಪರ್ಯಾಯ ಜಾಗ ಯಾವುದು ಎನ್ನುವ ಸವಾಲು ಎದುರಾಗಿದೆ.

ಲಾಲ್‌ಬಾಗ್‌ನಿಂದ ಟನಲ್ ಮಾರ್ಗವನ್ನು ಬದಲಿಸುವುದು ಅಷ್ಟು ಸುಲಭದ ವಿಚಾರವಲ್ಲ. ಯೋಜನೆಯ ಅಲೈನ್‌ಮೆಂಟ್ ಬದಲಾದರೆ ನಗರದ ದಟ್ಟ ಜನವಸತಿ ಪ್ರದೇಶಗಳ ಮೂಲಕ ಟನಲ್ ಹಾದುಹೋಗಬೇಕಾದ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇದೆ. ಇದರಿಂದ ನೂರಾರು ಮನೆಗಳು, ಬೋರ್‌ವೆಲ್‌ಗಳು ಹಾಗೂ ಸಾರ್ವಜನಿಕ ಮೂಲಸೌಕರ್ಯಗಳ ಮೇಲೆ ಪರಿಣಾಮ ಬೀರುವ ಆತಂಕ ವ್ಯಕ್ತವಾಗಿದೆ.

**ಲಾಲ್‌ಬಾಗ್ ಕೈಬಿಟ್ಟರೆ ಒಂದೇ ಮಾರ್ಗವೇ?**

ಲಾಲ್‌ಬಾಗ್ ಪ್ರದೇಶದ ಆಯ್ಕೆಯನ್ನು ಸಂಪೂರ್ಣವಾಗಿ ಕೈಬಿಟ್ಟರೆ




ಸರ್ಕಾರದ ಮುಂದಿರುವ ಅಲೈನ್‌ಮೆಂಟ್ ಆಯ್ಕೆಗಳು ಸೀಮಿತವಾಗಬಹುದು. ಪರ್ಯಾಯ ಮಾರ್ಗದಲ್ಲಿ ಟನಲ್ ಸಾಗಿಸಿದರೆ ನೂರಾರು ಮನೆಗಳು, ಖಾಸಗಿ ಆಸ್ತಿಗಳು, ಬೋರ್‌ವೆಲ್‌ಗಳು ಮತ್ತು ಕೆಲವು ಸಾರ್ವಜನಿಕ ಪ್ರದೇಶಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗಿದೆ.

ಹೀಗಾಗಿ ಸರ್ಕಾರಕ್ಕೆ ಇದೀಗ ಎರಡು ದೊಡ್ಡ ಸವಾಲುಗಳು ಎದುರಾಗಿವೆ. ಒಂದು ಕಡೆ ಲಾಲ್‌ಬಾಗ್ ಪ್ರದೇಶದ ಸಂರಕ್ಷಣೆ ಮತ್ತು ಸಾರ್ವಜನಿಕ ವಿರೋಧವನ್ನು ಗಮನಿಸಬೇಕು. ಮತ್ತೊಂದೆಡೆ ಯೋಜನೆಯ ತಾಂತ್ರಿಕ ಸಾಧ್ಯತೆ, ಟನಲ್ ಮಾರ್ಗದ ಸುರಕ್ಷತೆ ಹಾಗೂ ಪರ್ಯಾಯ ಪ್ರದೇಶಗಳಲ್ಲಿ ಉಂಟಾಗಬಹುದಾದ ಜನವಿರೋಧವನ್ನು ಎದುರಿಸಬೇಕು.


**ಪರ್ಯಾಯ ಮಾರ್ಗಗಳ ಪಟ್ಟಿ**

ವಿಲ್ಸನ್ ಗಾರ್ಡನ್ ಸ್ಮಶಾನ, ಸಿದ್ದಾಪುರ ಕೊಳಗೇರಿ, ಸೋಮೇಶ್ವರ ನಗರ, ನಿಮ್ಹಾನ್ಸ್ ಪ್ರದೇಶ, ಗುಲ್ಬರ್ಗ ಕಾಲೋನಿ, ತಿಲಕ್ ನಗರ ಮತ್ತು ಬನ್ನೇರುಘಟ್ಟ ರಸ್ತೆ ಜಾಗಗಳ ಪರಿಶೀಲನೆ ನಡೆಯುತ್ತಿದೆ.

ಲಾಲ್‌ಬಾಗ್ ಉಳಿಸಬೇಕು ಎಂಬ ಒತ್ತಾಯದ ನಡುವೆ, ಹಾಗಾದರೆ ಟನಲ್ ಎಕ್ಸಿಟ್ ಎಲ್ಲಿಗೆ ಎಂಬ ಪ್ರಶ್ನೆಗೆ ಸರ್ಕಾರ ಸ್ಪಷ್ಟ ಉತ್ತರ ನೀಡಬೇಕಾದ ಪರಿಸ್ಥಿತಿ ನಿರ್ಮಾಣ ವಾಗಿದೆ. ಪರ್ಯಾಯ ಮಾರ್ಗಗಳಲ್ಲಿ ಯಾವುದನ್ನೇ ಅಂತಿಮಗೊಳಿಸಿದರೂ ಸ್ಥಳೀಯ ನಿವಾಸಿಗಳು ಹಾಗೂ ಸಂಘಟನೆಗಳಿಂದ ತೀವ್ರ ವಿರೋಧ ಎದುರಾಗುವ ಸಾಧ್ಯತೆ ಇದೆ.

ಹೀಗಾಗಿ ಲಾಲ್‌ಬಾಗ್ ಟನಲ್ ಎಕ್ಸಿಟ್ ವಿವಾದ ಕೇವಲ ಒಂದು ಜಾಗದ ಪ್ರಶ್ನೆಯಾಗಿ ಉಳಿದಿಲ್ಲ. ಲಾಲ್‌ಬಾಗ್ ಉಳಿಸಬೇಕೇ, ಅಥವಾ ಪರ್ಯಾಯ ಮಾರ್ಗದಲ್ಲಿ ನೂರಾರು ಮನೆ ಮತ್ತು ಜನವಸತಿ ಪ್ರದೇಶಗಳ ಆತಂಕವನ್ನು ಎದುರಿಸಬೇಕೇ ಎಂಬ ಕಠಿಣ ಆಯ್ಕೆ ಈಗ ಸರ್ಕಾರದ ಮುಂದಿದೆ.

## ಸೆಪ್ಟೆಂಬರ್‌ನಲ್ಲಿ ವಾಡಿಕೆಗಿಂತ ಹೆಚ್ಚಿನ ತಾಪಮಾನ: ಕಳೆದ ಮೂರು ವರ್ಷಗಳಲ್ಲೇ ಗರಿಷ್ಠ 32-33 ಡಿ.ಸೆ. ದಾಖಲು



**ಬೆಂಗಳೂರು, ಸೆ.10:** ಸಾಮಾನ್ಯವಾಗಿ ಮಳೆಗಾಲವಾಗಿರುವ ಸೆಪ್ಟೆಂಬರ್ ತಿಂಗಳಲ್ಲಿ, ಬೆಂಗಳೂರು ಅಸಾಮಾನ್ಯ ಬಿಸಿಲಿನ ತಾಪ ಎದುರಿಸುವಂತಾಗಿದೆ.

ಕಳೆದ ಒಂದು ವಾರದಿಂದ ನಗರದಲ್ಲಿ ಗರಿಷ್ಠ 31.22 ಡಿ.ಸೆ. ತಾಪಮಾನ ದಾಖಲಾಗಿದ್ದು, ಇದು ಸೆಪ್ಟೆಂಬರ್‌ನಲ್ಲಿ ಕಳೆದ ಮೂರು ವರ್ಷಗಳಲ್ಲೇ ಅತಿಹೆಚ್ಚು.

ಹವಾಮಾನ ತಜ್ಞರ ಪ್ರಕಾರ, ಪ್ರಸ್ತುತ ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ 32–33ಡಿ.ಸೆ. ಆಸುಪಾಸಿನಲ್ಲಿದ್ದು, ಇದು ವಾಡಿಕೆಗಿಂತ 4 ಡಿ.ಸೆ. ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ತಾಪಮಾನ 33 ಡಿ.ಸೆ. ಆಸುಪಾಸಿಗೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಈ ಅನಿರೀಕ್ಷಿತ ಬಿಸಿಲಿಗೆ ಪ್ರಮುಖ ಕಾರಣ ಎಲ್‌ನಿನೋ ಪರಿಣಾಮ ಎಂದು ಹವಾಮಾನ ತಜ್ಞ ಸಿಎಸ್ ಪಾಟೀಲ್ ವಿಶ್ಲೇಷಿಸಿದ್ದಾರೆ.

ಮೋಡಗಳ ಕೊರತೆ ಮತ್ತು ಮಳೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿರುವುದು ಭೂಮಿ ಬೇಗ ಬಿಸಿಯಾಗಲು ಕಾರಣವಾಗಿದೆ. ಮಣ್ಣಿನಲ್ಲಿನ ತೇವಾಂಶದ ಕೊರತೆಯೂ ತಾಪಮಾನ ಏರಿಕೆಗೆ ಸಹಕಾರಿಯಾಗಿದೆ.

ಮುಂದಿನ ಒಂದು ವಾರದವರೆಗೆ ಇದೇ ಪರಿಸ್ಥಿತಿ ಮುಂದುವರೆಯುವ ಸಾಧ್ಯತೆ ಇದ್ದು, ಸೆಪ್ಟೆಂಬರ್ 16 ರ ನಂತರ ಮಳೆಯಾಗುವ ನಿರೀಕ್ಷೆ ಇದೆ. ದಕ್ಷಿಣ ಒಳನಾಡು, ಕಲಬುರ್ಗಿ, ಉಡುಪಿ ಮತ್ತು ಮಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಬಿಸಿಲಿನ ಝಳ ಹೆಚ್ಚಾಗಿದೆ.

### ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಿಎಸ್‌ಆರ್ ನೆರವು

# ಶಿಕ್ಷಣ ಸಚಿವ ಮಧು ಬಂಗಾರಪ್ಪ ಜತೆ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್ ನಿಯೋಗದ ಚರ್ಚೆ

**ಬೆಂಗಳೂರು, ಸೆ.10:** ರಾಜ್ಯದ ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯ ಬಲವರ್ಧನೆಗೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಸಂಬಂಧ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್ ವತಿಯಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಮಧು ಬಂಗಾರಪ್ಪ ಅವರನ್ನು ಭೇಟಿಮಾಡಿ ಮಹತ್ವದ ಸಮಾಲೋಚನೆ ನಡೆಸಲಾಯಿತು. ಭವಿಷ್ಯ ಬೆಳಕು ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರಾದ ಗಿರೀಶ್ ನಲ್ಕುದ್ರಿ ಅವರ ನೇತೃತ್ವದಲ್ಲಿ ತೆರಳಿದ್ದ ನಿಯೋಗವು ಸಚಿವರನ್ನು ಭೇಟಿ ಮಾಡಿ, ಟ್ರಸ್ಟ್ ಮೂಲಕ ಸಿಎಸ್‌ಆರ್ ಸಹಯೋಗದೊಂದಿಗೆ ಸರ್ಕಾರಿ ಶಾಲೆಗಳಲ್ಲಿ ಕೈಗೊಳ್ಳಬಹುದಾದ ಯೋಜನೆಗಳ ಕುರಿತು ಮನವರಿಕೆ ಮಾಡಿಕೊಟ್ಟಿತು.

ಗ್ರಾಮೀಣ ಹಾಗೂ ಹಿಂದುಳಿದ ಭಾಗಗಳ ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಶಿಕ್ಷಣ, ಸುಸಜ್ಜಿತ ಗ್ರಂಥಾಲಯ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸಿಎಸ್‌ಆರ್ ಅನುದಾನವನ್ನು ಕ್ರೋಡೀಕರಿಸಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಚಿವರ ಜತೆ ಸವಿಸ್ತಾರವಾಗಿ ಚರ್ಚಿಸಲಾಯಿತು.


ಸರ್ಕಾರದೊಂದಿಗೆ ಕೈಜೋಡಿಸಿ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸಂಸ್ಥೆ ಸಿದ್ಧವಿದೆ ಎಂದು ಟಸ್ಟ್‌ನ ಪದಾಧಿಕಾರಿಗಳು ತಿಳಿಸಿದರು.

ಸರ್ಕಾರಿ ಶಾಲೆಗಳ ಸಬಲೀ



ಕರಣಕ್ಕೆ ಸಂಸ್ಥೆಯು ತೋರುತ್ತಿರುವ ಆಸಕ್ತಿ ಯನ್ನು ಶ್ಲಾಘಿಸಿದ ಸಚಿವ ಮಧು ಬಂಗಾರಪ್ಪ ಅವರು, ಸಿಎಸ್‌ಆರ್ ಯೋಜನೆಗಳ ಮೂಲಕ ಕೈಜೋಡಿಸುವ ಸಮಾಜಮುಖಿ ಕಾರ್ಯಗಳಿಗೆ ಶಿಕ್ಷಣ ಇಲಾಖೆಯ ವತಿಯಿಂದ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

# ಸತೀಶ್ ಜಾರಕಿಹೊಳಿ ಕಚೇರಿ, ನಿವಾಸದ ಮೇಲೆ ಇ.ಡಿ. ದಾಳಿ ಮುಂದುವರಿಕೆ



**ಬೆಂಗಳೂರು, ಸೆ.10:** ವಿದೇಶದಲ್ಲಿ ಅಕ್ರಮವಾಗಿ ಹಣ ಹೂಡಿಕೆ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಕಚೇರಿ ಹಾಗೂ ನಿವಾಸಗಳ ಮೇಲೆ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಗುರುವಾರವೂ ದಾಳಿ ಮುಂದುವರೆಸಿದ್ದಾರೆ. ಸಚಿವ ಸತೀಶ್ ಜಾರಕಿಹೊಳಿ ಅವರ ಕಚೇರಿ ನಿವಾಸ ಸೇರಿ 18 ಕಡೆಗಳಲ್ಲಿ ಬುಧವಾರ ಬೆಳಗ್ಗೆಯಿಂದ ನಡೆದಿರುವ ದಾಳಿಯನ್ನು ಮುಂದುವರೆಸಿರುವ ಇಡಿ ಅಧಿಕಾರಿಗಳು ಶೋಧ ಕೈಗೊಂಡು ದಾಖಲೆ ಪತ್ರಗಳ ಪರಿಶೀಲನೆ ಕೈಗೊಂಡಿದ್ದಾರೆ.

ಗೋಕಾಕಿನ ಸಚಿವ ಸತೀಶ ಜಾರಕಿಹೊಳಿ ನಿವಾಸ, ಬಾವಮೈದುನ ಅಬಕಾರಿ ಇಲಾಖೆ ಅಪರ ಆಯುಕ್ತ ಡಾ. ವೈ. ಮಂಜುನಾಥ ಬೆಳಗಾವಿ ನಿವಾಸ, ಸತೀಶ ಜಾರಕಿಹೊಳಿ ಆಪ್ತ ಡಾ. ಗಿರೀಶ್ ಸೋನವಾಲ್ಕರ್ ಮನೆಯಲ್ಲಿ ಇ.ಡಿ ಅಧಿಕಾರಿಗಳು ನಡೆಯುತ್ತಿರುವ ದಾಖಲೆಗಳ ಪರಿಶೀಲನೆಯು ಮುದುವರೆದಿದೆ.

ಅದೇ ರೀತಿ ಡಾ.ವೈ. ಮಂಜುನಾಥ ಆಪ್ತ ಸಹಾಯಕಿ ಪ್ರೀತಿ ಕಾಕತ್ಕರ್ ಅವರ ಮನೆ ಮೇಲೂ ದಾಳಿ ಮಾಡಲಾಗಿದೆ

ಸತೀಶ ಜಾರಕಿಹೊಳಿ ಅವರ ಆಪ್ತರಾದ ವಿಠ್ಠಲ ಪರಸನ್ನವರ, ರಾಜು ಧರಗಶೆಟ್ಟಿ, ಮಲಗೌಡ ಪಾಟೀಲ ನಿವಾಸದ ಮೇಲಿನ ಇಡಿ ದಾಳಿ ಮುಕ್ತಾಯವಾಗಿದ್ದು, ಇಲ್ಲಿ ಸತೀಶ ಅವರಿಗೆ ಸಂಬಂಧಿಸಿದ ಯಾವೆಲ್ಲಾ ದಾಖಲೆಗಳು ಸಿಕ್ಕಿವೆ ಎಂಬುದು ಇ.ಡಿ ಅಧಿಕಾರಿಗಳ ಮಾಹಿತಿಯ ಬಳಿಕ ಗೊತ್ತಾಗ ಬೇಕಿದೆ.

ಕಳೆದ 30 ಗಂಟೆಗಳಿಂದ ಇ.ಡಿ ಅಧಿಕಾರಿಗಳು ತಪಾಸಣೆ ನಡೆಸುತ್ತಿದ್ದು ಬುಧವಾರ ರಾಜ್ಯಾದ್ಯಂತ ಬೆಂಗಳೂರು, ಬೆಳಗಾವಿ, ಗೋಕಾಕ್ ಸೇರಿ ಒಟ್ಟು 18 ಕಡೆ ಏಕಕಾಲಕ್ಕೆ ದಾಳಿ ನಡೆಸಲಾಗಿತ್ತು. ದಾಳಿ ಮುಂದುವರಿದಿದ್ದು, ಸದ್ಯ ಸತೀಶ ಜಾರಕಿಹೊಳಿ ಬೆಂಗಳೂರಿನಲ್ಲಿದ್ದಾರೆ.

ಗೋಕಾಕಿನಲ್ಲಿ ಅವರ ಪತ್ನಿ ಶಕುಂತಲಾ, ಪುತ್ರಿ ಪ್ರಿಯಾಂಕಾ ಜಾರಕಿಹೊಳಿ, ಪುತ್ರ ರಾಹುಲ್ ಜಾರಕಿಹೊಳಿ ಅವರಿಂದ ಇ.ಡಿ ಅಧಿಕಾರಿಗಳ ತಂಡ ಮಾಹಿತಿ ಕಲೆ ಹಾಕುತ್ತಿದೆ. ಅರೆಸೇನಾ ಪಡೆಯ ಭದ್ರತೆಯಲ್ಲಿ ದಾಖಲೆಗಳ ಪರಿಶೀಲನೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

**18 ಗಂಟೆ ವಿಚಾರಣೆ:**

ಊಟದ ಬ್ರೇಕ್ ಬಳಿಕ ಸಹ ವಿಚಾರಣೆ ನಡೆಸಲಾಗಿತ್ತು. ತಡರಾತ್ರಿ 2 ಗಂಟೆಯ ತನಕ ಸುಮಾರು 18 ಗಂಟೆಗಳ ಕಾಲ ವಿಚಾರಣೆ ನಡೆಸಿ ಮಾಹಿತಿಯನ್ನು ಕಲೆ ಹಾಕಲಾಗಿತ್ತು. ತಡರಾತ್ರಿ 3 ಗಂಟೆಗೆ ಸಚಿವ ಸತೀಶ್ ಜಾರಕಿಹೊಳಿಯವರಿಗೆ ನಿದ್ರೆ ಮಾಡುವುದಕ್ಕೆ ಅಧಿಕಾರಿಗಳು ಅವಕಾಶ ಕಲ್ಪಿಸಿಕೊಟ್ಟಿದ್ದರು.

ಬಳಿಕ ಮುಂಜಾನೆ 7 ಗಂಟೆಯಿಂದ ಆರಂಭಗೊಂಡ ಇ.ಡಿ. ದಾಳಿ ಇಂದು ಸಹ ಮುಂದುವರೆದಿದೆ. ಎಲ್ಲಾ ಕಡೆ ಶೋಧ ಮುಗಿಯೋವರೆಗೂ ಸತೀಶ್ ಜಾರಕಿಹೊಳಿ ನಿವಾಸದಲ್ಲೇ ಇಡಿ ಅಧಿಕಾರಿಗಳು ಇರಲಿದ್ದಾರೆ. ಸಂಪೂರ್ಣ ದಾಳಿ ಅಂತ್ಯವಾದ ಬಳಿಕ ಪಂಚನಾಮೆ ನಡೆಯಲಿದೆ.

# ಗೌರಿ-ಗಣೇಶ ಹಬ್ಬಕ್ಕೆ ರಾಜ್ಯಾದ್ಯಂತ ಭಾರಿ ಬಂದೋಬಸ್ತ್

## ವಿವಿಧ ವಲಯ, ಜಿಲ್ಲೆಗಳ ಉಸ್ತುವಾರಿಗೆ ಹಿರಿಯ ಅಧಿಕಾರಿಗಳನ್ನು ನೇಮಿಸಿ ಡಿಜಿಪಿ ಡಾ. ಎಂ.ಎ.ಸಲೀಂ ಆದೇಶ

**ಬೆಂಗಳೂರು, ಸೆ. 10:** ಗೌರಿ–ಗಣೇಶ ಹಬ್ಬದ ಸಂಭ್ರಮಕ್ಕೆ ರಾಜ್ಯವೇ ಸಜ್ಜಾಗಿದೆ. ಆದರೆ ಹಬ್ಬದ ಉತ್ಸಾಹದ ನಡುವೆ ಶಾಂತಿ, ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆ ಕಾಪಾಡುವುದು ಪೊಲೀಸ್ ಇಲಾಖೆಯ ದೊಡ್ಡ ಸವಾಲು. ಈ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಇಲಾಖೆ ಬೃಹತ್ ಬಂದೋಬಸ್ತ್ ಯೋಜನೆ ರೂಪಿಸಿ, ಹಿರಿಯ ಅಧಿಕಾರಿಗಳನ್ನೇ ವಿವಿಧ ವಲಯಗಳು ಮತ್ತು ಜಿಲ್ಲೆಗಳ ಉಸ್ತುವಾರಿಗೆ ನಿಯೋಜಿಸಿದೆ.

ಹಬ್ಬದ ಸಂಭ್ರಮದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗೌರಿ–ಗಣೇಶ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಶಾಂತಿ, ಸುವ್ಯವಸ್ಥೆ ಹಾಗೂ ಭದ್ರತೆ ಕಾಪಾಡಲು ಪೊಲೀಸ್ ಇಲಾಖೆಯು ಬೃಹತ್ ಬಂದೋಬಸ್ತ್ ವ್ಯವಸ್ಥೆ ಕೈಗೊಂಡಿದೆ.

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಡಾ. ಎಂ.ಎ. ಸಲೀಂ ಅವರ ಆದೇಶದಂತೆ, ರಾಜ್ಯದ ವಿವಿಧ ವಲಯಗಳು, ನಗರಗಳು ಹಾಗೂ ಜಿಲ್ಲೆಗಳ ಬಂದೋಬಸ್ತ್ ಉಸ್ತುವಾರಿ ನೋಡಿಕೊಳ್ಳಲು ಹಿರಿಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಈ ಆದೇಶದಂತೆ, ಎಡಿಜಿಪಿ ಆರ್. ಹಿತೇಂದ್ರ ಅವರನ್ನು ಬೆಳಗಾವಿ ನಗರ ಮತ್ತು ಉತ್ತರ ವಲಯಕ್ಕೆ, ಎಡಿಜಿಪಿ ಬಿ.ಕೆ. ಸಿಂಗ್ ಅವರನ್ನು ಮೈಸೂರು ನಗರ ಮತ್ತು ದಕ್ಷಿಣ ವಲಯಕ್ಕೆ, ಎಡಿಜಿಪಿ ಮುರುಗನ್ ಅವರನ್ನು ಶಿವಮೊಗ್ಗ ಹಾಗೂ ದಾವಣಗೆರೆ ವಲಯಕ್ಕೆ, ಎಡಿಜಿಪಿ ಹೇಮಂತ್ ಎಂ. ನಿಂಬಾಳ್ಕರ್ ಅವರನ್ನು ಬೆಂಗಳೂರು ಕೇಂದ್ರ ವಲಯಕ್ಕೆ, ಎಡಿಜಿಪಿ ಎಂ. ಚಂದ್ರಶೇಖರ್ ಅವರನ್ನು ಮಂಗಳೂರು ಪಶ್ಚಿಮ ವಲಯಕ್ಕೆ ಹಾಗೂ ಎಡಿಜಿಪಿ ದೇವಜ್ಯೋತಿ ರೇ ಅವರನ್ನು ಕಲಬುರಗಿ ನಗರ ಮತ್ತು ಈಶಾನ್ಯ ವಲಯಕ್ಕೆ ನಿಯೋಜಿಸಲಾಗಿದೆ.

ಇದೇ ರೀತಿ, ಐಜಿಪಿ ಲಾಬೂರಾಮ್ ಅವರನ್ನು ಹುಬ್ಬಳ್ಳಿ–ಧಾರವಾಡ ನಗರಕ್ಕೆ, ಐಜಿಪಿ ಚೇತನ್ ಸಿಂಗ್ ರಾಥೋಡ್ ಅವರನ್ನು ಬಾಗಲಕೋಟೆ ಜಿಲ್ಲೆಗೆ, ಐಜಿಪಿ ಅಮಿತ್ ಸಿಂಗೋ ಅವರನ್ನು ಚಿಕ್ಕಮಗಳೂರು ಜಿಲ್ಲೆಗೆ, ಡಾ. ತ್ಯಾಗರಾಜನ್ ಕೆ ಅವರನ್ನು ರಾಯಚೂರು ಜಿಲ್ಲೆಗೆ, ಡಿಐಜಿಪಿ ಟಿ. ಶ್ರೀಧರರನ್ನು ಕೊಪ್ಪಳ ಜಿಲ್ಲೆಗೆ, ಡಿಐಜಿಪಿ ವಿಷ್ಣುವರ್ಧನ ಎನ್ ಅವರನ್ನು ಹಾವೇರಿ ಜಿಲ್ಲೆಗೆ ಹಾಗೂ ನಿರ್ದೇಶಕರು, ಕೆಪಿಎ ಮೈಸೂರು ಅವರನ್ನು ಮಂಡ್ಯ ಜಿಲ್ಲೆಗೆ ಬಂದೋಬಸ್ತ್ ಉಸ್ತುವಾರಿ ವಹಿಸಲಾಗಿದೆ.

ಅದೇ ಸಮಯದಲ್ಲಿ, ಎಸ್‌ಪಿ ರಿಷ್ಯಂತ್ ಅವರನ್ನು ಬೆಳಗಾವಿ ನಗರಕ್ಕೆ, ಎಸ್‌ಪಿ ಲೋಕೇಶ್ ಭರಮಪ್ಪ ಜಗಲಾಸರ್ ಅವರನ್ನು ಹುಬ್ಬಳ್ಳಿ–ಧಾರವಾಡ ನಗರಕ್ಕೆ, ಕಮಾಂಡೆಂಟ್ ಅಮರನಾಥ ರೆಡ್ಡಿ ಅವರನ್ನು ಬಾಗಲಕೋಟೆ ಜಿಲ್ಲೆಗೆ, ಎಸ್‌ಪಿ ಎಂ. ರಾಜೀವ್ ಅವರನ್ನು ಶಿವಮೊಗ್ಗ ಜಿಲ್ಲೆಗೆ, ಎಸ್‌ಪಿ ಎಂ.ಎನ್. ಕರಿಬಸವನಗೌಡ ಹಾಗೂ ಎಸ್‌ಪಿ ನಂಜುಂಡೇಗೌಡ ಕೆ. ಅವರನ್ನು ಮಂಡ್ಯ ಜಿಲ್ಲೆಗೆ, ಎಸ್‌ಪಿ ನಾಗರಾಜ್ ಕೆ.ಎಸ್. ಅವರನ್ನು ಚಿಕ್ಕಮಗಳೂರು ಜಿಲ್ಲೆಗೆ, ಹಾಗೂ ಎಸ್‌ಪಿ ಬಿ.ಎಸ್. ಶ್ರೀನಿವಾಸ್ ಅವರನ್ನು ಉತ್ತರ ಕನ್ನಡ ಜಿಲ್ಲೆಗೆ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಅಧಿಕಾರಿಗಳು ತಮ್ಮ ತಮ್ಮ ವಲಯಗಳಲ್ಲಿ ಖುದ್ದಾಗಿ ಹಾಜರಿದ್ದು, ಪ್ರಮುಖ ಗಣೇಶ ವಿಸರ್ಜನೆ ಸಂದರ್ಭಗಳಲ್ಲಿ ಯಾವುದೇ



ಅಹಿತಕರ ಘಟನೆಗಳು ನಡೆಯದಂತೆ ಬಂದೋಬಸ್ತ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

ರಾಜ್ಯದಾದ್ಯಂತ ಪೊಲೀಸ್ ಇಲಾಖೆಯು ಸಮಗ್ರ ಸಿದ್ಧತೆ ಕೈಗೊಂಡಿದ್ದು, ಹಬ್ಬದ ಸಂದರ್ಭದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆ ಕಾಪಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

# 20 ಮಂದಿ ಕ್ವಿಜ್ ವಿಜೇತರಿಗೆ ಉಚಿತ ಕಾಶಿ, ಪ್ರಯಾಗ ಯಾತ್ರೆ ಭಾಗ್ಯ

**ಬೆಂಗಳೂರು, ಸೆ.10:** ಮಹಾ ಶಿವರಾತ್ರಿ ಅಂಗವಾಗಿ ವಿಜಯನಗರ ದಲ್ಲಿ ಆಯೋಜಿಸಲಾಗಿದ್ದ ಕ್ವಿಜ್‌ನಲ್ಲಿ ವಿಜೇತರಾದ 20 ಮಂದಿಗೆ ನೀಡಿದ್ದ ಭರವಸೆಯಂತೆ ಪವಿತ್ರ ಕಾಶಿ, ಪ್ರಯಾಗಕ್ಕೆ ಉಚಿತ ವಿಮಾನಯಾತ್ರೆ ಕಲ್ಪಿಸಲಾಗಿದ್ದು, ವಿಜೇತ 20 ಮಂದಿಗೆ ವಿಮಾನ ಟಿಕೆಟ್‌ಗಳನ್ನು ವಿತರಿಸಿ, ಪವಿತ್ರಯಾತ್ರೆಗೆ ಶುಭ ಹಾರೈಸಿ ಬೀಳ್ಕೊಡಲಾಯಿತು.

ಇದೇ ವರ್ಷದ ಫೆಬ್ರವರಿ 15ರಂದು ವಿಜಯನಗರದಲ್ಲಿ ಅಹೋರಾತ್ರಿ ನಡೆದ ಮಹಾಶಿವರಾತ್ರಿ ಕಾರ್ಯಕ್ರಮದಲ್ಲಿ ವಿಜಯನಗರ ಹಾಗೂ ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರಗಳ ಸಾರ್ವಜನಿಕರಿಗಾಗಿ ವಿಶೇಷ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿತ್ತು.

ವಿಜೇತರಾದ 20 ಮಂದಿಗೆ ಕಾಶಿ–ಪ್ರಯಾಗ್‌ನಂತಹ ಪವಿತ್ರ ಕ್ಷೇತ್ರಗಳಿಗೆ ಉಚಿತ ವಿಮಾನಯಾತ್ರೆ ಕಲ್ಪಿಸುವುದಾಗಿ ಭರವಸೆ ನೀಡಲಾಗಿತ್ತು.

ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಅವರು ಗುರುವಾರ 20 ಮಂದಿ ರಸಪ್ರಶ್ನೆ ವಿಜೇತರಿಗೆ ವಿಮಾನ ಟಿಕೆಟ್‌ಗಳನ್ನು ವಿತರಿಸಿದರು.



ವಿಜೇತರು ಕಾಶಿ,ಪ್ರಯಾಗಕ್ಕೆ ತೆರಳಿ ಪವಿತ್ರ ಕ್ಷೇತ್ರಗಳ ದರ್ಶನ ಪಡೆಯುವಂತೆ ಹಾರೈಸಿದರು.

ವಿಶೇಷ ಯಾತ್ರೆಗೆ ವಿಜಯನಗರದ ಯುವನಾಯಕ ಪ್ರದೀಪ್ ಕೃಷ್ಣ ಸಂಪೂರ್ಣ ಮಾರ್ಗದರ್ಶನ ನೀಡುತ್ತಿದ್ದು, ಪ್ರಯಾಣದ ಆರಂಭದಿಂದ ಅಂತ್ಯ ದವರೆಗೆ ಅಗತ್ಯವಿರುವ ಎಲ್ಲ ವ್ಯವಸ್ಥೆಗಳನ್ನು ಉಚಿತವಾಗಿ ಕಲ್ಪಿಸಿದ್ದಾರೆ. ವಿಮಾನ ಟಿಕೆಟ್, ಪ್ರಯಾಣ, ವಸತಿ, ಊಟ ಸೇರಿದಂತೆ ಯಾತ್ರೆಗೆ ಸಂಬಂಧಿಸಿದ ಎಲ್ಲಾ ಖರ್ಚು, ವೆಚ್ಚಗಳನ್ನು ಎಂ. ಕೃಷ್ಣಪ್ಪ ಭರಿಸುತ್ತಿದ್ದಾರೆ.

ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ರಸಪ್ರಶ್ನೆ ವಿಜೇತರು ಸಂತಸ ವ್ಯಕ್ತಪಡಿಸಿ, ತಮಗೆ ನೀಡಿದ್ದ ಭರವಸೆಯನ್ನು ಈಡೇರಿಸಿದ ಶಾಸಕ ಎಂ. ಕೃಷ್ಣಪ್ಪ ಹಾಗೂ ಯಾತ್ರೆಯ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡಿರುವ ಪ್ರದೀಪ್ ಕೃಷ್ಣ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಗೋವಿಂದರಾಜನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ, ನೀಲಕಂಠಪ್ಪ, ಕಲಾವಿದರಾದ ಮಿಮಿಕ್ರಿ ಗೋಪಿ, ಮಿಮಿಕ್ರಿ ದಯಾನಂದ, ಹಾಸ್ಯ ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಎಂ. ಉದಯ್ ಹಾಗೂ ಪ್ರಜಾವಲ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಬೆಂಗಳೂರು ಜಾಣಜಾಣೆಯರ ಸಂಸ್ಥೆಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ಎಂ. ಉದಯ್, ನುಡಿದಂತೆ ನಡೆದು ಭರವಸೆಯನ್ನು ಈಡೇರಿಸಿ ರುವುದು ಸಂತಸದ ಸಂಗತಿ. ಕಾಶಿ, ಪ್ರಯಾಗದಂತಹ ಪವಿತ್ರ ಕ್ಷೇತ್ರಗಳ ದರ್ಶನಕ್ಕೆ ಉಚಿತ ವಿಮಾನಯಾತ್ರೆಯ ಅವಕಾಶ ಕಲ್ಪಿಸಿರುವುದು ಅವಿಸ್ಮರಣೀಯ ಅನುಭವ ಎಂದು ತಿಳಿಸಿದರು.

# ಪರಪ್ಪನ ಅಗ್ರಹಾರ ಜೈಲಿನ ಆವರಣದ ಕೋರ್ಟ್‌ನಲ್ಲೇ ದರ್ಶನ್ 20 ಮಂದಿ ವಿಚಾರಣೆಗೆ ಹೈಕೋರ್ಟ್ ಸಲಹೆ

**ಬೆಂಗಳೂರು, ಸೆ.10:** ರೇಣುಕಾ ಸ್ವಾಮಿ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ನಟ ದರ್ಶನ್ ಅವರು ಮುಂದೆ ನಡೆಯಲಿರುವ ಸಾಕ್ಷ್ಯಗಳ ವಿಚಾರಣೆ ಸಂದರ್ಭದಲ್ಲಿ ಖುದ್ದು ಸೆಷನ್ಸ್ ಕೋರ್ಟ್‌ನಲ್ಲಿ ಹಾಜರಿರಲು ಅವಕಾಶ ಮಾಡಿಕೊಡುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಅವರ ಅಕ್ರಮ ಆಸ್ತಿಗಳಿಕೆ ಪ್ರಕರಣದ ಮಾದರಿಯಲ್ಲೇ, ಪರಪ್ಪನ ಅಗ್ರಹಾರ ಜೈಲಿನ ಆವರಣದಲ್ಲೇ ಇರುವ ಕೋರ್ಟ್‌ನಲ್ಲಿ ದರ್ಶನ್ ವಿಚಾರಣೆ ನಡೆಸುವ ಬಗ್ಗೆ ಹೈಕೋರ್ಟ್ ಮಹತ್ವದ ಸಲಹೆ ನೀಡಿದೆ.

ಪ್ರಸ್ತುತ ಸೆಷನ್ಸ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಕಲಾಪದಲ್ಲಿ ದರ್ಶನ್




ಅವರನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಗುತ್ತಿದೆ. ಈ ವಿಡಿಯೋ ಕಾನ್ಫರೆನ್ಸ್ ವಿಚಾರಣೆಯಿಂದ ತಮಗೆ ಸಮಾಧಾನವಿಲ್ಲ. ಅದರಲ್ಲೂ ಪ್ರಮುಖವಾಗಿ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿರುವ (ಅಪ್ರೂವರ್) ಪ್ರದೋಶ್ ಸೇರಿದಂತೆ ಪ್ರಮುಖ ಸಾಕ್ಷಿಗಳ ಕ್ರಾಸ್ ಎಕ್ಸಾಮಿನೇಷನ್ (ವಿಚಾರಣೆ) ನಡೆಯುವಾಗ ತಾವು ಕೋರ್ಟ್‌ನಲ್ಲಿ ಖುದ್ದು ಹಾಜರಿರಬೇಕು ಎಂದು ಕೋರಿ ದರ್ಶನ್ ಪರ ವಕೀಲರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್‌ನ ನ್ಯಾಯಮೂರ್ತಿ ವಿ. ಶ್ರೀಷಾನಂದ ಅವರ ಏಕಸದಸ್ಯ ಪೀಠ ನಡೆಸಿದ್ದು, ವಿಚಾರಣೆ ವೇಳೆ ಹಲವು ಕುತೂಹಲಕಾರಿ ಮತ್ತು ಮಹತ್ವದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ಈ ಎಲ್ಲಾ ಸಲಹೆಗಳ ಬಗ್ಗೆ ಜೈಲಿನಲ್ಲಿರುವ ನಿಮ್ಮ ಕಕ್ಷಿದಾರ ದರ್ಶನ್ ಜೊತೆ ಮಾತನಾಡಿ. ಯಾವ ಸಾಕ್ಷಿಗಳ ಪಾಟಿಸವಾಲಿನ ದಿನ ದರ್ಶನ್ ಖುದ್ದು ಇರಬೇಕು ಎಂಬುದನ್ನು ನಿರ್ಧರಿಸಿ ತಿಳಿಸಿ ಎಂದು ದರ್ಶನ್ ಪರ ವಕೀಲರಿಗೆ ಸೂಚಿಸಿದ ಹೈಕೋರ್ಟ್, ಅಂತಿಮ ತೀರ್ಮಾನಕ್ಕಾಗಿ ವಿಚಾರಣೆ ಯನ್ನು ಸೆಪ್ಟೆಂಬರ್ 16ರ ಮಧ್ಯಾಹ್ನ 2:30ಕ್ಕೆ ಮುಂದೂಡಿದೆ.



ಚಿಕ್ಕಮಗಳೂರು ಬಳಿ ಗುರುವಾರ ಈರುಳ್ಳಿ ಕೊಯ್ಲು ಕಂಡುಬಂದಿದೆ. ನಾಟಿ ಸಮಯದಲ್ಲಿ ಈರುಳ್ಳಿ ಇಳುವರಿ ಭಾರಿ ಕುಸಿದಿದೆ ಎಂದು ತೋಟಗಾರಿಕೆ ಇಲಾಖೆ ವರದಿ ಮಾಡಿದೆ.

# ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಅಹಿಂದ ನಾಯಕರ ಬಂಡಾಯ

**ಕಲಬುರಗಿ, ಸೆ. 10:** ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಅಹಿಂದ್ ಸಂಘಟನೆಯನ್ನು ತಮ್ಮ ಸ್ವಾರ್ಥ ರಾಜಕೀಯಕ್ಕೆ ಬಳಕೆ ಮಾಡಿಕೊಂಡಿದ್ದು, ಅಹಿಂದ ವರ್ಗವನ್ನು ಅವರ ರಾಜಕೀಯ ದಾಳವನ್ನಾಗಿ ಮಾಡಿಕೊಳ್ಳಲು ನಾವು ಅಹಿಂದ ವರ್ಗದವರು ಬಿಡುವುದಿಲ್ಲ ಎಂದು ಕಲ್ಯಾಣ ಕರ್ನಾಟಕ ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡ ಶಾಂತಪ್ಪ ಕೂಡಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2001ರಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಅಂದು ಬೆಸ್ತ / ಕೋಲಿ ಸಮಾಜದ ರಾಜ್ಯಾಧ್ಯಕ್ಷರೂ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಆಪ್ತ ದಿ. ಜೆ. ಶ್ರೀನಿವಾಸ್ ಅವರು ಅಹಿಂದ್ ಎಂಬ ಹೆಸರಿನಲ್ಲಿ ಸಂಘಟನೆ ಹುಟ್ಟು ಹಾಕಿದ್ದರು. ಒಳ್ಳೆಯ ಉದ್ದೇಶದಿಂದ ಹುಟ್ಟುಹಾಕಿದ ಸಂಘಟನೆಯನ್ನು ಮುಂದೆ ಜೆಡಿಎಸ್‌ನಿಂದ ಮಾಜಿ ಪ್ರಧಾನಿ ಎಚ್.ಡಿ.




ದೇವೇಗೌಡರು ಸಿದ್ಧರಾಮಯ್ಯ ಅವರನ್ನುಕಿತ್ತು ಹಾಕಿದಾಗ ಸಿದ್ಧರಾಮಯ್ಯ ಅವರೊಂದಿಗೆ ಸಂಘಟನೆಯನ್ನು ರಾಜಯಿಕಾರಣಕ್ಕೆ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮಾಜಿ ಸಚಿವರಾದಡಾ. ಎಚ್.ಸಿ. ಮಹಾದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ, ಕೆ. ಮುಕುಡಪ್ಪ, ಮಾಜಿ ಮುಖ್ಯ ಸಚೇತಕ ವಿಠಲ್ ಹೇರೂರ್ ಅವರೂ ಸೇರಿದಂತೆ ಅನೇಕ ಮುಖಂಡರು ಹೆಗಲಿಗೆ ಹೆಗಲು ಕೊಟ್ಟು ದುಡಿದ ಪರಿಣಾಮ ರಾಜಯಿಕೀಯ ಮರುಜನ್ಮ ನೀಡಿದ, ಮಾತ್ರ ಸಮಾನವಾದ ಅಹಿಂದ್ ಸಂಘಟನೆಯನ್ನು ಕೆಲವರು ಸ್ವಾರ್ಥ ರಾಜಕೀಯಕ್ಕೆ ಬಳಕೆ ಮಾಡಿಕೊಂಡರು. ಇದರಿಂದ ರಾಜ್ಯದ ಹಿಂದುಳಿದ ವರ್ಗದವರ ರಾಜಕೀಯ ದಾರಿ ತಪ್ಪಿಸಲಾಯಿತು ಎಂದು ಶಾಂತಪ್ಪ ಕೂಡಿ ಅವರು ಆರೋಪಿಸಿದರು.

ಅಹಿಂದ ಹೆಸರಿನಲ್ಲಿ ಕಾಂಗ್ರೆಸ್ ಹೈಕಮಾಂಡ್‌ನ್ನು ಪದೇ ಪದೇ ಬ್ಲಾಕ್‌ಮೇಲ್ ಮಾಡುತ್ತ ಅಧಿಕಾರಿ ಉಳಿಸಿಕೊಂಡು, ಅನಂತರ ತಮ್ಮ ಮಗನಿಗೆ, ಮೊಮ್ಮಗ ಧವನ್‌ಗೆ ಪಟ್ಟ ಕಟ್ಟುವ ವೇದಿಕೆ ಸಜ್ಜುಗೊಳಿಸಿದ್ದ ಸಿದ್ಧರಾಮಯ್ಯ ಅವರ ರಾಜಕೀಯ ಬಂಡವಾಳ ಈಗ ಬಯಲಾಗಿದೆ. ಅವರ್ ಸ್ವಾರ್ಥಿ ರಾಮಯ್ಯನವರ ಅಸಲಿ ಅಹಿಂದ ಬಣ್ಣ ಈಗ ಬಯಲಾಗಿದ್ದು, ಇನ್ನು ರಾಜ್ಯದ ಅಹಿಂದ್ ಜನ ಕುರಿಗಳಂತೆ ಅವರಿರ ಹಿಂದೆ ಹೋಗಬಯಸುವದಿಲ್ಲ. ನಿಜವಾದ ಅಹಿಂದ ಒಕ್ಕೂಟ ಏನು ಎಂಬುದನ್ನು ನಿಜವಾದ ಅಹಿಂದ್ ನಾಯಕರ ನೇತೃತ್ವದಲ್ಲಿ ಕೆಲವೇ ದಿನಗಳಲ್ಲಿ ರಾಜ್ಯಕ್ಕೆ ತೋರಿಸುತ್ತೇವೆ ಎಂದರು.

ಕೇವಲ ತಮ್ಮ ಹಾಗೂ ತಮ್ಮ ಮಕ್ಕಳ ಕುಟುಂಬದ ರಾಜಕೀಯ ಅಸ್ತಿತ್ವಕ್ಕಾಗಿ ಅಹಿಂದ್ ವರ್ಗವನ್ನು ಬಳಸಿಕೊಂಡು ಖುರ್ಚಿ ಸಿಕ್ಕ ಮೇಲೆ ಎಲ್ಲರನ್ನೂ ಟಿಶ್ಯೂ ಪೇಪರ್ ಹಾಗೆ ಬೀಸಾಡಿದ ಸಿದ್ಧರಾಮಯ್ಯ ಮತ್ತು ಅವರ ತಂಡದ ಆಟ ಇನ್ನು ಮುಂದೆ ನಡೆಯಲು ಬಿಡುವುದಿಲ್ಲ. ಶೀಘ್ರ ನಿಜವಾದ ಅಹಿಂದ ವರ್ಗದ ಸಭೆ ರಾಜ್ಯದಲ್ಲಿ ಜರುಗಲಿದೆ ಎಂದು ತಿಳಿಸಿದರು.

# ನಯಾ ದಿಶಾ: ನೂತನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ

**ಬಳ್ಳಾರಿ ಸೆ 10.** ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಎಸ್.ಜಿ.ಟಿ.ಕಾಲೇಜಿನ ವಿದ್ಯಾರ್ಥಿಗಳಿಗೆ ರಾಘವ ಕಲಾಮಂದಿರದಲ್ಲಿ ನಯಾ ದಿಶ ಕಾರ್ಯಕ್ರಮವನ್ನು ಆಯೋಜಿ ಸಿದ್ದರು.

ಕಾಲೇಜಿನ ದಿನಗಳು ನಮಗೆ ಗೊತ್ತಿಲ್ಲದಂತೆ ಕಳೆದು ಹೋಗಿ ಬಿಡುತ್ತವೆ. ಕಾಲೇಜಿನಿಂದ ನಾವು ಹೊರಗೆ ಬಂದಾಗ ಕೇವಲ ನಮ್ಮ ಪ್ರಮಾಣಪತ್ರಗಳು ಎಲ್ಲೆಡೆ ನಮ್ಮ ಕೌಶಲ್ಯ ಮತ್ತು ಅರ್ಹತೆಗಳನ್ನು ಬಿಂಬಿಸುವುದಿಲ್ಲ. ನಾವು ಕಾಲೇಜಿನ ಒಳಗೆ ಇರುವಾಗ ಯಾವುದನ್ನು ಕಲಿತೆವು, ಯಾವ ಶಕ್ತಿಗಳನ್ನು ಬೆಳೆಸಿಕೊಂಡೆವು ಎಂಬುದು ನಮ್ಮ ವ್ಯಕ್ತಿತ್ವದಿಂದ ಪ್ರಕಟಗೊಳ್ಳುತ್ತದೆ. ಇದು ಪ್ರಸ್ತುತ ಸಮಯದ ಅವಶ್ಯಕತೆಯಾಗಿದೆ ಎಂದು ಡಾ. ನಿರ್ಮಲಾ ಜೆ, ಪ್ರಾಧ್ಯಾಪಕರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಇವರು ರಾಘವ ಕಲಾ ಮಂದಿರದಲ್ಲಿ ಎಸ್.ಜಿ.ಟಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಪ್ರಥಮ ವರ್ಷದ




ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ನಯಾ ದಿಶಾ–2026'ರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅಭಿಪ್ರಾಯ ಪಟ್ಟರು. ಶಿಕ್ಷಣವೇ ಶಕ್ತಿ ಎಂಬುದು ಅದಕ್ಕಾಗಿಯೇ. ನಮ್ಮ ಪರಿವರ್ತನೆಯೇ ಮುಂದಿನ ಬದುಕಿನಲ್ಲಿ ನಮಗೆ ಮತ್ತು ನಮ್ಮ ಕುಟುಂಬಕ್ಕೆ ಆಗುವ ಪ್ರಯೋಜನ ಎಂಬುದರ ಬಗ್ಗೆ ಎಚ್ಚರ ವಹಿಸಬೇಕಾಗುತ್ತದೆ.

ಪ್ರಾಚಾರ್ಯರಾದ ಡಾ. ರೀನಾ ಆರ್ ರವರು ಮಾತನಾಡಿ ನಮ್ಮ ವಿದ್ಯಾರ್ಥಿಗಳು ತಮ್ಮ ಪರಿಶ್ರಮ ಹಾಗು ಬೋಧಕರ ಶ್ರಮಗಳಿಂದಾಗಿ ಸಾಕಷ್ಟು ರ‍್ಯಾಂಕ್‌ಗಳನ್ನು ತಂದು ದಾಖಲೆ ನಿರ್ಮಿಸಿದ್ದಾರೆ. ಅಲ್ಲದೆ ಮ್ಯಾನೇಜ್‌ಮೆಂಟ್ ಫೆಸ್ಟ್‌ಗಳಲ್ಲಿ ಕ್ರೀಡಾ ಸ್ಪರ್ದೆಗಳಲ್ಲಿ ತಮ್ಮ ಸಾದನೆಗಳಿಂದ ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಸ್.ಜಿ.ಟಿ ಸಂಸ್ಥೆಯ ಅಧ್ಯಕ್ಷ ಎಸ್.ಎನ್ ರುದ್ರಪ್ಪ ಮಾತನಾಡಿ, ಈ ವರ್ಷ ಎಂ.ಕಾಂ.ನಲ್ಲಿ ಪ್ರಥಮ ರ‍್ಯಾಂಕ್ ಪಡೆದ ಸವಿತಾ, ಬಿ.ಸಿ.ಎ ನಲ್ಲಿ 2ನೇ ರ‍್ಯಾಂಕ್ ಪಡೆದ ಹೀನಾ ಕೌಸರ್, ಬಿ.ಬಿ.ಎ ನಲ್ಲಿ 5ನೇ ರ‍್ಯಾಂಕ್ ಪಡೆದ ಎಂ.ಡಿ ಅಮೃತ ಅವರನ್ನು ಅಭಿನಂದಿಸಿದರು.

ಈ ವರ್ಷ ಕೂಡ ಬಿ.ಕಾಂ ಪ್ರಥಮ ರ‍್ಯಾಂಕ್ ಬಿ.ಬಿ.ಎ ಮತ್ತು ಬಿ.ಸಿ.ಎ.ಗಳಲ್ಲಿ ಬಹಳಷ್ಟು ರ‍್ಯಾಂಕ್‌ಗಳು ನಮ್ಮ ಕಾಲೇಜಿಗೆ ಬರಲಿವೆ ಎಂದರು. ಹೊಸ ವಿದ್ಯಾರ್ಥಿಗಳು ಈ ದಿಶೆಯಲ್ಲಿ ಆರಂಭದಿಂದಲೇ ತಮ್ಮ ಗುರಿಯ ಕಡೆಗೆ ಗಮನಹರಿಸಿ ಅಂಕಗಳನ್ನು ಪಡೆಯುವುದರೊಂದಿಗೆ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದರ ಕಡೆ ಶ್ರಮವಹಿಸಬೇಕು ಎಂದು ಕರೆ ನೀಡಿದರು.

ಎಸ್.ಜಿ.ಟಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ನಾಗರಾಜ್ ಮಾತನಾಡಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸದೊಂದಿಗೆ ಉತ್ತಮ ಸಂಸ್ಕೃತಿ ಮೈಗೂಡಿಸಿಕೊಂಡಿರುವುದು ವಿಶೇಷವಾಗಿದೆ ಎಂದರು.

## ಕುದೂರಿನ ಕೆಪಿಎಸ್ ಶಾಲೆಯಲ್ಲಿ ಅಗ್ನಿ ಅವಘಡ

# ಲಕ್ಷಾಂತರ ರೂ. ಮೌಲ್ಯದ ಪೀಠೋಪಕರಣ, ಕಲಿಕಾ ಸಾಮಗ್ರಿಗೆ ಹಾನಿ

**ರಾಮನಗರ, ಸೆ.10:** ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲೂಕಿನ ಕುದೂರು ಕರ್ನಾಟಕ ಪಬ್ಲಿಕ್ ಶಾಲೆ(ಕೆಪಿಎಸ್)ಯಲ್ಲಿ ಬುಧವಾರ ತಡರಾತ್ರಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಶಾಲೆಯ ಕೊಠಡಿಯೊಂದು ಸಂಪೂರ್ಣವಾಗಿ ಹೊತ್ತಿ ಉರಿದಿದೆ.

ಬೆಂಕಿ ಅವಘಡದಲ್ಲಿ ಶಾಲಾ ಕೊಠಡಿಯಲ್ಲಿದ್ದ ಸುಮಾರು ಎರಡು ಲಕ್ಷ ರೂ. ಮೌಲ್ಯದ ಪೀಠೋಪಕರಣಗಳು ಹಾಗೂ ಇತರೆ ಕಲಿಕಾ ಸಾಮಗ್ರಿಗಳು ಬೆಂಕಿಗಾಹುತಿಯಾಗಿವೆ. ಶಾಲೆಯ ಹೊಸ ಕಟ್ಟಡ ನಿರ್ಮಾಣವಾದ ನಂತರ ಈ ಹಳೆಯ ಕೊಠಡಿಯನ್ನು ಖಾಲಿಬಿಡಲಾಗಿತ್ತು.

ಬುಧವಾರ ತಡರಾತ್ರಿ ಇದ್ದಕ್ಕಿದ್ದಂತೆ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಇಡೀ ಕೊಠಡಿ ಹೊತ್ತಿ ಉರಿಯಲಾರಂಭಿಸಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಬೆಂಕಿ ಅವಘಡವು ಆಕಸ್ಮಿಕವಾಗಿ ಸಂಭವಿಸಿದೆಯೇ ಅಥವಾ ಯಾರಾದರೂ ಕಿಡಿಗೇಡಿಗಳು ಎಸಗಿದ ಕೃತ್ಯವೇ ಎಂಬ ಬಗ್ಗೆ ಅನುಮಾನಗಳು ವ್ಯಕ್ತವಾಗಿದೆ.ಈ



ಸಂಬಂಧ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಶಾಂತಿ-ಸೌಹಾರ್ದಯುತವಾಗಿ ಗಣೇಶ ಹಬ್ಬ ಆಚರಿಸಿ

# ಪ್ರತಿಯೊಬ್ಬರೂ ಪರಿಸರ ಸ್ನೇಹಿ ಗಣೇಶ ಚತುರ್ಥಿ ಆಚರಿಸಲು ಡಿಸಿ ಡಾ. ಆನಂದ. ಕೆ. ಸಾರ್ವಜನಿಕರಿಗೆ ಮನವಿ

**ವಿಜಯಪುರ, ಸೆ.10–**ಜಿಲ್ಲಾಡಳಿತ ನೀಡುವ ಅಗತ್ಯ ಸೂಚನೆಗಳನ್ನು ಪಾಲಿಸುವುದರೊಂದಿಗೆ ಗಣೇಶ ಚತುರ್ಥಿಯನ್ನು ಅರ್ಥಪೂರ್ಣ ಹಾಗೂ ಶಾಂತಿ– ಸೌಹಾರ್ದಯುತವಾಗಿ ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ.ಕೆ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಸಂಭ್ರಮದಿಂದ ಆಚರಿಸುವಂತೆ ವಿವಿಧ ಸಮಿತಿ ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರಿಗೆ ಜಿಲ್ಲಾಧಿಕಾರಿಗಳು ಮನವಿ ಮಾಡಿದರು. ಈಗಾಗಲೇ ನಾಲ್ಕೈದು ಸಲ ಶಾಂತಿ ಸಭೆ ಮಾಡಲಾಗಿದೆ. ಗಣೇಶ ವಿಸರ್ಜನೆಗೆ ನಾಲ್ಕು ಎಕರೆ ಜಾಗದಲ್ಲಿ ದರ್ಗಾ ಜೈಲು ಬಳಿ ಕೃತಕ ಹೊಂಡ ನಿರ್ಮಾಣ ಮಾಡಲಾಗಿದೆ.

ಇನ್ನೊಂದೆಡೆ ನಗರದ ಬಹುತೇಕ ಗಜಾನನ ಮಂಡಳಿಗಳು, ಪಿಒಪಿ




ಗಣೇಶ ಮೂರ್ತಿ ಪ್ರತಿಷ್ಠಾಪನೆ ಬಳಕೆ ಮಾಡದೇ ಪರಿಸರ ಸ್ನೇಹಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡುತ್ತಿರುವುದನ್ನು ಪ್ರಶಂಸಿಸಿದ ಜಿಲ್ಲಾಧಿಕಾರಿಗಳು, ಪರಿಸರ ಸ್ನೇಹಿ ಹಬ್ಬ ಆಚರಿಸಲು ಸಲಹೆ ಮಾಡಿದರು.

ಡಿಜೆ ಹಾಗೂ ವಿದ್ಯುತ್ ಅವಘಡದಿಂದ ಯಾವುದೇ ಘಟನೆಗಳಾಗದಂತೆ ನೋಡಿಕೊಳ್ಳಲು ಸ್ವಯಂ ಸೇವಕರನ್ನು ನೇಮಕ ಮಾಡಿಕೊಳ್ಳಬೇಕು. ಗಜಾನನ ಮಂಡಳಿಯವರು ಸಾಂಸ್ಕೃತಿಕ ಮೆರಗು ಹೆಚ್ಚಿಸುವ ಕಲಾ ಪ್ರಕಾರಗಳನ್ನು ಹೆಚ್ಚಿಸಿಕೊಳ್ಳಲಿ. ಆದರೆ ಡಿಜೆ ಬಳಕೆ ಬಗ್ಗೆ ಕಟ್ಟೆಚ್ಚರ ವಹಿಸಬೇಕು ಎಂದರು. ದರ್ಗಾ ಸ್ಥಳದಲ್ಲಿ ಒಂದೇ ಬಾರಿಗೆ ಎರಡು ಗಣೇಶ ಮೂರ್ತಿ ವಿಸರ್ಜನೆ ಮಾಡಲು ಅವಕಾಶವಿದೆ. ಅದನ್ನು ಗಜಾನನ ಮಂಡಳಿಯವರು ಸದ್ಬಳಕೆ ಮಾಡಿಕೊಳ್ಳಬೇಕು. ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಲು ಜಿಲ್ಲಾಡಳಿತದ ಸಂಪೂರ್ಣ ಸಹಕಾರವಿದೆ. ಹಾಗಾಗಿ ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು. ಯಾವುದೇ ಸಮಸ್ಯೆ ಇಲ್ಲದೇ ಗಣೇಶ ಹಬ್ಬವನ್ನು ಶಾಂತಿ, ಸೌಹಾರ್ದತೆಯಿಂದ ಹಾಗೂ ವಿಜೃಂಭಣೆಯಿಂದ ಆಚರಿಸೋಣ ಎಂದರು.

# ಗ್ಯಾರಂಟಿಯೂ ಜಾರಿ, ಅಭಿವೃದ್ಧಿಯೂ ಖಾತ್ರಿ: ಸಚಿವ ಈಶ್ವರ ಖಂಡ್ರೆ

**ಬೀದರ, ಸೆ. 10:** ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಸಿರುವ ಹೊರೆ ರಾಜ್ಯದ ಗ್ಯಾರಂಟಿ ಯೋಜನೆಗಳಿಂದ ಜನರಿಗೆ ತಗ್ಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದರು.

ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಮೆಹಕರ್‌ನಲ್ಲಿ ನಡೆದ ತಾಲ್ಲೂಕು ಮಟ್ಟದ ಪ್ರಜಾಸೇವಾ ಆಂದೋಲನ ಉದ್ಘಾಟಿಸಿ ಮಾತನಾಡಿದ ಅವರು, ಗ್ಯಾರಂಟಿ ಜಾರಿಗೊಳಿಸಿದರೆ ರಾಜ್ಯ ದಿವಾಳಿಯಾಗುತ್ತದೆ ಎಂದು ಪ್ರತಿಪಕ್ಷಗಳು ಹೇಳಿದ್ದವು. ಆದರೆ, ಗ್ಯಾರಂಟಿಯನ್ನೂ ಜಾರಿಗೊಳಿಸಿ ಅಭಿವೃದ್ಧಿಯನ್ನೂ ಮಾಡುತ್ತಿದ್ದೇವೆ ಎಂದರು.

ಮೆಹಕರ್‌ನಲ್ಲಿ ಗ್ರಾಮೀಣ ಹಾಗೂ ಗಡಿಭಾಗದ ಮಕ್ಕಳಿಗೆ ನಗರ ಪ್ರದೇಶದ ಮಕ್ಕಳಿಗೆ ಸಮಾನ ಶಿಕ್ಷಣ ಮತ್ತು ಕ್ರೀಡಾ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ 4.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ ಹಾಗೂ 5.45 ಕೋಟಿ ವೆಚ್ಚದ ಕ್ರೀಡಾಸಮುಚ್ಚಯ ಉದ್ಘಾಟಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ 3,64,287 ಫಲಾನುಭವಿಗಳಿಗೆ 2,092.92 ಕೋಟಿ, ಗೃಹಜ್ಯೋತಿಯಡಿ 3,59,120 ಫಲಾನುಭವಿಗಳಿಗೆ 589.23 ಕೋಟಿ



ಪಾವತಿಸಲಾಗಿದೆ. ಅನ್ನಭಾಗ್ಯದಡಿ 13,13,205 ಫಲಾನುಭವಿಗಳಿಗೆ 333.28 ಕೋಟಿ ಪಾವತಿಸಲಾಗಿದೆ. ಶಕ್ತಿ ಯೋಜನೆಯಡಿ 13.89 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದು, ನಿರುದ್ಯೋಗಿ ಯುವಜನರಿಗೆ 57.12 ಕೋಟಿ ಪಾವತಿಸಲಾಗಿದೆ ಎಂದರು.

ಸಾಯಗಾವ್ ಮಾರ್ಗವಾಗಿ ಭಾಲ್ಕಿ–ಮೆಹಕರ್ ರಸ್ತೆ ಅಭಿವೃದ್ಧಿಗೆ 5 ಕೋಟಿ ಮಂಜೂರಾಗಿದ್ದು, ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮೆಹಕರ್‌ನಲ್ಲಿ ಆರೋಗ್ಯ, ರಸ್ತೆ, ಶಾಲಾ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ ಎಂದರು.

ಮಳೆಯ ಕೊರತೆಯಿಂದ ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಭಾಲ್ಕಿ ತಾಲ್ಲೂಕನ್ನೂ ಶೀಘ್ರ ಬರಪೀಡಿತವೆಂದು ಘೋಷಿಸಲಾಗುವುದು ಎಂದರು. 'ನಮ್ಮ ಹೊಲ–ನಮ್ಮ ದಾರಿ' ಯೋಜನೆಯಡಿ ಹೊಲದ ದಾರಿ ಸಮಸ್ಯೆ ಪರಿಹರಿಸಲಾಗುವುದು. ಮಾಸಾಶನ ಅರ್ಜಿಗಳ ಹಣ 15 ದಿನಗಳಲ್ಲಿ ಜಮೆಯಾಗುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಸಾರ್ವಜನಿಕರಿಂದ ಅರ್ಜಿ, ದೂರು ಸಲ್ಲಿಕೆ: ಪ್ರಜಾಸೇವಾ ಆಂದೋಲನದಲ್ಲಿ ಪಿಂಚಣಿ, ವಿಧವಾ ವೇತನ, ಸಂಧ್ಯಾ ಸುರಕ್ಷಾ, ಪೋಡಿ, 11ಇ ಸ್ಕೆಚ್, ವಸತಿ, ನಿವೇಶನ, ರೇಷನ್ ಕಾರ್ಡ್, ಪಹಣಿ, ಅಂಗನವಾಡಿ, ಶಾಲಾ ಕಟ್ಟಡ, ಆರೋಗ್ಯ, ರಸ್ತೆ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದ ದೂರುಗಳು ಬಂದವು. ಜೆಜೆಎಂ ಕಳಪೆ ಕಾಮಗಾರಿ, ಕುಡಿಯುವ ನೀರು, ವಿದ್ಯುತ್ ಕಂಬ ಹಾಗೂ ಲೈನ್‌ಮನ್‌ಗಳ ಕೊರತೆ, ಗ್ರಾಮ ಲೆಕ್ಕಾಧಿಕಾರಿಗಳ ಗೈರುಹಾಜರಿ ಮತ್ತು ಹಣಕ್ಕೆ ಬೇಡಿಕೆ ಇಡುವ ಆರೋಪಗಳೂ ಕೇಳಿಬಂದವು.

ಮೆಹಕರ್‌ನ ಲೈನ್‌ಮನ್‌ವೊಬ್ಬರು ಕರ್ತವ್ಯಕ್ಕೆ ಹಾಜರಾಗದೆ ಬೇರೊಬ್ಬರಿಗೆ ತಿಂಗಳಿಗೆ 6,000 ರಿಂದ 7,000 ನೀಡಿ ಕೆಲಸ ಮಾಡಿಸುತ್ತಿದ್ದಾರೆಂಬ ಆರೋಪದ ಕುರಿತು ಪರಿಶೀಲಿಸಿ ಅಮಾನತು ಸೇರಿದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಳವಾಯಿ ಗ್ರಾಮ ಒನ್ ಕೇಂದ್ರದ ಹಣಕ್ಕೆ ಬೇಡಿಕೆ ಆರೋಪದ ಬಗ್ಗೆಯೂ ಕ್ರಮಕ್ಕೆ ಸೂಚಿಸಿದರು. ಗುಂಜರಗದ ಕುಡಿಯುವ ನೀರಿನ ಸಮಸ್ಯೆ ತಕ್ಷಣ ಪರಿಹರಿಸುವಂತೆ ಪಿಡಿಒಗೆ, ಜೆಜೆಎಂ ದೋಷ ಸರಿಪಡಿಸುವಂತೆ ಸಂಬಂಧಿಸಿದ ಎಂಜಿನಿಯರ್‌ಗೆ ಸೂಚಿಸಿದರು. ಅಳವಾಯಿಯಲ್ಲಿ ಆಸ್ಪತ್ರೆ, ಆಧಾರ್ ಕೇಂದ್ರ, ಹೊಲದ ದಾರಿ ಹಾಗೂ ಏತ ನೀರಾವರಿಗೆ ಜಮೀನು ನೀಡಿದ ರೈತರಿಗೆ ಪರಿಹಾರ ನೀಡುವಂತೆ ಒತ್ತಾಯಿಸಲಾಯಿತು.

ಸ್ವೀಕರಿಸಿದ 974 ಅರ್ಜಿಗಳಲ್ಲಿ ಸ್ಥಳದಲ್ಲೇ 300 ಅರ್ಜಿಗಳನ್ನು ವಿಲೇವಾರಿ ಮಾಡಲಾಯಿತು. ಇನ್ನುಳಿದ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಸೂಚಿಸಿದರು.

# ಕಲಬುರಗಿ ಕಾರಾಗೃಹದ ಮೇಲೆ ಪೊಲೀಸರ ದಾಳಿ: ಕೈದಿ ಬಳಿ ಮೊಬೈಲ್ ಪತ್ತೆ

**ಕಲಬುರಗಿ, ಸೆ. 10:** ನಿರಂತರ ಒಂದಿಲ್ಲೊಂದು ಹಗರಣಗಳಿಂದಾಗಿ ಸುದ್ದಿಯಲ್ಲಿರುವ ಕಲಬುರಗಿ ಜಿಲ್ಲಾ ಕೇಂದ್ರ ಕಾರಾಗ್ರಹ ಇದೀಗ ಮತ್ತೆ ಸುದ್ದಿ ಮಾಡಿದೆ. ಜೈಲಿನ ಬ್ಯಾರಕ್ ನಂ.6ರಲ್ಲಿ ಮೊಬೈಲ್ ಪತ್ತೆಯಾಗಿದ್ದು, ಪೊಲೀಸ್ ಆಯುಕ್ತ ಡಾ. ಶರಣಪ್ಪ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ಜೈಲಿನೊಳಗೆ ಕೈದಿಗಳು ಮೊಬೈಲ್ ಸೇರಿದಂತೆ ನಿಷೇಧಿತ ವಸ್ತುಗಳನ್ನು ಬಚ್ಚಿಟ್ಟುಕೊಳ್ಳುತ್ತಿರುವ ಹಿನ್ನೆಲೆ ತಪಾಸಣೆ ನಡೆಸಲಾಗಿದ್ದು, ಈ ವೇಳೆ ಮೊಬೈಲ್ ಪತ್ತೆಯಾಗಿವೆ.

ಕಲಬುರಗಿ ಜೈಲಿನಲ್ಲಿ ಪೊಲೀಸ್ ಆಯುಕ್ತ ಡಾ. ಶರಣಪ್ಪ ಅವರ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದ್ದು, ಜೈಲಿನ ಬ್ಯಾರಕ್ ನಂ.6ರಲ್ಲಿ ಮೊಬೈಲ್ ಫೋನ್‌ಪತ್ತೆಯಾಗಿದೆ. ಜೈಲಿನೊಳಗೆ ಕೈದಿಗಳು ಮೊಬೈಲ್ ಸೇರಿದಂತೆ ನಿಷೇಧಿತ ವಸ್ತುಗಳನ್ನು



ಎಲ್ಲೆಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದಾರೆ ಎಂಬುದನ್ನು ಪತ್ತೆಹಚ್ಚಲು ಪೊಲೀಸರು ತಪಾಸಣೆ ನಡೆಸಿದ್ದಾರೆ.

ದಾಳಿ ವೇಳೆ ಬ್ಯಾರಕ್ ನಂ.6ರಲ್ಲಿ ಮೊಬೈಲ್ ಪತ್ತೆಯಾಗಿದ್ದು, ಈ ಸಂಬಂಧ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಜೈಲಿನ ಭದ್ರತಾ ವ್ಯವಸ್ಥೆ ಹಾಗೂ ಕೈದಿಗಳ ಚಟುವಟಿಕೆಗಳ ಬಗ್ಗೆ ಪೊಲೀಸರು ಹೆಚ್ಚಿನ ನಿಗಾ ವಹಿಸಿದ್ದಾರೆ.

ಜೈಲು ಆವರಣದಲ್ಲಿ ಮೊಬೈಲ್ ಬಳಕೆ ಸೇರಿದಂತೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಈ ಹಿಂದೆಯೇ ಸುಪ್ರೀಂ ಕೋರ್ಟ್ ಖಡಕ್ ಸೂಚನೆ ನೀಡಿತ್ತು. ಇದರ ಬೆನ್ನಲ್ಲೇ ಜೈಲುಗಳಲ್ಲಿ ಅಕ್ರಮವಾಗಿ ಮೊಬೈಲ್ ಬಳಕೆಯಾಗುತ್ತಿರುವುದನ್ನು ತಡೆಯಲು ಅಧಿಕಾರಿಗಳು ತಪಾಸಣೆ ಹಾಗೂ ನಿಗಾ ವ್ಯವಸ್ಥೆಯನ್ನು ಬಿಗಿಗೊಳಿಸಿದ್ದಾರೆ.

ಕಲಬುರಗಿ ಕಾರಾಗ್ರಹದಲ್ಲಿ ಕುಡಿದು ಕುಪ್ಪಳಿಸಿ ಮೋಜು ಮಸ್ತಿ ಮಾಡುತ್ತಿದ್ದ ವಿಡಿಯೋಗಳು ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುವ ಮೂಲಕ ಜೈಲು ಒಳಗಿನ ರಹಸ್ಯಗಳು ಬಯಲಿಗೆ ಬಂದಿದ್ದವು. ಈ ಕುರಿತು ತನಿಖೆ ನಡೆಸಿದ ನಂತರ ಜೈಲು ಸುಧಾರಣಾ ಎಡಿಜಿಪಿ ಅಲೋಕ ಕುಮಾರ ಅವರು ಕರ್ತವ್ಯ ಲೋಪದ ಆರೋಪದ ಮೇಲೆ ಜೈಲು ಅಧೀಕ್ಷಕಿ ಡಾ.ಅನಿತಾ ಅವರನ್ನು ಸೇವೆಯಿಂದ ಅಮಾನತುಗೊಳಿಸಿದ್ದರು. ಅದಾದ ನಂತರವೂ ಕೂಡ ಇನ್ನೂ ಜೈಲಿನಲ್ಲಿ ಇಂಥ ಘಟನೆಗಳು ನಡೆಯುತ್ತಿವೆ.

## ಹುಮನಾಬಾದ್‌ನಲ್ಲಿ ಗುದ್ದಲಿಪೂಜೆ ವೇಳೆ ಹೈಡ್ರಾಮಾ

# ಶಾಸಕ-ಎಂಎಲ್‌ಸಿ ನಡುವೆ ತಾರಕಕ್ಕೇರಿದ ಮಾತಿನ ಚಕಮಕಿ



**ಬೀದರ್, ಸೆ. 10:** ಜಿಲ್ಲೆಯ ಹುಮನಾಬಾದ್‌ನ ಬಸವೇಶ್ವರ ವೃತ್ತದಲ್ಲಿ 6.76 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆ ವೇಳೆ ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ ನಡುವೆ ಮಾತಿನ ಚಕಮಕಿ ನಡೆದಿದೆ. ಕಾಮಗಾರಿಗೆ ಚಾಲನೆ ನೀಡುವ ಸಂದರ್ಭದಲ್ಲೇ ಇಬ್ಬರು ಜನಪ್ರತಿನಿಧಿಗಳ ನಡುವೆ ವಾಗ್ವಾದ ತಾರಕಕ್ಕೇರಿದ್ದು, ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣ ವಾಯಿತು.

ಕಾಮಗಾರಿಗೆ ಚಾಲನೆ ನೀಡುತ್ತಿರುವುದನ್ನು ಪ್ರಶ್ನಿಸಿದ ಎಂಎಲ್‌ಸಿ ಡಾ. ಚಂದ್ರಶೇಖರ ಪಾಟೀಲ, ವೇದಿಕೆ ಕಾರ್ಯಕ್ರಮ ಆಯೋಜಿಸಿ ಎಲ್ಲರನ್ನೂ ಆಹ್ವಾನಿಸಿ ಕಾಮಗಾರಿ ಆರಂಭಿಸಬಹುದಿತ್ತು. ಆದರೆ ಕದ್ದುಮುಚ್ಚಿ ಕಾಮಗಾರಿಗೆ ಚಾಲನೆ ನೀಡುತ್ತಿರುವುದೇಕೆ ಎಂದು ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಅವರನ್ನು ಪ್ರಶ್ನಿಸಿದರು.

ರಸ್ತೆ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಹಲವು ದಿನಗಳು ಕಳೆದಿವೆ. ಕಾಮಗಾರಿ ಅವಧಿ ಮುಗಿಯುವ ಹಂತದಲ್ಲಿ ಕಾಟಾಚಾರಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಚಂದ್ರಶೇಖರ ಪಾಟೀಲ ಆರೋಪಿಸಿದರು.

ಕನಿಷ್ಠ ವೇದಿಕೆ ಯನ್ನೂ ನಿರ್ಮಿಸಿಲ್ಲ. ಶಾಸಕರ ಸಹೋದರರೇ ಬಹುತೇಕ ಕಾಮಗಾರಿಗಳನ್ನು ಮಾಡುತ್ತಿದ್ದು, ಕಾಮಗಾರಿಯ ಗುಣಮಟ್ಟ ಕಳಪೆಯಾಗಿದೆ ಎಂದು ಗಂಭೀರ ಆರೋಪ ಮಾಡಿದರು.

ಈ ಆರೋಪಗಳಿಗೆ ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಪುರಸಭೆಯ ಸಾಮಾನ್ಯ ಸಭೆಯಲ್ಲಿ ನೀಡಿದ್ದ ಭರವಸೆಯಂತೆ ಪಟ್ಟಣದ ಅಭಿವೃದ್ಧಿ ಗಾಗಿ 10 ಕೋಟಿ ಅನುದಾನ ನೀಡಿದ್ದು, ಅದರಲ್ಲಿ 6.76 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಕಾಂಗ್ರೆಸ್‌ನವರಿಗೆ ಅಭಿವೃದ್ಧಿ ಬೇಕಾಗಿಲ್ಲ. ಕೇವಲ ಸುಳ್ಳು ಆರೋಪ ಮಾಡುವುದಷ್ಟೇ ಅವರ ಕೆಲಸ ಎಂದು ಶಾಸಕ ಸಿದ್ದಲಿಂಗಪ್ಪ ಪಾಟೀಲ ತಿರುಗೇಟು ನೀಡಿದರು. ಇದರಿಂದ ಇಬ್ಬರ ನಡುವಿನ ಮಾತಿನ ಚಕಮಕಿ ಮತ್ತಷ್ಟು ತೀವ್ರಗೊಂಡಿತು.

ಪರಿಸ್ಥಿತಿ ಕೈಮೀರುವ ಹಂತಕ್ಕೆ ತಲುಪುತ್ತಿದ್ದಂತೆ ಸ್ಥಳದಲ್ಲಿದ್ದ ಸಿಪಿಐ ಸಂತೋಷ್ ತಟ್ಟೆಪಳ್ಳಿ ಮಧ್ಯಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸಿದರು. ಬಳಿಕ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಯಿತು. ಜನಪ್ರತಿನಿಧಿಗಳೇ ಸಾರ್ವಜನಿಕವಾಗಿ ಈ ರೀತಿ ಪರಸ್ಪರ ಕಿತ್ತಾಡುವುದು ಸರಿಯೇ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

# ಮನುಷ್ಯನ ಗಮನ ಗುರಿಯತ್ತ ಇರಬೇಕೇ ಹೊರತು ಅಡೆತಡೆಯ ಮೇಲಲ್ಲ- ಶ್ರೀ ರಂಭಾಪುರಿ ಜಗದ್ಗುರು

**ಶ್ರೀ ರಂಭಾಪುರಿ ಪೀಠ(ಬಾಳೆಹೊನ್ನೂರು)– ಸೆ.10–** ಜಗತ್ತು ಎಷ್ಟೇ ಬದಲಾದರೂ ಸಂಬಂಧಗಳು ಸಡಿಲಗೊಳ್ಳಬಾರದು. ಬಾಂಧವ್ಯ ಸಂಬಂಧಗಳನ್ನು ಮರೆತರೆ ಮನುಷ್ಯನಿಗೂ ಯಂತ್ರಕ್ಕೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಮನುಷ್ಯನ ಗಮನ ಗುರಿಯತ್ತ ಇರಬೇಕೇ ಹೊರತು ಸಮಸ್ಯೆ ಅಡೆತಡೆಯ ಮೇಲಲ್ಲವೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸುಖ ದು:ಖಗಳು ಜೀವನದ ಹಗಲು ರಾತ್ರಿಗಳಿದ್ದಂತೆ. ಸುಖದಲ್ಲಿ ಹಿಗ್ಗದೇ ಕಷ್ಟದಲ್ಲಿ ಕುಗ್ಗದೇ ಸಮಾನವಾಗಿ ಸ್ವೀಕರಿಸಬೇಕು. ವಿನಯವಿಲ್ಲದ ವಿದ್ಯೆ ಹಸಿವಿಲ್ಲದ ಊಟ ಹರಿತವಿಲ್ಲದ ಆಯುಧ ಉಪಕಾರ ಇಲ್ಲದ ಜೀವನ ಗುಣವಿಲ್ಲದ ರೂಪ. ಉಪಯೋಗಕ್ಕೆ ಬಾರದ ಹಣ ಎಲ್ಲವೂ ವ್ಯರ್ಥ. ಸಹನೆ ಇದ್ದರೆ ಸಮಯ ಕೂಡಾ ಸಹಾಯ ಮಾಡುತ್ತದೆ. ಸಹನೆ ಇಲ್ಲದಿದ್ದರೆ ಸಮಯವೇ ಸಂಕಷ್ಟಗಳನ್ನು ರವಾನಿಸುತ್ತದೆ. ಶ್ರೀ ಜಗದ್ಗುರು



ರೇಣುಕಾಚಾರ್ಯರು ಬೋಧಿಸಿದ ತತ್ವ ಸಿದ್ಧಾಂತಗಳು ಮಾನವ ಜೀವನದ ಶ್ರೇಯೋಭಿವೃದ್ಧಿಗೆ ಅಡಿಪಾಯವಾಗಿವೆ. ಸತ್ಯ ಶುದ್ಧ ಧರ್ಮ ಮಾರ್ಗ ಉಜ್ವಲ ಬದುಕಿಗೆ ಕಾರಣವಾಗುತ್ತದೆ ಎಂದರು.

ಪುರಾಣ ಪ್ರವಚನ ಮಾಡಿದ ಬೇರುಗಂಡಿ ಬೃಹನ್ಮಠದ ರೇಣುಕ ಮಹಾಂತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಶ್ವಾಸ ಇಲ್ಲದಿದ್ದರೆ ಜೀವನ ಮುಗಿಯುತ್ತದೆ. ವಿಶ್ವಾಸ ಇಲ್ಲದಿದ್ದರೆ ಸಂಬಂಧಗಳು ಉಳಿಯುವುದಿಲ್ಲ. ಏನೂ ಇಲ್ಲದೇ ಇದ್ದಾಗ ಗಳಿಸಿಕೊಂಡು ಹೋಗಬೇಕು. ಎಲ್ಲವೂ ಇದ್ದಾಗ ಉಳಿಸಿಕೊಂಡು ಹೋಗುವುದೇ ಶ್ರೀ ಜಗದ್ಗುರು ರೇಣುಕಾಚಾರ್ಯರ ಸತ್ಯ ಜೀವನ ಸಂದೇಶವಾಗಿದೆ ಎಂದರು. ಶ್ರಾವಣ ಪೂರ್ತಿ ಶಿಷಪೂಜಾನುಷ್ಠಾನ ಕೈಗೊಂಡಿದ್ದ ಅಂಬಾಜೋಗಾಯಿ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳು ಕೊನೆ ಶ್ರಾವಣ ಗುರುವಾರದಂದು ಅನುಷ್ಠಾನ ಮಂಗಲಗೊಳಿಸಿ ಜಗದ್ಗುರುಗಳವರ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ ನಮ್ಮ ಮನಸ್ಸಿಗೆ ಅಪಾರ ಸಂತೋಷ ಸಂತೃಪ್ತಿ ತಂದಿದೆ. ಗುರು ಕಾರುಣ್ಯದ ಶಕ್ತಿಯಿಂದ ನಮ್ಮ ಜೀವನ ಪಾವನವಾಗಿದೆ. ನಮ್ಮ ಬಳಿ ಏನಿದೆ ಅನ್ನುವುದಕ್ಕಿಂತ ನೆಮ್ಮದಿ ಇದೆಯಾ ಎಂದು ಯೋಚಿಸುವುದು ಉತ್ತಮ. ನೆಮ್ಮದಿಗಿಂತ ದೊಡ್ಡ ಸಂಪತ್ತು ಯಾವುದೂ ಇಲ್ಲವೆಂದರು.

# ಭಾರತದಂತೆ ಅಮೆರಿಕಾದಲ್ಲೂ ಗ್ಯಾರಂಟಿ ಯೋಜನೆ

## ಮಧ್ಯಂತರ ಚುನಾವಣೆಯಲ್ಲಿ ಗೆದ್ದರೆ ಐದು ಸಾವಿರ ಡಾಲರ್ ಗಿಫ್ಟ್; ಟ್ರಂಪ್



**ವಾಷಿಂಗ್ಟನ್,ಸೆ.10:** ಭಾರತದ ಚುನಾವಣೆಯಲ್ಲಿ ಪಕ್ಷಗಳು ಉಚಿತ ಗ್ಯಾರಂಟಿ ಆಫರ್, ಹಣ ನೀಡುವ ಘೋಷಣೆ ಪ್ರಕಟಿಸುವ ಪರಿಪಾಠ ಈಗ ಸಾಮಾನ್ಯ. ಆದರೆ ಈಗ ಅಮೆರಿಕಕ್ಕೂ ಈ ಟ್ರೆಂಡ್ ಕಾಲಿಟ್ಟಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಂತರ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಮತ್ತೆ ಅಧಿಕಾರಕ್ಕೆ ಬಂದರೆ ಪ್ರತಿ ಅಮೆರಿಕದ ಪ್ರಜೆಗೆ 5 ಸಾವಿರ ಡಾಲರ್(4.75 ಲಕ್ಷ ರೂ.) ನೀಡಲಾಗುವುದು ಎಂದು ಬಂಪರ್ ಆಫರ್ ಪ್ರಕಟಿಸಿದ್ದಾರೆ.

ನವೆಂಬರ್‌ನಲ್ಲಿ ನಡೆಯಲಿರುವ ಮಧ್ಯಂತರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷವು ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ (ಕೆಳಮನೆ) ಮತ್ತು ಸೆನೆಟ್ (ಮೇಲ್ಮನೆ) ಎರಡರಲ್ಲೂ ಬಹುಮತ ಉಳಿಸಿಕೊಂಡರೆ, ದೇಶದ ಪ್ರತಿಯೊಬ್ಬ ವಯಸ್ಕ ಪ್ರಜೆಗೂ 5,000 ಡಾಲರ್‌ಗೆ ಹೆಚ್ಚು ಲಾಭಾಂಶ ನೀಡುವುದಾಗಿ ಟ್ರಂಪ್ ಘೋಷಿಸಿದ್ದಾರೆ.

ಡಲ್ಲಾಸ್‌ನಲ್ಲಿ ನಡೆದ ರಿಪಬ್ಲಿಕನ್ ಪಕ್ಷದ ಪ್ರಥಮ ಮಧ್ಯಂತರ ಸಮಾವೇಶದಲ್ಲಿ ಸುಮಾರು 1 ಗಂಟೆ 45 ನಿಮಿಷಗಳ ಕಾಲ ಭಾಷಣ ಮಾಡಿದ ಟ್ರಂಪ್, ರಿಪಬ್ಲಿಕನ್‌ಗಳು ಉಭಯ ಸದನಗಳಲ್ಲೂ ಜಯಭೇರಿ ಬಾರಿಸಿದರೆ, ಪ್ರತಿಯೊಬ್ಬ ಅಮೆರಿಕನ್ ವಯಸ್ಕ ನಾಗರಿಕನಿಗೆ 5,000 ಟ್ರಂಪ್ ಡಿವಿಡೆಂಡ್ ವಿತರಿಸುತ್ತೇನೆ ಎಂಬುದು ನನ್ನ ವಾಗ್ದಾನ ಎಂದು ಹೇಳುವ ಮೂಲಕ ಮತದಾರರ ಓಲೈಕೆಗೆ ಮುಂದಾಗಿದ್ದಾರೆ.

ಕಂಪನಿಗಳು ಷೇರುದಾರರಿಗೆ ಡಿವಿಡೆಂಡ್ ನೀಡುವಂತೆ ಈ ಹಣವನ್ನು ವಿತರಿಸಲಾಗುವುದು ಎಂದು ಟ್ರಂಪ್ ಹೇಳಿಕೊಂಡಿದ್ದರೂ, ಈ ಬೃಹತ್ ಯೋಜನೆಗೆ ಹಣ ಹೇಗೆ ಕ್ರೋಢೀಕರಿಸಲಾಗುತ್ತದೆ ಮತ್ತು ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂಬ ಬಗ್ಗೆ ಅವರು ಯಾವುದೇ ಸ್ಪಷ್ಟ ಮಾಹಿತಿ ನೀಡಿಲ್ಲ. ಅಮೆರಿಕದಲ್ಲಿ ಸರಿಸುಮಾರು 27 ಕೋಟಿ ವಯಸ್ಕರಿದ್ದು, ಈ ಭರವಸೆಯನ್ನು ಈಡೇರಿಸಲು ಬರೋಬ್ಬರಿ 1.35 ಟ್ರಿಲಿಯನ್ ಡಾಲರ್(128.55 ಲಕ್ಷ ಕೋಟಿ ರೂ.) ಹಣದ ಅಗತ್ಯವಿದೆ.

ಜೀವನ ವೆಚ್ಚ ಏರಿಕೆ, ಆರ್ಥಿಕ ಹಿನ್ನಡೆ ಹಾಗೂ ಇರಾನ್ ಯುದ್ಧದ ಕಾರಣಗಳಿಂದಾಗಿ ಟ್ರಂಪ್ ಅವರ ಜನಪ್ರಿಯತೆ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ತಮ್ಮ ಅಧಿಕಾರದ ಕೊನೆಯ ಎರಡು ವರ್ಷಗಳಲ್ಲಿ ಡೆಮಾಕ್ರಾಟ್‌ಗಳಿಂದ ಎದುರಾಗಬಹುದಾದ ತನಿಖೆಗಳು ಮತ್ತು ತೀವ್ರ ವಿರೋಧವನ್ನು ತಡೆಯಲು ಅವರು ಕಾಂಗ್ರೆಸ್ ನಿಯಂತ್ರಣ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಡೆಮಾಕ್ರಾಟ್‌ಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಟ್ರಂಪ್, ನಾವು ಅಮೆರಿಕದ ಭವಿಷ್ಯವನ್ನು ತೀವ್ರ ಎಡಪಂಥೀಯ ಡೆಮಾಕ್ರಾಟ್‌ಗಳ ಕೈಗೊಪ್ಪಿಸಿದರೆ, ದೇಶವು ಮತ್ತೆ ಮೊದಲಿನ ಸ್ಥಿತಿಗೆ ಮರಳಲು ಮುಂದಿನ ಒಂದು ದಶಕವನ್ನೇ ವ್ಯಯಿಸಬೇಕಾಗುತ್ತದೆ. ರಿಪಬ್ಲಿಕನ್ನರಿಗೆ ಮತ ನೀಡಿ, ನಾವು ವಿಶ್ವವೇ ಬೆರಗಾಗುವಂತೆ ಮುನ್ನಡೆಯುತ್ತೇವೆ ಎಂದು ಮತದಾರರಿಗೆ ಕರೆ ನೀಡಿದ್ದಾರೆ.

### ನಮ್ಮ ರಸ್ತೆಯಿಂದ ಹೊರಡಿ, ನಿಮಗೆ ವಾಹನ ಚಲಾಯಿಸಲು ಗೊತ್ತಿಲ್ಲ 'ಮಿಸ್ಟರ್ ಸಿಂಗ್'

# ಅಮೆರಿಕದ ಜಾಹೀರಾತಿಗೆ ಭಾರಿ ಆಕ್ರೋಶ




**ವಾಷಿಂಗ್ಟನ್,ಸೆ.10:** ಅಕ್ರಮ ವಲಸಿಗರನ್ನು ಸ್ವಯಂ ಪ್ರೇರಿತವಾಗಿ ಅಮೆರಿಕ ತೊರೆಯುವಂತೆ ಉತ್ತೇಜಿಸಲು ಟ್ರಂಪ್ ಆಡಳಿತದ ಗೃಹ ಭದ್ರತಾ ಇಲಾಖೆ ನಡೆಸುತ್ತಿರುವ ಅಭಿಯಾನ ವಿವಾದಕ್ಕೆ ಕಾರಣವಾಗಿದೆ. ಮಿಸ್ಟರ್ ಸಿಂಗ್ ಅವರನ್ನು ಗುರಿಯಾಗಿಸಿಕೊಂಡು ಪ್ರಕಟಿಸಿರುವ ಜಾಹೀರಾತು ಭಾರತೀಯರು ಹಾಗೂ ಸಿಖ್ ಸಮುದಾಯವನ್ನು ಅವಮಾನಿಸುವಂತಿದೆ ಎಂದು ವಿವಿಧ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

ಗೃಹ ಭದ್ರತಾ ಇಲಾಖೆ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿರುವ ಜಾಹೀರಾತಿನಲ್ಲಿ "ನಮ್ಮ ರಸ್ತೆಯಿಂದ ಹೊರಡಿ, ನಿಮಗೆ ವಾಹನ ಚಲಾಯಿಸಲು ಗೊತ್ತಿಲ್ಲ ಮಿಸ್ಟರ್ ಸಿಂಗ್" ಎಂಬ ಸಂದೇಶವಿದೆ. ಮತ್ತೊಂದು ಸಂದೇಶದಲ್ಲಿ Self-deport or find out ಎಂದು ಎಚ್ಚರಿಕೆ ನೀಡಲಾಗಿದೆ. ಈ ಜಾಹೀರಾತುಗಳಲ್ಲಿ ಕಂದು ಬಣ್ಣದ ಗಡ್ಡದ ವ್ಯಕ್ತಿಯ ಚಿತ್ರ ಹಾಗೂ ಎಐ ಮೂಲಕ ಸೃಷ್ಟಿಸಲಾದ ದೃಶ್ಯಗಳನ್ನು ಬಳಸಲಾಗಿದೆ.

ಜಾಹೀರಾತಿನಲ್ಲಿನ ಸಿಂಗ್ ಎಂಬ ಹೆಸರಿನ ಬಳಕೆಗೆ ಹಿಂದೂ ಅಮೆರಿಕನ್ ಫೌಂಡೇಶನ್ ತೀವ್ರ ವಿರೋಧ ವ್ಯಕ್ತಪಡಿಸಿದೆ. ಸಿಂಗ್ ಎಂಬುದು ಹಿಂದೂ ಮತ್ತು ಸಿಖ್ ಸಮುದಾಯದ ಲಕ್ಷಾಂತರ ಜನರು ಬಳಸುವ ಹೆಸರಾಗಿದ್ದು, ಅದನ್ನು ಅಕ್ರಮ ವಲಸಿಗರು ಹಾಗೂ ರಸ್ತೆ ಅಪರಾಧಗಳೊಂದಿಗೆ ಜೋಡಿಸಿ ರುವುದು ಜನಾಂಗೀಯ ಮತ್ತು ಧಾರ್ಮಿಕ ಪ್ರೊಫೈಲಿಂಗ್ ಎಂದು ಸಂಘಟನೆ ಆರೋಪಿಸಿದೆ.

ಸಿಖ್ ಒಕ್ಕೂಟ ಕೂಡ ಆಕ್ಷೇಪ ವ್ಯಕ್ತಪಡಿಸಿದ್ದು, ಅಮೆರಿಕ ದಲ್ಲಿರುವ ಲಕ್ಷಾಂತರ ಸಿಖ್ಖರು ಸಿಂಗ್ ಎಂಬ ಉಪನಾಮ ಹೊಂದಿದ್ದಾರೆ. ಸರ್ಕಾರವೇ ಈ ಸಮುದಾಯವನ್ನು ಶತ್ರುಗಳಂತೆ ಬಿಂಬಿಸುವ ರೀತಿಯಲ್ಲಿ ಪ್ರಚಾರ ನಡೆಸುತ್ತಿರುವುದು ಆತಂಕಕಾರಿ ಎಂದು ಹೇಳಿದೆ.

ಗೃಹ ಭದ್ರತಾ ಇಲಾಖೆ ಅಭಿಯಾನದಲ್ಲಿ ಅಕ್ರಮ ವಲಸಿಗರು ಹಾಗೂ ವಾಣಿಜ್ಯ ವಾಹನ ಚಾಲಕರ ವಿರುದ್ಧದ ಕ್ರಮವನ್ನೂ ಪ್ರಸ್ತಾಪಿಸಲಾಗಿದೆ. ಸಂಬಂಧಿತ ಹೇಳಿಕೆಯಲ್ಲಿ ಟ್ರಕ್ ಚಾಲಕರಾದ ಹರ್ಜಿಂದರ್ ಸಿಂಗ್, ರಾಜಿಂದರ್ ಕುಮಾರ್, ಬೆಕ್ಜಾನ್ ಬೆಯಿಶೆಕೀವ್, ಅಖ್ರೋರ್ ಬೊಜೊರೊವ್ ಮತ್ತು ಜಸ್ವೀರ್ ಸಿಂಗ್ ಅವರ ಹೆಸರನ್ನು ಉಲ್ಲೇಖಿಸಲಾಗಿದ್ದು, ರಸ್ತೆ ಅಪಘಾತ ಗಳು ಮತ್ತು ಇತರ ಅಪರಾಧಗಳ ಹಿನ್ನೆಲೆಯಲ್ಲಿನ ಘಟನೆಗಳನ್ನು ಪ್ರಚಾರದ ಭಾಗವಾಗಿ ಬಳಸಲಾಗಿದೆ.

ಈ ವಿವಾದವು ಗೃಹ ಭದ್ರತಾ ಇಲಾಖೆ ನಡೆಸುತ್ತಿರುವ ಸ್ವಯಂ ಗಡಿಪಾರು ಅಭಿಯಾನ ಕಾರ್ಯಕ್ರಮದ ಭಾಗವಾಗಿ ನಡೆದಿದೆ. ಅಮೆರಿಕದಲ್ಲಿ ಅಕ್ರಮವಾಗಿ ನೆಲೆಸಿರುವ ಅರ್ಹ ವಲಸಿಗರು ಬಂಧನ ಅಥವಾ ಗಡೀಪಾರು ಪ್ರಕ್ರಿಯೆಗೆ ಒಳಗಾಗುವ ಬದಲು ಸ್ವಯಂಪ್ರೇರಿತವಾಗಿ ದೇಶ ತೊರೆಯಲು ಈ ಕಾರ್ಯಕ್ರಮದ ಮೂಲಕ ನೋಂದಾಯಿಸಿ ಕೊಳ್ಳಬಹುದು. ಗೃಹ ಭದ್ರತಾ ಇಲಾಖೆ ಪ್ರಕಾರ, ಅರ್ಹರಿಗೆ ಪ್ರಯಾಣದ ನೆರವು ಹಾಗೂ 2,600 ಅಮೆರಿಕನ್ ಡಾಲರ್‌ಗಳ ನಿರ್ಗಮನ ಪ್ರೋತ್ಸಾಹಧನ ನೀಡಲಾಗುತ್ತಿದೆ.

# ಚೀನಾ ಬಂದರಿನಲ್ಲಿ ಸರಕು ಸಾಗಣೆ ಹಡಗಿಗೆ ಬೆಂಕಿ 25 ಮಂದಿ ಸಾವು, ಐವರು ನಾಪತ್ತೆ



**ಬೀಜಿಂಗ್,ಸೆ.10:** ಚೀನಾದ ಬಂದರಿನಲ್ಲಿ ಸರಕು ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಪರಿಣಾಮ ಇಪ್ಪತ್ತೈದು ಮಂದಿ ಸಾವನ್ನಪ್ಪಿದ್ದು ಐವರು ನಾಪತ್ತೆಯಾಗಿದ್ದಾರೆ. ಚೀನಾದ ಬಂದರಿನಲ್ಲಿ ನಿಂತಿದ್ದ ಸರಕು ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಎಂದು ಚೀನಾದ ರಾಜ್ಯ ಮಾಧ್ಯಮ ಗುರುವಾರ ವರದಿ ಮಾಡಿದೆ.ಚೀನಾದ ಬಂದರಿನಲ್ಲಿ ಸರಕು ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಪರಿಣಾಮ ಇಪ್ಪತ್ತೈದು ಮಂದಿ ಸಾವನ್ನಪ್ಪಿದ್ದು ಐವರು ನಾಪತ್ತೆಯಾಗಿದ್ದಾರೆ. ಚೀನಾದ ಬಂದರಿನಲ್ಲಿ ನಿಂತಿದ್ದ ಸರಕು ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಎಂದು ಚೀನಾದ ರಾಜ್ಯ ಮಾಧ್ಯಮ ಗುರುವಾರ ವರದಿ ಮಾಡಿದೆ.ಈ ಹಡಗನ್ನು 'ಓಷನ್ ಮೆಲೋಡಿ' ಎಂದು ಗುರುತಿಸಲಾಗಿದೆ. ಸಾರ್ವಜನಿಕ ಹಡಗು–ಟ್ರ್ಯಾಕಿಂಗ್ ವೆಬ್‌ಸೈಟ್ "ವೆಸೆಲ್‌ಫೈಂಡರ್" ಪ್ರಕಾರ, ಇದು ಲೈಬೀರಿಯನ್ ಧ್ವಜದ ಅಡಿಯಲ್ಲಿ ಸಾಗುತ್ತಿದೆ. ಒಟ್ಟು 42 ಜನರು ಹಡಗಿನಲ್ಲಿದ್ದರೆಂದು ವರದಿಯಾಗಿದೆ. ಅವರಲ್ಲಿ 12 ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ.

ಅಗ್ನಿ ಅವಘಡಕ್ಕೆ ನಿಖರವಾದ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಘಟನೆಯ ನಂತರ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಕ್ಷಣದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗೆ ಆದೇಶಿಸಿದ್ದಾರೆ.

ಕ್ಸಿನ್ಹುವಾ ಪ್ರಕಾರ, ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಕ್ಷಣದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗೆ ಆದೇಶಿಸಿದ್ದಾರೆ. ಕಾಣೆಯಾದವರನ್ನು ತಕ್ಷಣ ಹುಡುಕಲು ಮತ್ತು ಘಟನೆಗೆ ಹೊಣೆಗಾರಿಕೆಯನ್ನು ಕೋರಿದ್ದಾರೆ.

# ಚೀನಾ ವಿರುದ್ಧ ವಿಶ್ವ ಉಯ್ಘರ್ ಕಾಂಗ್ರೆಸ್ ಉಪಾಧ್ಯಕ್ಷರ ಟೀಕೆ

**ಜಿನೀವಾ, ಸೆ.10:** ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ 63 ನೇ ಅಧಿವೇಶನದಲ್ಲಿ ಚೀನಾ ಮತ್ತೆ ಟೀಕೆಗಳನ್ನು ಎದುರಿಸಿತು. ಬೀಜಿಂಗ್ ತನ್ನ ಸಾಮೂಹಿಕ ಬಂಧನ ಅಭಿಯಾನವನ್ನು ಪ್ರಾರಂಭಿಸಿದ ಸುಮಾರು ಒಂದು ದಶಕದ ನಂತರವೂ ಕ್ಸಿನ್ಜಿಯಾಂಗ್ ಉಯ್ಘರ್ ಸ್ವಾಯತ್ತ ಪ್ರದೇಶದಲ್ಲಿ ಉಯ್ಘರ್‌ಗಳು ಮತ್ತು ಇತರ ಪ್ರಧಾನವಾಗಿ ಮುಸ್ಲಿಂ ಸಮುದಾಯಗಳ ವಿರುದ್ಧ ಗಂಭೀರ ದೌರ್ಜನ್ಯಗಳು ಮುಂದುವರೆದಿವೆ ಎಂದು ವಿಶ್ವ ಉಯ್ಘರ್ ಕಾಂಗ್ರೆಸ್ ಉಪಾಧ್ಯಕ್ಷೆ ಜುಮ್ರೆಟ್ ಎರ್ಕಿನ್ ಎಚ್ಚರಿಸಿದ್ದಾರೆ.

ಬೆದರಿಕೆ ಹಾಕಿದ ಜನರ ಸೊಸೈಟಿಯ ಪರವಾಗಿ ವೀಡಿಯೊ ಹೇಳಿಕೆಯಲ್ಲಿ ಮಾತನಾಡಿದ ಎರ್ಕಿನ್, ಆಗಸ್ಟ್ 31, 2022 ರಂದು ಪ್ರಕಟವಾದ ಯುಎನ್ ಮಾನವ ಹಕ್ಕುಗಳ ಕಚೇರಿಯ ಮೌಲ್ಯಮಾಪನವನ್ನು ಉಲ್ಲೇಖಿಸಿದರು. ಉಯ್ಘರ್‌ಗಳು ಮತ್ತು ಇತರ ಪ್ರಧಾನವಾಗಿ ಮುಸ್ಲಿಂ ಗುಂಪುಗಳ ಅನಿಯಂತ್ರಿತ, ಅಮಾನವೀಯ ಮತ್ತು ತಾರತಮ್ಯದ ಬಂಧನದ ಪ್ರಮಾಣವು "ಮಾನವೀಯತೆಯ ವಿರುದ್ಧದ ಅಪರಾಧಗಳಿಗೆ ಕಾರಣವಾಗಬಹುದು" ಎಂದು ಅದು ತೀರ್ಮಾನಿಸಿದೆ. ಚೀನಾ ತನ್ನ ಸಾಮೂಹಿಕ ಬಂಧನ ಅಭಿಯಾನವನ್ನು ಪ್ರಾರಂಭಿಸಿ 10 ನೇ ವರ್ಷ ಸಮೀಪಿಸುತ್ತಿರುವಾಗ, ಗಂಭೀರ ಮಾನವ ಹಕ್ಕುಗಳ ಉಲ್ಲಂಘನೆಗಳು ನಡೆಯುತ್ತಲೇ ಇವೆ ಎಂದು ಎರ್ಕಿನ್ ಹೇಳಿದರು, ಆದರೆ ಅವರು ಬಲವಂತದ ನೀತಿಗಳು ಎಂದು ವಿವರಿಸಿದ್ದು ಪ್ರದೇಶದಾದ್ಯಂತ ಹೆಚ್ಚು ಸಾಂಸ್ಥಿಕೀಕರಣಗೊಂಡಿವೆ.

ಉಯ್ಘರ್ ಪ್ರದೇಶದಲ್ಲಿ ಆಪಾದಿತ ಬಲವಂತದ ಕಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಅವರು ಕಳವಳಗಳನ್ನು ಎತ್ತಿ ತೋರಿಸಿದರು. ಎರ್ಕಿನ್ ಪ್ರಕಾರ, ಯುಎನ್ ತಜ್ಞರು ರಾಜ್ಯ–ಹೇರಿದ ಬಲವಂತದ ಕಾರ್ಮಿಕರ ಮಾದರಿಯ ಬಗ್ಗೆ ಎಚ್ಚರಿಸಿದ್ದಾರೆ, ಆದರೆ ಪ್ರದೇಶದ 2021–2025ರ ಐದು ವರ್ಷಗಳ ಯೋಜನೆಯು 13.75 ಮಿಲಿಯನ್ ಕಾರ್ಮಿಕ ವರ್ಗಾವಣೆ ಪ್ರಕರಣಗಳನ್ನು ಅವರು ಬಲವಂತದ ಕಾರ್ಮಿಕ ಎಂದು ನಿರೂಪಿಸಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ತಜ್ಞರ ಸಮಿತಿಯು, 2024 ರಲ್ಲಿ ಬಲವಂತದ ಕಾರ್ಮಿಕ ವರ್ಗಾವಣೆ ಕಾರ್ಯಕ್ರಮಗಳು ವೇಗಗೊಂಡಿವೆ ಮತ್ತು ಈ ಪ್ರದೇಶದಲ್ಲಿ ದಾಖಲೆಯ ಮಟ್ಟವನ್ನು ತಲುಪಿವೆ ಎಂಬ ವರದಿಗಳನ್ನು ಸಹ ಗಮನಿಸಿದೆ ಎಂದು ಅವರು ಹೇಳಿದರು.

ಜುಲೈ 1 ರಂದು ಜಾರಿಗೆ ಬಂದ ಚೀನಾದ ಜನಾಂಗೀಯ ಏಕತೆ ಮತ್ತು ಪ್ರಗತಿಯನ್ನು ಉತ್ತೇಜಿಸುವ ಕಾನೂನನ್ನು ಎರ್ಕಿನ್ ಮತ್ತಷ್ಟು ಟೀಕಿಸಿದರು. ಶಾಸನವು ಸಮೀಕರಣವಾದಿ ನೀತಿಗಳನ್ನು ಮತ್ತಷ್ಟು ಸಾಂಸ್ಥಿಕಗೊಳಿಸುತ್ತದೆ ಮತ್ತು ಉಯ್ಘರ್‌ಗಳು, ಟಿಬೆಟಿಯನ್ನರು, ಮಂಗೋಲರು ಮತ್ತು ಇತರ ಜನಾಂಗೀಯ ಸಮುದಾಯಗಳಲ್ಲಿ ಭಾಷಾ, ಸಾಂಸ್ಕೃತಿಕ ಮತ್ತು ಧಾರ್ಮಿಕ ಹಕ್ಕುಗಳ ರಕ್ಷಣೆಯ ಬಗ್ಗೆ ಕಳವಳಗಳನ್ನು ಹುಟ್ಟುಹಾಕುತ್ತದೆ ಎಂದು ಅವರು ವಾದಿಸಿದರು; ಅವರ ಪ್ರಕಾರ, ಈ ಕಾನೂನು ದೊಡ್ಡ ಪ್ರಮಾಣದಲ್ಲಿ ಸಾಂಸ್ಕೃತಿಕ ಸವೆತಕ್ಕೆ ಕೊಡುಗೆ ನೀಡುತ್ತದೆ.

ಘಗಅ ಉಪಾಧ್ಯಕ್ಷರು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಮತ್ತು ಮಾನವ ಹಕ್ಕುಗಳ ಮಂಡಳಿಯು ಕಾಂಕ್ರೀಟ್ ಹೊಣೆಗಾರಿಕೆ ಕ್ರಮಗಳನ್ನು ಸಂಘಟಿಸಲು ಮತ್ತು ಬಲಿಪಶುಗಳಿಗೆ ನ್ಯಾಯ ಮತ್ತು ಪರಿಹಾರಗಳಿಗಾಗಿ ಅರ್ಥಪೂರ್ಣ ಮಾರ್ಗಗಳನ್ನು ಸ್ಥಾಪಿಸಲು ಕರೆ ನೀಡಿದರು. ಕ್ಸಿನ್ಜಿಯಾಂಗ್ನಲ್ಲಿ ಚೀನಾದ ನೀತಿಗಳ ನಿರಂತರ ಅಂತರರಾಷ್ಟ್ರೀಯ ಪರಿಶೀಲನೆಯ ಮಧ್ಯೆ ಅವರ ಹೇಳಿಕೆಗಳು ಬಂದಿವೆ.

# ಮೊದಲ ಸೆಮಿಸ್‌ನಲ್ಲಿ ಬಾಂಗ್ಲಾ ಸೋಲಿಸಿ ಫೈನಲ್ ಪ್ರವೇಶಿಸಿದ ಭಾರತ!




**ದುಬೈ:** ಭಾರತ ಮತ್ತು ಬಾಂಗ್ಲಾದೇಶ ಮಹಿಳಾ ತಂಡಗಳು ಮಹಿಳಾ ಏಷ್ಯಾ ಕಪ್ 2026ರ ಮೊದಲ ಸೆಮಿಫೈನಲ್‌ನಲ್ಲಿ ಪಂದ್ಯದಲ್ಲಿ ಮುಖಾಮುಖಿಯಾಗಿದ್ದು, ಈ ಹೈವೋಲ್ಟೇಜ್ ನಾಕೌಟ್ ಪಂದ್ಯದಲ್ಲಿ ಭಾರತ ತಂಡ ಬಾಂಗ್ಲಾದೇಶವನ್ನು 40 ರನ್ ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದೆ.

ಭಾರತೀಯ ಮಹಿಳಾ ತಂಡವು ಸ್ಫೋಟಕ ಬ್ಯಾಟಿಂಗ್ ಮಾಡಿದ್ದು ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್‌ಗಳ ನಷ್ಟಕ್ಕೆ 149 ರನ್ ಪೇರಿಸಿತ್ತು. 150 ರನ್ ಗಳ ಗುರಿ ಬೆನ್ನಟ್ಟಿದ ಬಾಂಗ್ಲಾದೇಶ 109 ರನ್ ಪೇರಿಸಲಷ್ಟೇ ಸಾಧ್ಯವಾಗಿದ್ದು 40 ರನ್ ಗಳಿಂದ ಸೋಲು ಕಂಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಲು ಆಯ್ಕೆ ಮಾಡಿಕೊಂಡ ಭಾರತ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ.

ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ ಅವರನ್ನು ಸುಲ್ತಾನಾ ಖಾತುನ್ ಕೇವಲ 2 ರನ್‌ಗಳಿಗೆ ಔಟ್ ಮಾಡಿದರು. ಇದಾದ ನಂತರ, ಕ್ರೀಸ್‌ಗೆ ಬಂದ ಪ್ರತಿಕಾ ರಾವಳ್ (20 ರನ್‌ಗಳು, 24 ಎಸೆತಗಳು) ಶೆಫಾಲಿಗೆ ಬೆಂಬಲ ನೀಡಿದರು. ಆದರೆ ರನ್ ದರವನ್ನು ಹೆಚ್ಚಿಸುವ ಸಂಪೂರ್ಣ ಜವಾಬ್ದಾರಿ ಶೆಫಾಲಿ ಅವರ ಹೆಗಲ ಮೇಲಿತ್ತು. ಶೆಫಾಲಿ ವರ್ಮಾ ಆರಂಭದಿಂದಲೇ ಬಾಂಗ್ಲಾದೇಶದ ಬೌಲರ್‌ಗಳ ಮೇಲೆ ಒತ್ತಡ ಹೇರಲು ಪ್ರಾರಂಭಿಸಿದರು. ಕೇವಲ 40 ಎಸೆತಗಳಲ್ಲಿ 64 ರನ್‌ಗಳ ಅಬ್ಬರದ ಇನ್ನಿಂಗ್ಸ್ ಆಡಿದರು. ಪರಿಣಾಮ ಭಾರತ ಸ್ಪರ್ಧಾತ್ಮಕ ರನ್ ಕಲೆಹಾಕಿತು.

# ಸೆ.13ರಂದು ನಡೆಯಲಿರುವ ಭಾರತ–ಅಫ್ಘಾನಿಸ್ತಾನ ನಡುವಿನ ಮೊದಲ ಟಿ20 ಪಂದ್ಯ ಮುಂದೂಡಿಕೆ ಇಲ್ಲ: ಡಿಡಿಸಿಎ




**ನವದೆಹಲಿ, ಸೆ.10:** ಭಾರತ ಮತ್ತು ಅಫ್ಘಾನಿಸ್ತಾನ ನಡುವಿನ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯ ವೇಳಾಪಟ್ಟಿಯಂತೆಯೇ ನಡೆಯಲಿದೆ ಎಂದು ದೆಹಲಿ ಸಂಚಾರ ಪೊಲೀಸರು ಗುರುವಾರ ಕ್ರಿಕೆಟ್ ಸಂಸ್ಥೆಯನ್ನು ಹೈ ಪ್ರೊಫೈಲ್ ಬ್ರಿಕ್ಸ್ ಶೃಂಗಸಭೆಯ ಕಾರಣ ಪಂದ್ಯವನ್ನು ಮರು ನಿಗದಿಪಡಿಸುವಂತೆ ಕೇಳಿಕೊಂಡ ಕೂಡಲೇ ಡಿಡಿಸಿಎ ತಿಳಿಸಿದೆ. ಸೆ.13, 15 ಮತ್ತು 17 ರಂದು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಮೂರು ಪಂದ್ಯಗಳ ಸರಣಿಗೆ ಅಫ್ಘಾನಿಸ್ತಾನ ಭಾರತವನ್ನು 'ಆತಿಥ್ಯ ವಹಿಸಲಿದೆ'. "ಸೆಪ್ಟೆಂಬರ್ 13 ರಂದು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಭಾರತ–ಅಫ್ಘಾನಿಸ್ತಾನ ಮೊದಲ ಟಿ20ಐ ನಿಗದಿಯಂತೆ ನಡೆಯಲಿದೆ" ಎಂದು ಡಿಡಿಸಿಎ ಮಾಹಿತಿ ನೀಡಿದೆ. "ದೆಹಲಿ ಸಂಚಾರ ಪೊಲೀಸರೊಂದಿಗೆ ನಡೆದ ಸಭೆಯ ನಂತರ, ಡಿಡಿಸಿಎಗೆ ಅಗತ್ಯವಿರುವ ಎಲ್ಲಾ ಬೆಂಬಲ ಮತ್ತು ವ್ಯವಸ್ಥೆಗಳ ಭರವಸೆ ನೀಡಲಾಗಿದೆ. ಯಾವುದೇ ಮುಂದೂಡಿಕೆ ಇಲ್ಲ" ಎಂದು ಅದು ಹೇಳಿದೆ. ವಾರಾಂತ್ಯದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಗೆ ವ್ಯಾಪಕ ಸಂಚಾರ ಮತ್ತು ಭದ್ರತಾ ವ್ಯವಸ್ಥೆ ಉಲ್ಲೇಖಿಸಿ, ಆರಂಭಿಕ ಪಂದ್ಯವನ್ನು ಮರು ನಿಗದಿಪಡಿಸುವಂತೆ ದೆಹಲಿ ಸಂಚಾರ ಪೊಲೀಸರು ಡಿಡಿಸಿಎಗೆ ಸೋಮವಾರ ಮನವಿ ಮಾಡಿದ್ದರು.

# ಮಹಿಳಾ ಜೂನಿಯರ್ ಏಷ್ಯಾ ಕಪ್ ಹಾಕಿಯಲ್ಲಿ ಪಾಕಿಸ್ತಾನವನ್ನು 19–0 ಗೋಲುಗಳಿಂದ ಸೋಲಿಸಿ ಸೆಮಿಫೈನಲ್‌ಗೆ ಭಾರತ ಲಗ್ಗೆ




**ನವದೆಹಲಿ, ಸೆ.10:** ಗುರುವಾರ ನಡೆದ AHF ಜೂನಿಯರ್ ಏಷ್ಯಾ ಕಪ್ 2026 ಟೂರ್ನಮೆಂಟ್‌ನ ಸೆಮಿಫೈನಲ್‌ಗೆ ಭಾರತ ಮಹಿಳಾ ಹಾಕಿ ತಂಡವು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು 19–0 ಗೋಲುಗಳಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ಗುರುವಾರ ಮೋಕಿಯಲ್ಲಿ ನಡೆದ ಪಾಕಿಸ್ತಾನವನ್ನು 19–0 ಗೋಲುಗಳಿಂದ ಸೋಲಿಸುವ ಮೂಲಕ ಭಾರತ ಮಹಿಳಾ ಜೂನಿಯರ್ ಏಷ್ಯಾ ಕಪ್ 206 ರ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು. ಆರಂಭದಿಂದ ಕೊನೆಯವರೆಗೆ ಭಾರತ ಪ್ರಾಬಲ್ಯ ಸಾಧಿಸಿತು, ನಿರಂತರ ಆಕ್ರಮಣಕಾರಿ ಪ್ರದರ್ಶನ ನೀಡಿ ಪಂದ್ಯಾವಳಿಯ ಅತಿದೊಡ್ಡ ಗೆಲುವುಗಳಲ್ಲಿ ಒಂದನ್ನು ದಾಖಲಿಸಿತು. ಭಾರತ 19 ಗೋಲುಗಳನ್ನು ಗಳಿಸಿತು, 18 ಪೆನಾಲ್ಟಿ ಕಾರ್ನರ್ಗಳು ಮತ್ತು ಒಂದು ಪೆನಾಲ್ಟಿ ಸ್ಟ್ರೋಕ್ ಗಳಿಸಿತು, ಆದರೆ ಪಾಕಿಸ್ತಾನವು ಒಂದು ಗೋಲು, ಪೆನಾಲ್ಟಿ ಕಾರ್ನರ್ ಅಥವಾ ಪೆನಾಲ್ಟಿ ಸ್ಟ್ರೋಕ್ ಅನ್ನು ಗಳಿಸಲು ಸಾಧ್ಯವಾಗಲಿಲ್ಲ. ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ಕೊರಿಯಾ ಮತ್ತು ಮಲೇಷ್ಯಾದ ವಿಜೇತರನ್ನು ಎದುರಿಸಲಿದೆ. ಭಾರತವು ಆರಂಭಿಕ ಸೀಟಿಯಿಂದಲೇ ಸ್ಪರ್ಧೆಯಲ್ಲಿ ಪ್ರಾಬಲ್ಯ ಸಾಧಿಸಿತು, ಮೊದಲ ಕ್ವಾರ್ಟರ್ನಲ್ಲಿ ಐದು ಗೋಲುಗಳನ್ನು ಗಳಿಸಿತು, ಎರಡನೇ ಕ್ವಾರ್ಟರ್‌ನಲ್ಲಿ ಐದು, ಮೂರನೇ ಕ್ವಾರ್ಟರ್‌ನಲ್ಲಿ ಮೂರು ಮತ್ತು ಅಂತಿಮ ಕ್ವಾರ್ಟರ್‌ನಲ್ಲಿ ಆರು ಗೋಲುಗಳನ್ನು ಗಳಿಸಿ ಸಮಗ್ರ ಗೆಲುವು ದಾಖಲಿಸಿತು ಮತ್ತು ಕೊನೆಯ ನಾಲ್ಕರಲ್ಲಿ ತನ್ನ ಸ್ಥಾನವನ್ನು ಕಾಯ್ದಿರಿಸಿತು.

